CC-O. In Public Domain. Digitized by eGangotri

ರಾಣಿ

ಬಿ. ಪುಟ್ಟಸ್ವಾಮಯ್ಯ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಟನೆ ೧೭.೦

ರಾಣಿ

ಜಾನಪದ ನೃತ್ಯ ರೂಪಕ

ಲೇಖಕರು

ಬಿ. ಪುಟ್ಟಸ್ವಾಮಯ್ಯ

ಪ್ರಕಾಶಕರು

ಶಾರದಾ ಪ್ರಕಟನಾಲಯ

ಅರಳೆಪೇಟೆ : : ಬೆಂಗಳೂರು—೫೩

Sri Vidyabharathi Book Centre, Sringeri

CC-O. In Public Domain. Digitized by eGangotri

RANI Rural Dance Drama in Three Acts, by B. Puttasamaya. Pages 8+76. Published by Sharada Prakatanalaya, Cottonpet, Bangalore-53

Price : Rs. 2-50

ಎಲ್ಲ ಹಕ್ಕುಗಳೂ ಲೇಖಕರಿಗೆ ಸೇರಿವೆ

(ಈ ರೂಪಕವನ್ನು ರಂಗದ ಮೇಲೆ ಆಡಬಯಸುವವರು ಪ್ರತಿ ಪ್ರದರ್ಶನಕ್ಕೆ ರೂ. ೫೦ ರಂತೆ ಸಂಭಾವನೆಯನ್ನು ಬಿ. ಪುಟ್ಟಸ್ವಾಮಯ್ಯ, ನಂ. ೪೪, ಮೊದಲನೆಯ ಅಡ್ಡರಸ್ತೆ, ಶ್ರೀರಾಮಪುರ, ಬೆಂಗಳೂರು-೨೧ ಈ ವಿಳಾಸಕ್ಕೆ ಕಳುಹಿಸಿ ಅನುಮತಿ ಪಡೆಯತಕ್ಕದ್ದು)

ಮುದ್ರಣ

ಬೆಂಗಳೂರು-೨೦

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ

ಪಾತ್ರವರ್ಗ

ಸೌಗಂಧಿಕಾ	ರಾಣಿ
ಹರ್ಷವರ್ಧನ	ರಾಜ
ಕಾತ್ಯಾಯನ	ಮಂತ್ರಿ
ಮೇಧಾತಿಥಿ	ರಾಜಪುರೋಹಿತ
ಪ್ರಣವಕುಮಾರ	ಮಂತ್ರಿಕುಮಾರ
ರಾಗಿಣಿ, ರಂಜಿನಿ	ರಾಣಿಯ ಸಖಿಯರು
ವಸಂತ	ಸೂತ್ರಧಾರ
ಚಂಪಾ	ನಟಿ
ಮಂಗಮ್ಮ	ಮಂತ್ರಸಾನಿ

ಮೋಳದವರು, ಸಾಮಂತರು, ಭಟರು ಮುಂತಾದವರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಜಾನಪದ ಶೈಲಿಯ "ರಾಣಿ" ರೂಪಕದ ರಚನೆಗೆ ಪ್ರೇರಣೆ ಕೊಟ್ಟ ಕೆಲವು ಪ್ರಸಂಗಗಳನ್ನ ಈಗ ನೆನೆಯಬೇಕಾಗಿದೆ.

ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡಮಿಯು ೧೯೭೩ನೆಯ ವರ್ಷದ ಫೆಬ್ರವರಿ ತಿಂಗಳಲ್ಲಿ ಬಿಜಾಪುರದಲ್ಲಿ ಏರ್ಪಡಿಸಿದ್ದ ಮೂಡಲ ಪಾಯದ ಜಾನಪದ ನಾಟಕೋತ್ಸವದಲ್ಲಿ ಅತಿಥಿಯಾಗಿ ಭಾಗವಹಿಸುವ, ಹಾಗೂ ಆ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ತಜ್ಞರು ಮಾಡಿದ ಭಾಷಣಗಳನ್ನು, ಓದಿದ ಪ್ರಬಂಧಗಳನ್ನು ಅಕಾಡಮಿಯವರಿಯಿಂದ ಪ್ರಕಟನೆಗಾಗಿ ಸಂಪಾದಿಸುವ ಅವಕಾಶ ನನಗೆ ದೊರಕಿತು. ಜಾನಪದ ನಾಟಕಗಳಲ್ಲಿ ಭಾರತೀಯ ಪರಂಪರೆ ಜೀವಂತವಾಗಿ ಉಳಿದಿರುವುದನ್ನು ಕಂಡು ಆಶ್ಚರ್ಯ ಚಕಿತನಾದೆ. ಆ ಶೈಲಿಯ ನಾಟಕವೊಂದನ್ನು ರಚಿಸಲು ನಿರ್ಧರಿಸಿಕೊಂಡೆ.

ಪಾಶ್ಚಾತ್ಯ ಸಂಪ್ರದಾಯದ ಪ್ರಭಾವದಿಂದ ರೂಪುಗೊಂಡ ವೃತ್ತಿ ಹಾಗೂ ಕಲಾವಿಲಾಸಿ ಸಂಸ್ಥೆಗಳ ನಾಟಕಗಳನ್ನು ಮೆಚ್ಚಿದ ನಾಗರಿಕ ಪ್ರೇಕ್ಷಕರಿಗೆ ಜಾನಪದ ಶೈಲಿಯ ನಾಟಕಗಳು ರುಚಿಸುವುವೇ ಎಂಬ ಸಂದೇಹ ಕೊಂಚ ಕಾಲ ನನ್ನ ಲೇಖನಿಯನ್ನು ಸ್ಥಗಿತಗೊಳಿಸಿತು. ಈ ಅವಧಿಯಲ್ಲಿ ನಗರದಲ್ಲಿ ಪ್ರದರ್ಶಿತವಾದ ಜಾನಪದ ಶೈಲಿಯ "ಜೋಕುಮಾರಸ್ವಾಮಿ", "ಹಯವದನ" "ಸಂಗ್ಯಾಬಾಳ್ಯಾ", ನಾಟಕ ಪ್ರಯೋಗಗಳು ಗ್ರಾಮೀಣ ರಸಿಕರಂತೆ ನಾಗರಿಕ ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾದುದನ್ನು ಕಂಡು ನನ್ನ ಉತ್ಸಾಹ ಮತ್ತೆ ಎಚ್ಚೆತ್ತಿತು. ಅದರ ಫಲವಾಗಿ "ರಾಣಿ" ವಾಚಕರೆದುರಿಗೆ ನಿಂತಿದ್ದಾಳೆ.

ಈ ಜಾನಪದ ಕಥಾನಕದ ಮೂಲ ರೂಪ ನನಗೆ ದೊರಕಿದ್ದು ವೈದಿಕ ರತ್ನ ಕೆ. ಎಸ್. ಶಿವರುದ್ರಸ್ವಾಮಿ ಇವರಿಂದ. ಪ್ರಜಾವಾಣಿ ಸಾಪ್ತಾಹಿಕಪುರವಣಿಯ ಸಂಪಾದಕರಾದ ಶ್ರೀ ಬಿ. ವೈಕುಂಠರಾಜು ಇವರು ರೂಪಕದ ಹಸ್ತಪತ್ರಿಯನ್ನು ಓದಿ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದೇ ಪತ್ರಿಕೆಯ ಚಿತ್ರ ಕಲಾವಿದ ಶ್ರೀ ರಮೇಶ್ ಇವರು, ಹೆಣ್ಣಿನ ಬಾಹ್ಯ, ಅಂತರ ಮತ್ತು ವ್ಯವಹಾರಿಕ ಮುಖಗಳನ್ನು ಕಲಾತ್ಮಕವಾಗಿ ಚಿತ್ರಿಸುವ ಹೊದಿಕೆಯ ಮುಖಚಿತ್ರವನ್ನು ರಚಿಸಿದ್ದಾರೆ. ನವಭಾರತ ಪ್ರೆಸ್ಸಿನ ಒಡೆಯರಾದ ಶ್ರೀ ಓ. ಸುದರ್ಶನಂ ಇವರು ಅತ್ಯಲ್ಪ ಅವಧಿಯಲ್ಲಿ ಹೊತ್ತಿಗೆಯನ್ನು ಅಂದವಾಗಿ ಮುದ್ರಿಸಿದ್ದಾರೆ. ನನ್ನ ಎಲ್ಲ ಬರಹಗಳ ಪ್ರಕಟನೆಯ ಹೊಣೆಯನ್ನು ನಿರ್ವಹಿಸುತ್ತಿರುವ ಶಾರದಾ ಪ್ರಕಟನಾಲಯದ ಗೆಳೆಯ ಶ್ರೀ ಆರ್. ಬಸವರಾಜ ಮತ್ತು ಶ್ರೀ ಜಿ. ಬಸವರಾಜ ಇವರು ತಮ್ಮ ಗ್ರಂಥಮಾಲಿಕೆಯಲ್ಲಿ ಈ ನಾಟಕವನ್ನು ಪ್ರಕಟಿಸಿದ್ದಾರೆ.

ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ದಿನಾಂಕ—೭—೫—೧೯೭೩
ಬೆಂಗಳೂರು.

ಬಿ. ಪುಟ್ಟಸ್ವಾಮಯ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ

ಅಂಕ ೧

ತೆರೆ ಸರಿದಾಗ ತಳಿರು ತೋರಣಗಳಿಂದ ಅಂಲಕೃತವಾದ ರಂಗದ ನಡುವೆ ದಿಂಬು ಹಾಸುಗಳಿಂದ ಸಿಂಹಾಸನದಂತೆ ರಚಿತವಾದ ಪೀಠ ಬರಿದಾಗಿರುತ್ತದೆ.

ಬಲಭಾಗದ ರಂಗಶಿರ್ಷದಲ್ಲಿ ಕುಳಿತಿರುವ ಮೇಳದವರು ಪ್ರಸ್ತಾವನಾ ಗೀತವನ್ನು ಆರಂಭಿಸುತ್ತಾರೆ. ಸೂತ್ರಧಾರ ವಸಂತ, ರಾಗಿಣಿ, ರಂಜಿನಿ ಎಂಬ ನರ್ತಕಿಯರು ನಾಟ್ಯದಿಂದ ರಂಗವನ್ನು ಪ್ರವೇಶಿಸಿ ಭಾವಾನುಗುಣವಾಗಿ ನರ್ತಿಸುತ್ತಾರೆ.

ಪ್ರಸ್ತಾವನಾ ಗೀತ

ಸ್ವಾಗತವು ನಿಮಗೆಲ್ಲ ಸನ್ಮಾನ್ಯ ಪ್ರೇಕ್ಷಕರೆ,
ಜಾನಪದ ಬಯಲಾಟ ನಾಟಕವಿದು.

ಹಳೆಯ ಬಾಟಲಿನಲಿ ಹೊಸ ಮಧುವನಿಟ್ಟಂತೆ
ನಿಮಗರ್ಪಿಸುವೆನಿದನು ಕೈಯ ಮುಗಿದು.

ಇಸ್ಪೀಟನೋಲೆಗಳ ರಾಜರಾಣಿಯರಿವರು
ಜೀವನದೊಳೆಲ್ಲಿಯೂ ಕಾಣಸಿಗರು.

ಇವರ ನಡೆನುಡಿ ಬಾಳಿನೊಳಗೊಂದು ಮೋಜುಂಟು,
ಅದ ನಿಮ್ಮ ಮುಂದೆ ನಾವೀಗ ನಟಿಸುವೆವು.

ಸತ್ಯದಾ ನಗ್ನತೆಗೆ – ಅಸತ್ಯದಾ ಹೊರೆಯೇಕೆ ?
ನಿತ್ಯನಿರ್ಮಲಗೇಕೆ ಕಾಲದಳತೆ?

ಸರ್ವಕಾಲ ಸಮಾನ ಸರ್ವ ಕಾಲಾತೀತ
ಕಾಲ ಒಂದಿರಲಾಗ ನಡೆಯಿತು ಕಥೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಕಥೆಯ ಪಾತ್ರಗಳು ನಿಮ್ಮ ಮುಂದಾಡುತಿವೆ
ಕುಣಿತದಲಿ ರೂಪಿಸುತೆ ತಮ್ಮ ಬದುಕ.
ಮೆಚ್ಚುವಿರೋ ಮೆಚ್ಚರೋ ನೀವು ನಾಟಕ ನೋಡಿ,
ಆ ಚಿಂತೆ ನಮಗಿಲ್ಲ ಇನ್ನುತನಕ

[ನರ್ತನ ನಡೆಯುತ್ತಿರುವಂತೆ ಮಂತ್ರಸಾನಿ ಮಂಗಮ್ಮ ರಂಗದ ಎಡಭಾಗದಿಂದ ಪ್ರವೇಶಿಸಿ ನೃತ್ಯವನ್ನು ನೋಡಿ ಬೆರಗುವಡೆದು ಮೂಗಿನ ಮೇಲೆ ಬೆರಳಿಟ್ಟು ಶಿಲಾ ಪ್ರತಿಮೆಯಂತೆ ನಿಲ್ಲುವಳು, ವಸಂತ ಮತ್ತು ಚಂಪಾ ಮಂಗಮ್ಮನ ಬಳಿ ಬಂದು ಮೂಕಾಭಿನಯದಿಂದ ಅವಳನ್ನು ಎಚ್ಚರಗೊಳಿಸಲು ಪ್ರಯತ್ನಿಸುವರು. ಚಂಪಾ ವಿಫಲೆಯಾದಾಗ ವಸಂತ ಗಹಗಹಿಸಿ ನಕ್ಕು, ಚಂಪಳ ಸೆರಗಿನ ಕೊನೆಯನ್ನು ಮೊನೆಯಾಗಿ ಸುತ್ತಿ, ಮಂಗಮ್ಮನ ಮೂಗಿನ ಹೊಳ್ಳೆಯಲ್ಲಿಟ್ಟು ಆಡಿಸುವನು]

ಮಂಗಮ್ಮ: (ಎಚ್ಚತ್ತು) ಏನಾ ಇದು! ಮುಲ್ಮುಲಾ ಅಂತೈತಿ. (ಕಣ್ತೆರೆದು) .... ಯಾರಾ ನೀವು ?

ವಸಂತ: ಯಾಕ್ರೀ ಅವ್ವ? ಗುರುತು ಹತ್ತಲಿಲ್ಲೇನು ?

ಮಂಗಮ್ಮ: ಹತ್ತತಾ ಐತಿ. ವಸಂತ ಅಲ್ಲೇನೋ ನೀನು ; ಅರಮನೆ ಊಳಿಗದ ಆಳು, ನಾಟ್ಯಶಾಲಿ ಸೂತ್ರಧಾರ. ಮತ್ತೆ ಇವಳು .... ನಿನ್ನ ಹೆಂಡ್ತಿ ಚಂಪಾಸಾನಿ.

ಚಂಪಾ: (ರೋಷದಿಂದ) ಏಯ್ ಮುದುಕಿ, ನನ್ನ ಸಾನಿ ಗೀನಿ ಅಂದ್ರ ; ....

ಮಂಗಮ್ಮ: ನಿನ್ ಅಂತಸ್ತಾ ಕಡಿಮೆ ಅಗ್ತದೇನು? ನಾನು ಮಂಗಮ್ಮನಾಗಿ ಅರಮನೆಗೆ ಬಂದು ಮಂತ್ರಸಾನಿ ಆಗಬೇಕಾದ್ರ........... ಎರಡು ಹತ್ತು ವರ್ಷ ದುಡ್ದೀನಿ.

ವಸಂತ: ಒಂದೀಟು ಸಾವರಿಸಿಕೊ ಮಂಗವ್ವ. ತಿಳೀದಹೆಣ್ಣು ! ಜಿಗೀತಿರೋ ಪ್ರಾಯ, ಗಬ್ಬಕ್ಕೆ ಬಂದ ಆಕಳಿನ ಹಾಂಗ ಎಲ್ಲರ ಮೇಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾರತಾಳ.

ಚಂಪಾ : ಹಂಗಾರ ಈ ಮುದುಕಿ ಅಂದದ್ದನ್ನ ಕೇಳತಾ ಸುಮ್ಮನಿರ ಬೇಕಾ ನಾನು ?

ವಸಂತ : ಸುಮ್ಮನಿರದಿದ್ರ ಕುಣಿ. ನಿಜವಾಗಿ ಸಾನಿಯೇ ಆಗ್ತಿ.

ಚಂಪಾ : (ಬೇಸರದಿಂದ) ನಿಮ್ಮ ಸಂಗಡ ಬಂದ್ರೆ ಹೀಂಗ, ಮಾನ ಮರ್ಯಾದೆ ಗಾಳಿಗೆ ತೂರಕೋ ಬೇಕು.

ವಸಂತ : (ಮಂತ್ರಸಾನಿಯೊಡನೆ ಅನುನಯದಿಂದ) ಈವೊತ್ತು ನೀನಿಲ್ಲಿ ಬರಬಾರದಾಗಿತ್ತು ಮಂಗವ್ವ.

ಮಂಗಮ್ಮ : ಅದೇಕಾ !........ ರಾಣಿತಾಯಿ ಹೇಳ್ಯಾರ, ಅರಮನೇಲಿ ನಾನು ಎಲ್ಲಿ ಬೇಕಾದ್ರೂ ತಿರುಗಾಡಬೋದು ಅಂತ.

ವಸಂತ : ಅದು ಸಾಮಾನ್ಯ ಸಂದರ್ಭಗಳಿಗೆ ಕೊಟ್ಟ ಪರವಾನಿಗಿ ಮಂಗವ್ವ. ಈವೊತ್ತು ಇಲ್ಲಿ ಒಂದು ವಿಶೇಷ ಸಂದರ್ಭ.

ಮಂಗಮ್ಮ: ವಿಶೇಷ ಅಂದ್ರ ? ರಾಣಿತಾಯಿ ಸೀಮಂತಾನ ?

ವಸಂತ : (ನಕ್ಕು) ಸೀಮಂತ ಅಲ್ಲ. ಸಾಮಂತರ ಸಭಾ; ಯುದ್ಧಕ್ಕೆ ಹೋಗಿರೋ ಮಹಾರಾಜರಿಂದ ಒಂದು ಮಹತ್ವದ ಓಲೆ ಬಂದದ, ಅದನ್ನ ಓದಲಿಕ್ಕ ರಾಣಿತಾಯಿ ಸಾಮಂತರ ಸಭಾ ಕರದಾರೆ.

ಮಂಗಮ್ಮ: ಸಭಾ ನಡದೀತಾ ಇಲ್ಲಿ ! .... ನಾನದನ್ನ ನೋಡ ಬೇಕು ವಸಂತಣ್ಣ.

ವಸಂತ : ಹಂಗಾರ ನನ್ನ ಸಂಗಡ ಬಾ. ಆ ಹಿಂದಿನ ಕೋಲೀಲಿ ಜಾಲಂಧ್ರದ ಹತ್ತಿರ ಕೂಡ್ರಿಸ್ತೀನಿ.

(ಎಂದು ಕರಕೊಂಡು ಹೋಗುವನು)

[ಚಂಪಾ ಅವರು ಹೋದಕಡೆ ನೋಡುತ್ತ ನೆಟಿಕೆ ಮುರಿದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುವಳು. ಅನಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಕಾಭಿನಯದಿಂದ ಕನ್ನಡಿಯಲ್ಲಿ ಮುಖ ನೋಡಿಕೊಂಡು ಪ್ರಸಾಧನ ಕಾರ್ಯದಲ್ಲಿ ತೊಡಗುವಳು.]

ವಸಂತ : (ಪ್ರವೇಶಿಸಿ ಅಣಕದ ಧ್ವನಿಯಿಂದ) ನಿನ್ನ ಅಲಂಕಾರ ಮುಗಿದಿದ್ದರೆ ಹೀಗೆ ಬಾ, ಆರ್ಯೆ.

ಚಂಪಾ : (ಅದೇ ಅಣಕದ ರೀತಿಯಲ್ಲಿ) ಓಹೋ! ಸೂತ್ರಧಾರ ಮಹಾಶಯರು! ಮಂತ್ರಸಾನೀನ ಕರಕೊಂಡು ಎಲ್ಲಿ ಹೋಗಿದ್ರೋ?

ವಸಂತ : ....ಮಂತ್ರಾಲಯಕ್ಕೆ .... ಯಾರ ಕಣ್ಣಿಗೂ ಬೀಳದ ಹಾಗೆ ಆ ಹಿಂದಿನ ಕೋಲಿಯಲ್ಲಿ ಕೂಡ್ರಿಸಿಬಂದೆ.

ಚಂಪಾ : ರಾಣೀತಾಯಿಗೆ ಸೀಮಂತ ಅಂತಿದ್ದಳಲ್ಲ, ಆ ಮುದುಕಿ! ರಾಣಿ ಗರ್ಭಿಣಿಯೇ........ ಇಷ್ಟು ವರ್ಷದ ಮೇಲೆ?

ವಸಂತ : ಮಂತ್ರಸಾನಿ ಹೇಳತಿದ್ದದ್ದು ಇಪ್ಪತ್ತು ವರ್ಷಗಳ ಹಿಂದಿನ ಮಾತು.

ಚಂಪಾ : ಏನಾಯ್ತು ಆಗ?

ವಸಂತ : ರಾಣಿ ಗರ್ಭಿಣಿಯಾಗಿದ್ದಳು. ಹೆರಿಗೆ ಕಷ್ಟವಾಗಬಹುದು ಎನ್ನೋ ಭಯದಿಂದ ಮಹಾರಾಜರು ಮಳಯಾಳದಿಂದ ಈ ಮಂತ್ರಸಾನೀನ ಕರಸಿದ್ರು.

ಚಂಪಾ : ಆ ಮೇಲೆ?

ವಸಂತ : ಹೆರಿಗೆ ಅಯ್ತು. ಅದರೆ ಹೊಲೆಮನೇಲೆ ಮಗೂನ ಜೀವ ಕಸಕೊಂಡಿದ್ದ ಜವರಾಯ. ಇದು ನಾನು ಕೇಳಿದ ಕಥೆ.

ಚಂಪಾ : ಇದರಲ್ಲಿ ಮಂತ್ರಸಾನಿ ಪಾತ್ರ?

ವಸಂತ : ಕೂಸು ಸತ್ತು ಹುಟ್ಟಿದರೆ ಮಂತ್ರಸಾನಿ ಹೊಣೆಯೆ? ಆದ್ರೂ ಮಹಾರಾಜರು ಕೋಪದಿಂದ ಮಂಗಮ್ಮನ್ನ ಸೆರೆಯಲ್ಲಿಟ್ರು. ಅವಳ ಆರೋಗ್ಯ ಕೆಡತು. ಹುಚ್ಚು ಹಿಡೀತು. ಮಹಾರಾಣಿ ದಯದಿಂದ ಸೆರೆ ಬಿಡಿಸಿ ಅರಮನೇಲಿ 'ಊಳಿಗ'ಕ್ಕೆ ಇಟ್ಟುಕೊಂಡರು.

[ನೇಪಥ್ಯದಲ್ಲಿ ಜನರ ಕೋಲಾಹಲ. "ಬೇಗ ನಡೀರಿ. ಇನ್ನೇನು

Sri Vidyabharathi Book Centre, Sringeri

 CC-O. In Public Domain. Digitized by eGangotri

ಸವಾರಿ ಚಿತ್ತೈಸುತ್ತೆ" "ಮಂತ್ರಿಮಗನೇ ! ಮಹಾರಾಣಿಯೇ !" ಎಂಬ ಮಾತುಗಳು ಕೇಳಿಸುತ್ತವೆ.]

ವಸಂತ : ಮೆರವಣಿಗೆ ಬಂದ ಹಾಗಿದೆ. ಬೇಗ ನಡೆ.

[ಎಂದು ಚಂಪಳೊಡನೆ ಹೋಗುತ್ತಿದ್ದಂತೆ ಬಿರುದು ಬಾವಲಿಗಳನ್ನು ಹಿಡಿದ ಭಟರನ್ನು ಹಿಂದಿಟ್ಟುಕೊಂಡು ರಾಜಪುರೋಹಿತ ಪ್ರವೇಶಿಸುವನು.]

ಪುರೋಹಿತ : ಏಯ್ ವಸಂತ, ಬಿರುದು ಬಾವಲಿಗಳನ್ನು ಹಿಡಿದ ಈ ಭಟರನ್ನು ಸಿಂಹಾಸನದ ಹಿಂದೆ ಸಾಲಾಗಿ ನಿಲ್ಲಿಸು.

ವಸಂತ : ಅಜ್ಞೆ ಪೂಜಾರಪ್ಪ.

ಪುರೋಹಿತ : ಈಗ ಪೂಜಾರಪ್ಪ ಅಲ್ಲ ನಾನು, ರಾಜ ಪುರೋಹಿತ. ನನ್ನನ್ನ ಧಣೇರ ಅಂತ ಕರೀಬೇಕು.

ವಸಂತ : ಅಜ್ಞೆ ಧಣೀರ.

ಪುರೋಹಿತ : ಈಗ ಹೇಳು, ಸಂಗಡಿರೋ ಈ ಹೆಣ್ಣು ಯಾರು ?

ವಸಂತ : ನಾನು ಈ ನಾಟಕದ ಸೂತ್ರಧಾರ. ಇವಳು ನನ್ನ ನಟಿ.

ಪುರೋಹಿತ : ನಟಿ ! ಮೇಕಪ್ಪೇ ಮಾಡಿಕೊಂಡಿಲ್ಲ ? ಪಾತ್ರ ಕೊಡಲಿಲ್ಲೇನು ಇವಳಿಗೆ ?

ವಸಂತ : ಇವಳು late commer ಧಣೇರ, ಪಾತ್ರಗಳ ಹಂಚಿಕೆ ಮುಗಿದ ಮೇಲೆ ಬಂದಳು.

ಪುರೋಹಿತ : ಒಳ್ಳೇದೇ ಅಯ್ತು. ಸದ್ಯಕ್ಕಿವಳು ನನ್ನ ಪಕ್ಕದಲ್ಲಿರಲಿ. ನಾನು ಹೇಳಿದ ಕೆಲಸ ಮಾಡು.

[ಎಂದು ಚಂಪಳ ಕೈಹಿಡಿದೆಳೆದು ಪಾರ್ಶ್ವದಲ್ಲಿ ನಿಲ್ಲಿಸಿಕೊಂಡು ಭಟರ ಕಡೆಗೆ ಕೈ ತೋರಿಸುವನು. ವಸಂತ ಭಟರನ್ನು ಸಿಂಹಾಸನದ ಹಿಂದೆ ಸಾಲಾಗಿ ನಿಲ್ಲಿಸುತ್ತಿದ್ದಂತೆ ಸಚಿವ ಸಾಮಂತರು ಪ್ರವೇಶಿಸುವರು]

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರೋಹಿತ: ಹೀಗೆ ದಯಮಾಡಿಸಬೇಕು, ಸಚಿವ ಸಾಮಂತರು. ಸಿಂಹಾಸನದ ಎಡಬಲಗಳಲ್ಲಿ ನಿಮ್ಮ ಸ್ಥಾನ.

[ವಸಂತ ಅವರನ್ನು ಸಿಂಹಾಸನದ ಎಡಬಲಗಳಲ್ಲಿ ನಿಲ್ಲಿಸುವನು.]

ಪುರೋಹಿತ: ಈಗ ರಂಗ ರಾಜಸಭೆ ಹಾಗೆ ಕಾಣ್ತಿದೆ. ಅಲ್ವೆ ನಟಿ?

ಚಂಪಾ: ನನ್ನ ಹೆಸರು ನಟಿ ಅಲ್ಲ, ಚಂಪಾ.

(ಮುಖ ತಿರುಗಿಸುವಳು)

ಪುರೋಹಿತ: ಮುಖ್ಯಮಂತ್ರಿ ಕಾತ್ಯಾಯನರು ಸ್ವಲ್ಪ ಮುಂದೆ ಬಂದು ಸಿಂಹಾಸನದ ಪಾರ್ಶ್ವದಲ್ಲಿ ನಿಲ್ಲತಕ್ಕದ್ದು.

[ಕಾತ್ಯಾಯನ ಮುಂದೆ ಬಂದು ಪುರೋಹಿತನಿಗೆ ವಂದಿಸುವನು, ಪ್ರತಿವಂದನೆ]

ಪುರೋಹಿತ: ಈಗ ಮಹಾರಾಜರ ವಿಶೇಷ ದೂತರಾಗಿ ರಾಜಧಾನಿಗೆ ಆಗಮಿಸಿರುವ ಪ್ರಣವಕುಮಾರರ ರಂಗ ಪ್ರವೇಶ.... ವಸಂತ, ರಾಜದೂತರನ್ನು ಸಭೆಗೆ ಬಿಜಯಮಾಡಿಸು.

[ವಸಂತ ಮತ್ತು ಚಂಪಾ ರಂಗದ ಬಲ ಪಾರ್ಶ್ವದಿಂದ ಭಟ ಪರಿವಾರದೊಡನೆ ಪ್ರಣವ ಕುಮಾರನನ್ನು ಬಿಜಯ ಮಾಡಿಸುವರು]

ಭಟರ ಮೇಳಗೀತ

ಬಂದಾನ ಕಡುಗಲಿ ಮಂತ್ರಿ ಕುಮಾರ,
ತಂದಾನ ವಿಜಯದ ವಾರ್ತೆಯ ಸಾರ.

ಮುಖದಲ್ಲಿ ಮಿದುನಗೆ, ಕಣ್ಣಲ್ಲಿ ಮಿಂಚು,
ಕೈಯಲ್ಲಿ ಕರವಾಳ ಕದನದ ಸಂಚು,
ಹೂಮಳೆಗೆರೆವರು ದೇವತರು ಮೇಲೆ,
ವೈರಿ ಹೆಂಗಳ ಕಿವಿಗಾಯ್ತು ಬಿಚ್ಚೋಲೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ರಣದಲ್ಲಿ ಕಾದಾಡಿ ಬಂದಾನ ವೀರ,
ಸಾವಿರ ರಾವುತದಳದ ಸರದಾರ,
ಕಿರು ಮೀಸೆ ತಿರುವಿ ಮಾತಾಡೋ ಮೊನೆಗಾರ,
ಮಡದೀರ ಸೆರಗಿನ ಮಿರುಗು ಬಂಗಾರ.

ಮೂಡಣ ದಿಸೆಯಲ್ಲಿ ಹೊಸ ಚುಕ್ಕಿ ಹುಟ್ಟಿ,
ನಾಡವರ ಮನದಿ ಹರುಷ ಹೆಪ್ಪುಗಟ್ಟಿ,
ಮುಡಿದ ಮಲ್ಲಿಗೆ ಇವನ ಎದೆ ತೊಡವಾಗೆ,
ಕುಣಿವಳು ಜಯಲಕುಮಿ ನವಿಲಿನ ಹಾಗೆ.

ಪುರೋಹಿತ: ಹೀಗೆ ದಯಮಾಡಿಸಬೇಕು, ರಾಜದೂತ ಪ್ರವಣ ಕುಮಾರರು.

ಪ್ರವಣಕುಮಾರ: (ಪುರೋಹಿತನ ಮೇಲೆ ಉಪೇಕ್ಷಾ ದೃಷ್ಟಿ ಹಾರಿಸಿ ಮಂತ್ರಿ ಕಾತ್ಯಾಯನನಿಗೆ ನಮಸ್ಕರಿಸಿ) ಪ್ರಣವ ಕುಮಾರನು ವಂದಿಸುವನು ಅಪ್ಪಾಜಿ.

ಕಾತ್ಯಾಯನ: ಚಿರಾಯುವಾಗು ಪುತ್ರ.

ಪ್ರವಣಕುಮಾರ: ವಿಜಯ ಶಾಲಿಯಾಗೆಂದು ಹರಿಸಿರಿ, ತಂದೆ.

ಕಾತ್ಯಾಯನ: ಹುಟ್ಟಾ ನೀನು ವಿಜಯ ಶಾಲಿ, ಪ್ರಣವಕುಮಾರ. ನಿನ್ನನ್ನು ಪುನಃ ಹರಸುವ ಅಗತ್ಯವಿಲ್ಲ.

ಪ್ರಣವಕುಮಾರ: ಆದರೂ........ಯುದ್ಧರಂಗದ ನನ್ನ ವಿಜಯ, ಈ ರಾಜ ಸಭೆಯ ಸಂಜು ಮಿಂಚಿನ ಬೆಳಕಿನಲ್ಲಿ ಮಲಿನವಾಗುವುದೇ ಎಂಬ ಚಿಂತೆ ನನಗೆ.

[ಎಂದು ವೈಗಾವಲಿನ ಭಟರೊಡನೆ ಎಡ ಭಾಗದ ರಂಗ ಶೀರ್ಷದಲ್ಲಿ ನಿಲ್ಲುವನು]

ಪುರೋಹಿತ: ಈಗ ರಾಣಿ ಸೌಗಂಧಿಕಾ ದೇವಿಯರ ರಂಗ ಪ್ರವೇಶ, ಸಮುಖದ ಸಖಿಯರಾದ ರಾಗಿಣಿ ರಂಜನಿಯರು ಸಂಗಡಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

(ರಾಗಿಣಿ ರಂಜನಿಯರು ವರ್ಣರಂಜಿತವಾದ ತೆರೆಮರೆಯಲ್ಲಿ ನೇಪಥ್ಯದಿಂದ ರಾಣಿಯನ್ನು ರಂಗಕ್ಕೆ ಬಿಜಯ ಮಾಡಿಸುವರು. ಮೇಳಗಾರ್ತಿಯರು ಹಾಡಿ ಕುಣಿಯುತ್ತಾ ಹಿಂದೆ ಬರುವರು)

ಮೇಳಗಾರ್ತಿಯರ ಗೀತ

ರಾಣಿ ಸೌಗಂಧಿಕಾ ಜನಮೆಚ್ಚುರಾಧಿಕಾ
ನೀನೆ ನಾಯಕಿ ಈ ನಾಟಕದ:
ಯೌವನ ಜಿತರತಿ, ಬಿಡೆಬಾಯ ಭಾರತಿ
ನಿನಗೆಣೆಯಾರು ಈ ಜಗದ.

ಹುಟ್ಟಿದೆ ಮಗಳಾಗಿ, ಬೆಳದೆ ಬಾಂಧವಿಯಾಗಿ,
ಬೆಳಗಿದೆ ಸೊಡರಾಗಿ ತವರ:
ಏರಿ ರಾಜನ ಮಂಚ, ಮುರಿದು ರಾಜಿಕ ಸಂಚ
ನೀನೆನಿಸಿದೆ ರಾಣಿ ಜನರ.

ತವರಿನ ಕೀರುತಿ, ಅರಮನೆಗಾರತಿ,
ಜಗ ಬೆಳಕು ನಂದಾದೀಪ:
ಪುರುಷ ಪುಂಗವರು ಪತಂಗದಂದದೆ ನಿನ-
ಗೆರಗಿ ಕಳೆವರು ತಮ್ಮ ರೂಪ.

[ಸಖಿಯರು ರಾಣಿಯನ್ನು ಬಲಭಾಗದ ರಂಗಶಿರ್ಷಕ್ಕೆ ಕರೆ ತಂದು ತೆರೆ ಸರಿಸುವರು.]

ಸಭಾಸದರು: ವಿಜಯೀಭವ ರಾಣಿ ಸೌಗಂಧಿಕಾ, ಜಯ ಪರಾಕು.

ರಾಣಿ: (ಸಭೆಗೆ ಕೈಮುಗಿದು ನಮಸ್ಕಾರ ಮಾಡಿ ಸಖಿಯರೊಡನೆ ಜನಾಂತಿಕ) ವೈಗಾವಲಭಟರೊಡನೆ ಪ್ರತ್ಯೇಕವಾಗಿ ನಿಂತಿರೋ ಆ ತರುಣ ಯಾರು?

ರಾಗಿಣಿ: ಗಿಳಿತೇರಿಂದ ಇಳಿದು ಬಂದ ಮನ್ಮಥನ ಹಾಗೆ ಕಾಣ್ತಿರೋ ಅವನೇ ರಾಜದೂತ ಪ್ರಣವ ಕುಮಾರ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಜಿನಿ: ಅವನನ್ನ ನೋಡಿದರೆ ಬಾಚಿ ತಬ್ಬಿ ಕೊಳ್ಳೋಣವೇ ಅನಿಸುತಿದೆ ನನಗೆ.

ರಾಣಿ: ನನಗೂ ಹಾಗನಿಸ್ತಿದೆ.

ರಾಗಿಣಿ: ಏನನಿಸುತಿದೆ ಸಖಿ ?

ರಾಣಿ: ಈ ಪ್ರತಿ ರೂಪ ಮನ್ಮಥನನ್ನ ಬಾಳಸೆರೆಯಲ್ಲಿ ಬಂಧಿಸಿಡಲಿ ಅಂತ.

ರಂಜಿನಿ: ಬಾಳಸೆರೆಗಿಂತ....(ಅಭಿನಯದಿಂದ ತೋಳ ಸೆರೆಯನು ಸೂಚಿಸುವಳು.)

ರಾಗಿಣಿ: ನಿನಗೆ ತಕ್ಕ ಯೋಚನೆ, ರಂಜಿನಿ.

ರಾಣಿ: (ತುಸು ಮುನಿಸಿಂದ) ನಿಮಗೆ ತಿಳಿದಿರೋದು ಅದೊಂದೆ, ಸಿಕ್ಕಿದವರನ್ನು ತೋಳ ಸೆರೆಗೆ ತಂದು ಕೊಳ್ಳೋದು. ನಾನು ಹೇಳಿದ ಬಾಳ ಸೆರೆಯೇ ಬೇರೆ.

ರಂಜಿನಿ
ರಾಗಿಣಿ } (ಆತುರದಿಂದ) ಅದೇನು ಹೇಳು ಸಖಿ ?

ರಾಣಿ: ಈಗ ಬೇಡ, ಯಥಾ ಸಮಯದಲ್ಲಿ....ನನ್ನನ್ನ ಸಿಂಹಾಸನ ದೆಡೆಗೆ ಕರೆದೊಯ್ಯಿರಿ.

ರಾಗಿಣಿ: (ಗಾಂಭೀರ್ಯದಿಂದ) ಮಹಾರಾಣಿಯವರು ಹೀಗೆ ದಯ ಮಾಡಿಸಬೇಕು.

[ರಾಗಿಣಿ ಮತ್ತು ರಂಜಿನಿ ನಾಟ್ಯದಿಂದ ರಾಣಿಯನ್ನು ಸಿಂಹಾ ಸನದೆಡೆಗೆ ಕರೆದೊಯ್ಯುವರು.]

ಪ್ರಣವಕುಮಾರ: (ಆ ನಾಟಕೀಯ ಮೆರವಣಿಗೆಯನ್ನು ನೋಡುತ್ತಾ ಸ್ವಗತ) ಎಂಥ ರೂಪ! ಎಂಥ ಲಾವಣ್ಯ! ರಾಣಿ ಮಧ್ಯಮವಯಸ್ಸಿನ ಹೆಂಗಸು ಅಂತ ಕೇಳಿದ್ದೆ. ನೋಡಿದರೆ ಯುವತಿಯರನ್ನ ನಾಚಿಸೋ ಮೈಕಟ್ಟು, ಯೌವನ ಶ್ರೀ. ನಕ್ಷತ್ರಗಳ ಹಾಗೆ ಹೊಳಗುತ್ತಿವೆ ಆ ಕಣ್ಣುಗಳು. ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈಯಲ್ಲಿ ಅರಗಿಳಿ, ಇನ್ನೊಂದು ಕೈಯಲ್ಲಿ ಲೀಲಾ ಕುಮಲ....ಆ ನಡಿಗೆಯ ವೈಯಾರವೋ! ನವಿಲು, ಹಂಸೆಗಳನ್ನ ನೀವಾಳಿಸಬೇಕು ಅದರೆದುರಿಗೆ. ಹಿಮಾಲಯದಷ್ಟು ದೊಡ್ಡದು, ಮೇರುವಿನಷ್ಟು ಎತ್ತರ, ಮಹಾರಾಜರ ಪುಣ್ಯ!

[ರಾಗಿಣಿ ರಂಜಿನಿಯರು ರಾಣಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಇಕ್ಕೆಳದಲ್ಲಿ ನಿಲ್ಲುವರು.]

ಪುರೋಹಿತ: ಅವಧಾರು ಮಹಾರಾಣಿ, ಮಹಾರಾಜರು ಯುದ್ಧ ರಂಗದಿಂದ ವಿಶೇಷ ಓಲೆಯೊಡನೆ ರಾಜದೂತನನ್ನು ಕಳುಹಿಸಿದ್ದಾರೆ. ಅನುಮತಿ ಇತ್ತರೆ ಸನ್ನಿಧಾನಕ್ಕೆ ಕರೆತರುತ್ತೇನೆ.

ರಾಣಿ: ಕರೆತನ್ನಿರಿ,

ಪುರೋಹಿತ: ಹೀಗೆ ಬನ್ನಿರಿ, ಪ್ರಣವಕುಮಾರರೆ (ಪ್ರಣವಕುಮಾರನನ್ನು ಸಿಂಹಾಸನದ ಬಳಿಗೆ ಕರೆದೊಯ್ದು) ಸನ್ನಿಧಾನಕ್ಕೆ ವಂದಿಸಿ, ಮೊಣಕಾಲೂರಿ ಕುಳಿತು, ತಲೆ ತಗ್ಗಿಸಿ, ತೋಳೆತ್ತಿ, ತೆರೆದ ಕೈಗಳಿಂದ ಓಲೆಯನ್ನು ಅರ್ಪಿಸತಕ್ಕದ್ದು....ಆಮೇಲೆ....

ರಾಣಿ: (ಸಿಡುಕಿನಿಂದ) ಆಮೇಲಿನ ವಿಚಾರ ಈಗೇಕೆ ಪುರೋಹಿತರೆ? ಸರಳರೇಖೆಯನ್ನ ವಕ್ರ ಮಾಡೋದರಲ್ಲಿ ನೀವು ಪಂಡಿತರು.

ಪುರೋಹಿತ: ತಪ್ಪಾಯಿತು, ಮಹಾರಾಣಿ

(ಕೆನ್ನೆ ಬಡಿದುಕೊಳ್ಳುವನು)

ಪ್ರಣವಕುಮಾರ: (ಪುರೋಹಿತ ಹೇಳಿದಂತೆ ವಂದಿಸಿ, ಕುಳಿತು ತೋಳೆತ್ತಿ) ಸನ್ನಿಧಾನ ಒಪ್ಪಿಸಿಕೊಳ್ಳಬೇಕು.

ರಾಣಿ: (ಓಲೆಯನ್ನು ತೆಗೆದುಕೊಂಡು) ಮಹಾರಾಜರು ಓಲೆಯನ್ನು ತಾವೇ ಬರೆದರೋ ಅಥವಾ ರಾಯಸದವರಿಗೆ ಹೇಳಿ ಬರೆಸಿದರೋ?

ಪ್ರಣವಕುಮಾರ: ಮೊದಲು ರಾಯಸದವರಿಂದ ಬರೆಸಿದರು. ಆಮೇಲೆ ಅದನ್ನ ಹರಿದು, ತಾವೇ ಬರೆದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ : (ವ್ಯಂಗದ ದನಿಯಿಂದ) ಯುದ್ಧದಲ್ಲಿ ಕಾದಾಡೋದನ್ನ ಕಲಿಸಿದ ನಿಮ್ಮ ತಂದೆ, ತಲೆಯೆತ್ತಿ ಮಾತಾಡೊದನ್ನ ಕಲಿಸದೆ ಎಂಥ ಅನರ್ಥ ಮಾಡಿದರು.

ಪ್ರಣವಕುಮಾರ : (ತಲೆಯೆತ್ತಿ ನಗೆಬೀರಿ) ಕ್ಷಮಿಸಿರಿ, ಮಹಾರಾಣಿ. ರಾಯಸದವರು ಬರೆದದ್ದನ್ನ ಒಂದು ಸಾರಿ ಓದಿ ಹರಿದು ಹಾಕಿ, ಆಮೇಲೆ ತಾವೇ ಸ್ವಹಸ್ತ ಬರೆದರು.

ರಾಣಿ : ಈಗ ಈ ದೂತ ಎದ್ದು ನಿಲ್ಲಬಹುದೇ ಪುರೋಹಿತರೆ?

[ರಾಜಪುರೋಹಿತ ಗಂಭಿರವಾಗಿ ತಲೆದೂಗಿ ಸಮ್ಮತಿ ಸೂಚಿಸುವನು. ಪ್ರಣವ ಕುಮಾರ ಎದ್ದು ನಿಲ್ಲುವನು]

ರಾಣಿ : (ಓಲೆಯ ಸುರುಳಿಯನ್ನು ಬಿಚ್ಚಿ ಕಣ್ಣಾಡಿಸಿ ಸಭೆಯ ಕಡೆ ತಿರುಗಿ) ಮಂತ್ರಿಗಳೆ, ಸಾಮಂತರೆ, ಸಭಾಸದರೆ, ಮಹಾರಾಜರು ಈ ಓಲೆಯನ್ನು ನನಗೆ ಬರೆದಿದ್ದರೂ, ಇದರಲ್ಲಿನ ಕೆಲವಂಶಗಳು ರಾಜ್ಯದ ಆಗುಹೋಗುಗಳಿಗೆ ಸಂಬಂಧಿಸಿದ್ದು ನಿಮ್ಮೆಲ್ಲರಿಗೂ ತಿಳಿಯಪಡಿಸಬೇಕಾಗಿದೆ. ಆ ಅಂಶಗಳನ್ನು ಗುರುತು ಮಾಡಿ ಸಭೆಯಲ್ಲಿ ಸರ್ವರ ಸಮಕ್ಷಮ ಪಠಿಸತಕ್ಕದ್ದೆಂದು ಮಹಾರಾಜರೇ ಆಜ್ಞೆ ಮಾಡಿದ್ದಾರೆ........ರಾಜಪುರೋಹಿತ ಮೇಧಾತಿಥಿ ಶರ್ಮರೆ, ತೆಗೆದುಕೊಳ್ಳಿ, ಈ ಓಲೆಯನ್ನು. ಇದರಲ್ಲಿ ಗುರುತು ಮಾಡಿರುವ ಅಂಶಗಳನ್ನು ಸಭಾಸದರಿಗೆ ಓದಿ ಹೇಳಿರಿ.

(ಓಲೆಯನ್ನು ಕೊಡುವಳು)

ಪುರೋಹಿತ : (ತೆಗೆದುಕೊಂಡು ಓದಿಕೊಳ್ಳುತ್ತಿದ್ದಂತೆ)

ರಾಣಿ : ಮಹಾರಾಜರು ನನಗಾಗಿಯೇ ಬರೆದ ಕೆಲವು ರಹಸ್ಯ ವಿಚಾರಗಳಿವೆ ಓಲೆಯಲ್ಲಿ. ಅವುಗಳ ಕಡೆ ನೀವು ಕಣ್ಣಾಡಿಸದಿದ್ದರೆ ಒಳ್ಳೆಯದು.

ಪುರೋಹಿತ : (ಬೆಚ್ಚಿ) ಅಜ್ಞೆ, ಮಹಾರಾಣಿ. (ಎಂದು ಎತ್ತಿದ ದನಿಯಲ್ಲಿ ಓಲೆಯನ್ನು ಪಠಿಸುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂತ್ರಿ ಸಾಮಂತರೆ, ನಾಗರಿಕ ಪ್ರತಿನಿಧಿಗಳೆ, ಹಿರಿಯ ಅಧಿಕಾರಿಗಳೆ, ನಿಮ್ಮ ನೆಚ್ಚಿನ ಪ್ರಭು, ನೀವು ಒಮ್ಮತದಿಂದ ಆರಿಸಿದ ಅರಸು, ಮಹಾರಾಜ ಹರ್ಷವರ್ಧನರು ನಿಮಗೆ ಈ ರೀತಿ ಅಜ್ಞೆ ಮಾಡುತ್ತಾರೆ; ಭಗವತ್ ಕೃಪೆಯಿಂದ ನಮಗೆ ಯುದ್ಧದಲ್ಲಿ ಜಯ ಲಭಿಸಿತು. ಶತೃಗಳು ಸೋತರು. ಅವರ ರಾಜಧಾನಿ, ಗಿರಿದುರ್ಗಗಳು, ಧನ ಸಂಗ್ರಹ, ಶಸ್ತ್ರಾಗಾರಗಳು ನಮ್ಮ ವಶವಾದವು. ಆದರೂ ಸದ್ಯಕ್ಕೆ ನಾವು ಇಲ್ಲಿಂದ ಹೊರಡುವಂತಿಲ್ಲ. ನಮ್ಮ ವಶವಾದ ಪ್ರದೇಶಗಳಲ್ಲಿ ಶಾಂತಿ ಸುಭಿಕ್ಷಗಳು ನೆಲಸುವಂತೆ ವ್ಯವಸ್ಥೆಗೊಳಿಸಿ, ಗಿರಿದುರ್ಗಗಳನ್ನು ಭದ್ರಪಡಿಸುವ ಕಾರ್ಯ ಇನ್ನೂ ಉಳಿದಿದೆ. ಇದಕ್ಕೆ ಕೆಲವು ತಿಂಗಳುಗಳಾದರೂ ಬೇಕಾಗಬಹುದು. ದಂಡಯಾತ್ರೆಯ ನೆವದಿಂದ ನಾವು ರಾಜಧಾನಿಯನ್ನು ಬಿಟ್ಟು ಈಗಾಗಲೇ ಹತ್ತು ತಿಂಗಳುಗಳು ಕಳೆದಿವೆ. ಮುಂದೆ ನಾವು ರಾಜಧಾನಿಗೆ ಹಿಂದಿರುಗಲು ಅಷ್ಟೇ ಕಾಲ ಹಿಡಿಯುತ್ತದೆ. ಈ ಅವಧಿಯಲ್ಲಿ ರಾಜ್ಯಭಾರ ಸುವ್ಯವಸ್ಥಿತವಾಗಿ ನಡೆಯಲು ನಾವು ಕೆಲವು ಮಾರ್ಪಾಡುಗಳನ್ನು ಮಾಡಲು ಇಚ್ಛಿಸಿದ್ದೇವೆ. (ಪಠಣವನ್ನು ನಿಲ್ಲಿಸಿ ಅರ್ಥಗರ್ಭಿತವಾಗಿ ಕಾತ್ಯಾಯನನ ಕಡೆ ನೋಡುವನು)

ಕಾತ್ಯಾಯನ: ಅವಧಾರು! ಅವಧಾರು! ಸಾಮಂತರೆ, ನಾಗರಿಕರೆ ಪ್ರತಿನಿಧಿಗಳೆ, ರಾಜ್ಯದ ಸುವ್ಯವಸ್ಥೆಗೆ ಪ್ರಭುಗಳು ಕೆಲವು ಮಾರ್ಪಾಡುಗಳನ್ನು ಸೂಚಿಸಿದ್ದಾರೆ. ಪಠಿಸಿರಿ ರಾಜಪುರೋಹಿತ ಮೇಧಾತಿಥಿಶರ್ಮ.

ಪುರೋಹಿತ: (ಪಠಿಸುವನು) ನಮ್ಮ ಪರೋಕ್ಷದಲ್ಲಿ ಮಹಾಮಂತ್ರಿ ಕಾತ್ಯಾಯನ ಶರ್ಮರು ತಮ್ಮ ಹೊಣೆಯನ್ನು ದಕ್ಷತೆಯಿಂದ ನಿರ್ವಹಿಸಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸಿ ನಮ್ಮ ಕೃತಜ್ಞತೆಯ ಸೂಚಕವಾಗಿ ಅವರಿಗೆ ಸಚಿವೋತ್ತಮ ಎಂಬ ಬಿರುದನ್ನು ದಯಪಾಲಿಸಿದ್ದೇವೆ.

ಸಾಮಾಜಿಕರು: ಜಯ ಮಹಾಮಂತ್ರಿ, ಸಚಿವೋತ್ತಮ, ಕಾತ್ಯಾಯನ ಶರ್ಮ

ಪುರೋಹಿತ: ಅವಧಾರು! ಅವಧಾರು! ಮುಂದೆ ಮಹಾರಾಜರು ಈ ರೀತಿ ಅಜ್ಞೆ ಮಾಡಿದ್ದಾರೆ. (ಪಠಿಸುವನು) ಸಚಿವೋತ್ತಮ ಕಾತ್ಯಾಯನ

Sri Vidyabharathi Book Centre, Sringeri

CC-O. In Public Domain. Digitized by eGangotri

ಶರ್ಮರು ವೃದ್ಧರಾದರು. ವಿಶ್ರಾಂತಿ ಅಗತ್ಯವಾದ ಈ ವಯಸ್ಸಿನಲ್ಲಿ ನಾವು ಅವರಿಂದ ಪುನಃ ಪುನಃ ಸೇವೆ ಬಯಸುವುದು ಅನುಚಿತವಾದೀತು. ಕಾರಣ ನಾವು ಅವರನ್ನು ಮಹಾಮಂತ್ರಿಪದವಿಯಿಂದ ನಿವೃತ್ತಿಗೊಳಿಸಿ ಆ ಸ್ಥಾನಕ್ಕೆ ಅವರ ಏಕಮಾತ್ರ ಪುತ್ರ ಪ್ರಣವಕುಮಾರ ಶರ್ಮರನ್ನು ನೇಮಕ ಮಾಡಿದ್ದೇವೆ. ರಾಜಸಭೆಯಲ್ಲಿ ಈ ನಿರೂಪ ಘೋಷಿಸಲ್ಪಟ್ಟ ದಿನವೇ ಪ್ರಣವಕುಮಾರ ಶರ್ಮರು ಅಧಿಕಾರ ವಹಿಸಿಕೊಂಡು ಮಹಾರಾಣಿಯ ಆಜ್ಞಾನುವರ್ತಿಯಾಗಿ ರಾಜಕಾರ್ಯಗಳನ್ನು ನಿರ್ವಹಿಸತಕ್ಕದ್ದು.

[ಸಭೆಯಲ್ಲಿ ಕೆಲವು ಕ್ಷಣಗಳು ಸ್ತಬ್ಧತೆ. ಬಳಿಕ ಎಲ್ಲರೂ ಏಕ ಕಂಠದಲ್ಲಿ ಜಯಘೋಷ ಮಾಡುವರು]

ಸಾಮಂತರು : ಜಯ ಪ್ರಣವಕುಮಾರ, ಸಚಿವ ಸರದಾರ, ಸುಗುಣ ಗಂಭೀರ, ಮದನಾವತಾರ!

ಪುರೋಹಿತ : ಅವಧಾರು! ಅವಧಾರು! ಓಲೆಯ ಕೊನೆಯ ಅಂಶ ಹೀಗಿದೆ. (ಪಠಿಸುವನು) ಈ ದಂಡಯಾತ್ರೆಯಲ್ಲಿ ಪ್ರಣವಕುಮಾರನು ನನ್ನ ಸಹಾಯಕನಾಗಿ ಅನೇಕ ವಿಜಯಗಳನ್ನು ಸಾಧಿಸಿದ್ದಾನೆ. ಶೌರ್ಯ ಸಾಹಸಗಳಿಂದ ಕಾದಾಡಿ ವೈರಿಗಳನ್ನು ಎದುರಿಸಿದ್ದಾನೆ. ಕೆಲವು ಸಂದರ್ಭಗಳಲ್ಲಿ ಮೈಗಾವಲ ಭಟನಾಗಿ ನಮ್ಮ ಪ್ರಾಣಗಳನ್ನು ಉಳಿಸಿದ್ದಾನೆ. ಅಪುತ್ರಕರಾದ ನಾವು ಈ ಕಾರಣದಿಂದ ಪ್ರಣವಕುಮಾರನನ್ನು ನಮ್ಮ ಪುತ್ರನೆಂದೇ ಪರಿಗಣಿಸಿದ್ದೇವೆ. ಮಂತ್ರಿ ಸಾಮಂತರು, ಹಿರಿಯ ಅಧಿಕಾರಿಗಳು, ಕರಣಿಕರು, ಕಾರ್ಯಕರ್ತರು, ಪ್ರಣವಕುಮಾರನಿಗೆ ಸಂಪೂರ್ಣ ಸಹಕಾರ ನೀಡಬೇಕೆಂದು ನಮ್ಮ ಇಚ್ಛೆ, ಆಡಳಿತದಲ್ಲಿ ಕ್ಷಣ ಕ್ಷಣಕ್ಕೂ ಮಹಾರಾಣಿಯ ಸಲಹೆ ಪಡೆಯುವುದು ಅಗತ್ಯವಾದ್ದರಿಂದ ಪ್ರಣವಕುಮಾರನಿಗೆ ಎಲ್ಲ ಸಮಯಗಳಲ್ಲಿ ಅಂತಃಪುರಕ್ಕೆ ಪ್ರವೇಶವಿರತಕ್ಕದ್ದು....ಸ್ವಹಸ್ತೋ ಹರ್ಷವರ್ಧನಸ್ಯ,

(ಎಂದು ಓಲೆಯನ್ನು ಸಭೆಗೆ ತೋರಿಸಿ ರಾಣಿಗೆ ಕೊಡುವನು.)

ರಾಣಿ : ಮಹಾರಾಜರ ಇಚ್ಛೆಯಂತೆ ಪ್ರಣವಕುಮಾರರಿಗೆ ಈಗ ಅಧಿಕಾರವಹಿಸಿಕೊಡುವ ಹೊಣೆ ನನ್ನ ಮೇಲಿದೆ.

ಕಾತ್ಯಾಯನ : ಪ್ರಭುಗಳ ಆಜ್ಞೆಯಂತೆ ನಾನು ನಿವೃತ್ತನಾಗುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

[ಪದವಿ ಸೂಚಕವಾದ ಕತ್ತಿ ಮತ್ತು ಮುದ್ರೆ ಉಂಗುರವನ್ನು ರಾಣಿಯ ಪದ ಮೂಲದಲ್ಲಿ ಇಡುವನು.]

ರಾಣಿ : ರಾಗಿಣಿ, ರಂಜಿನಿ, ಈ ಅಧಿಕಾರ ಲಾಂಛನಗಳನ್ನು ಪ್ರಣವ ಕುಮಾರರಿಗೆ ತೊಡಿಸಿರಿ.

[ರಾಗಿಣಿ ರಂಜಿನಿಯರು ಉಂಗುರವನ್ನ ಬೆರಳಿಗಿಟ್ಟು ಕತ್ತಿ ಯನ್ನು ಪ್ರಣವಕುಮಾರನಿಗೆ ಕೊಡುವರು. ಒನಪು ವೈಯಾರ ಗಳಿಂದ ನಡೆಯುವ ಕಾರ್ಯದಲ್ಲಿ ಪ್ರಣವಕುಮಾರನ ಗಾಂಭೀರ್ಯ ಚಲಿಸುವುದಿಲ್ಲ.]

ರಾಣಿ : ಇನ್ನು ಸೌಜನ್ಯದ ಒಂದು ಕಾರ್ಯ ಉಳಿದಿದೆ.

(ರಾಗಿಣಿ ರಂಜಿನಿಯರ ಕೈಯಲ್ಲಿ ಕಾತ್ಯಾಯನ ಪ್ರಣವಕುಮಾರಿಗೆ ತಾಂಬೂಲ ಕೊಡಿಸುವಳು.)

ರಾಣಿ : ಇಂದಿನ ರಾಜಸಭೆಯಲ್ಲಿ ನನ್ನೊಡನೆ ಸಹಕರಿಸಿದ್ದಕ್ಕಾಗಿ ವಂದನೆಗಳು. (ಸಭೆಗೆ ಕೈಮುಗಿಯುವಳು)

ಸಭಾಸದರು : ಜಯ ಯಜು ಮಹಾರಾಣಿ, ಸೌಗಂಧಿಕಾದೇವೀ ಬಹು ಪರಾಕು.

[ಮೇಳದವರು "ರಾಣಿ ಸೌಗಂಧಿಕಾ, ಜನಮೆಚ್ಚುರಾಧಿಕಾ" ಎಂಬ ಗೀತವನ್ನು ಹಾಡುತ್ತಿದ್ದಂತೆ ರಾಗಿಣಿ ರಂಜಿನಿಯರು ರಾಣಿಯನ್ನು ತೆರೆಮರೆಯಲ್ಲಿ ನೇಪಥ್ಯಕ್ಕೆ ಕರೆದೊಯ್ಯುವರು.]

ಕಾತ್ಯಾಯನ : ಅಭಿನಂದನೆಗಳು, ಪ್ರಣವಕುಮಾರ.

(ಸ್ನೇಹದಿಂದ ಕೈಹಿಡಿದು ಮರ್ದಿಸುವನು)

ಪ್ರಣವಕುಮಾರ : ನಾನು ನಿಮ್ಮಿಂದ ಅಪೇಕ್ಷಿಸುವುದು ಅಭಿನಂದನೆ ಗಳನ್ನಲ್ಲ ಪಿತಾಜಿ, ಆಶೀರ್ವಾದವನ್ನು.

(ಎಂದು ಪಾದಗಳಿಗೆರಗುವನು)

ಕಾತ್ಯಾಯನ : (ಗಂಭೀರವಾಗಿ) ಈ ಎಳೆತನದಲ್ಲಿ ಮಹಾರಾಜರು ನಿನ್ನ ಮೇಲೆ ಗುರುತರದ ಹೊಣೆ ಹೊರಿಸಿದ್ದಾರೆ, ಕುಮಾರ. ಅದನ್ನು ನಿರ್ವ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಸುವ ಶಕ್ತಿಯನ್ನು ನಿನಗೆ ಕೊಡು ಎಂದು ಭಗವಂತನಲ್ಲಿ ನನ್ನ ಪ್ರಾರ್ಥನೆ. ನೀನು ನನಗಿಂತ ದೊಡ್ಡವನಾಗು. ಇದೇ ನಿನಗೆ ನನ್ನ ಆಶೀರ್ವಾದ.

(ಎಂದು ಹರಸಿ ಭುಜ ಹಿಡಿದೆತ್ತಿ ಆಲಿಂಗಿಸುವನು)

ಪುರೋಹಿತ: ಪುತ್ರಾದಿಚ್ಛೇತ್ ಪರಾಜಯಂ ಎನ್ನುತ್ತದೆ ಶಾಸ್ತ್ರ. ಕಾತ್ಯಾಯನ ಶರ್ಮರು ಅದರಂತೆ ನುಡಿದಿದ್ದಾರೆ. ಸಚಿವೋತ್ತಮರಿಗೆ ತಕ್ಕ ಮಾತು.

(ರಾಗಿಣಿ ನಾಟ್ಯದಿಂದ ಪ್ರವೇಶಿಸುವಳು)

ರಾಗಿಣಿ: ಮಹಾರಾಣಿಯವರು ನಿಮ್ಮನ್ನ ಕರಕೊಂಡು ಬಾ ಅಂತ ಹೇಳಿದಾರ್ರಿ.

(ಎಂದು ಪ್ರಣವಕುಮಾರನಿಗೆ ವಂದಿಸುವಳು)

ಪ್ರಣವಕುಮಾರ: (ಮಿದುನಗೆ ಹಾರಿಸಿ) ನಿನ್ನ ಸಂಗಡಲೇ ಬರಬೇಕೇ?

ರಾಗಿಣಿ: ಅದೇ ಮಹಾ ರಾಣಿಯವರ ಆಜ್ಞೆ.

ಪ್ರಣವಕುಮಾರ: ಹಾಗಾದರೆ ನಡೆ.

(ರಾಗಿಣಿಯೊಡನೆ ನಾಟ್ಯದಿಂದ ನೇಪಥ್ಯದ ಕಡೆಗೆ ನಿಷ್ಕ್ರಮಿಸುವನು)

ಪುರೋಹಿತ: (ವ್ಯಂಗ್ಯದ ದನಿಯಿಂದ) ಮಹಾರಾಣಿಯವರು ತಮ್ಮ ಭಾಗದ ಹೊಣೆಯನ್ನು ನಿಮ್ಮ ಕುಮಾರನ ಮೇಲೆಯೇ ಹೊರಿಸಿದಂತಿದೆ. ಜಾತಿ ಕುದುರೆಯನ್ನ ಕಂಡರೆ ಸವಾರಿ ಮಾಡೋ ಆಸೆ ಮಾನವರಿಗೆ ಸಹಜ ಅಲ್ಲವೇ ಸಚಿವೋತ್ತಮರೆ?

(ಸಭಾಸದರು ನಗುವರು)

ಕಾತ್ಯಾಯನ (ಸಿಡುಕನಿಂದ) ಇದು ನಗೋ ವಿಚಾರವಲ್ಲ ಸಾಮಂತರೆ. ಮಹಾರಾಣಿಯವರ ಪರೋಕ್ಷದಲ್ಲೂ ನೀವು ರಾಜಸಭೆಯ ಮರ್ಯಾದೆಯನ್ನು ರಕ್ಷಿಸಿಕೊಳ್ಳಬೇಕು....

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರೋಹಿತ: ವಸಂತ! ವಸಂತ! ಎಲ್ಲಿದ್ದೀಯೋ?

ವಸಂತ: (ಓಡಿಬಂದು) ಇಲ್ಲೀ ಇದೀನ್ರಿ ಒಡೆಯರೆ.

ಪುರೋಹಿತ: ಹೀಗೇಯೋ ನೀನು ಸೂತ್ರಧಾರನ ಕೆಲಸ ಮಾಡೋದು? ಸಭೆ ಮುಗಿದರೂ ದೀಪಗಳನ್ನ ಆರಿಸೋದು ಬೇಡವೆ?

ವಸಂತ: (ಉಪೇಕ್ಷೆಯ ದನಿಯಿಂದ) ಬಿಡಿ, ಒಡೆಯರೆ? ಎಣ್ಣೆ ಮುಗಿದರೆ ದೀಪಗಳು ತಾವಾಗಿ ಆರಿಹೋಗುತ್ತವೆ.

[ಸೂಚನೆ ಅರಿತು ಸಾಮಂತರು ಸಾಮೂಹಿಕವಾಗಿ, ಬಿರುದು ಬಾವಲಿಗಳನ್ನು ಹಿಡಿದ ಭಟರು ಶಿಸ್ತಿನಿಂದ ನಿಷ್ಕ್ರಮಿಸುವರು. ರಂಗದಲ್ಲಿ ರಾಜಪುರೋಹಿತ, ಕಾತ್ಯಾಯನ ಮತ್ತು ವಸಂತ ಮಾತ್ರ ಉಳಿಯುವರು]

ಪುರೋಹಿತ: (ವಸಂತನೊಡನೆ ಸಣ್ಣ ದನಿಯಲ್ಲಿ) ನೇಪಥ್ಯದಲ್ಲಿ ಏನು ನಡೀತಿದೆ?

ವಸಂತ: ರಾಣಿ ಸಾಹೇಬರು ಹೇಳ್ತಿದಾರೆ ಮಂತ್ರಿ ಸಾಹೇಬರು ಬರ ಕೋತಿಧಾರೆ.

ಪುರೋಹಿತ: ಆ ಇಬ್ಬರು ಸಖಿಯರು, ರಾಗಿಣಿ ರಂಜಿನಿ?

ವಸಂತ: ಮಧು ಪಾತ್ರಗಳಲ್ಲಿಪಾನಿಯಗಳನ್ನು ಸಿದ್ಧಗೊಳಿಸ್ತಿಧಾರೆ.

ಪುರೋಹಿತ: ಹಾಗಾದರೆ ಪಾನಗೊಷ್ಟಿ ಮುಗಿದ ಮೇಲೇ ಮಂತ್ರಿ ಮಹೋದಯರ ನಿಷ್ಕ್ರಮಣ.

ವಸಂತ: ಹಾಗೇನಿಲ್ಲ ಒಡೆಯರೆ, ಮೊದಲ ಸಾರಿ ರಾಗಿಣಿ ಪಾನ ಪಾತ್ರೆಯನ್ನ ಮುಂದಿಟ್ಟಾಗ ಪ್ರಣವಕುಮಾರರು ಕೈಯಾಡಿಸಿ ಬೇಡ ಎಂದರು. ಎರಡನೇ ಸಾರಿ ರಂಜಿನಿ ಪಾತ್ರೆಯನ್ನ ಬಾಯಿಗಿಡೋದಕ್ಕೆ ಹೋದಾಗ ಕೈಯನ್ನ ತಳ್ಳಿದರು. ಘಣ ಘಣ ಶಬ್ಧ ಮಾಡತಾ ಪಾತ್ರೆ ಕೆಳಗೆ ಬಿತ್ತು. ಪ್ರಣವಕುಮಾರರು....

ಪುರೋಹಿತ: ಏನು ಮಾಡಿದ್ದರು?

Sri Vidyabharathi Book Centre, Sringeri

CC-O. In Public Domain. Digitized by eGangotri

ವಸಂತ: ಎದ್ದು ನಿಂತು ವಂದಿಸಿ, "ನಿಮ್ಮ ಸಖಿಯರಿಗೆ ಮರ್ಯಾದೆಯಿಂದ ನಡೆಕೊಳ್ಳೊದನ್ನ ಕಲಿಸಿರಿ, ಮಹಾರಾಣಿ" ಎಂದು ಬಿನ್ನವಿಸಿಕೊಂಡರು.

[ಈ ಮಾತುಗಳನ್ನು ಗಮನಿಸಿ ಕೇಳುತ್ತಿದ್ದ ಕಾತ್ಯಾಯನನ ಕಡೆಗೆ ವ್ಯಂಗ್ಯದ ದೃಷ್ಟಿಹಾರಿಸಿ ಪುರೋಹಿತ ತನ್ನಲ್ಲಿ ತಾನು ಮೆಲಕು ಹಾಕುತ್ತಿದ್ದಂತೆ]

ಮಂತ್ರಸಾನಿ: (ನೇಪಥ್ಯದಿಂದ) ಓ ವಸಂತಣ್ಣ, ಕೋಲಿ ಚಿಲಕ ತೆಗಿ, ಇನ್ನೆಷ್ಟು ಹೊತ್ತು ನಾನಿಲ್ಲಿರಬೇಕು?

ಪುರೋಹಿತ: ಯಾರು ಅರಚತಿರೋದು?

ವಸಂತ: ಸಭೆ ಆರಂಭವಾಗೋದಕ್ಕೆ ಮೊದಲು, ಹಾಳು ಮನೆಗೆ ಗೂಬೆ ನುಗ್ಗಿದ ಹಾಗೆ ಮಂತ್ರಸಾನಿ ಮಂಗಮ್ಮ ಇಲ್ಲಿಗೆ ಬಂದಳು. ಉಪಾಯದಿಂದ ಅವಳನ್ನ ಹಿಂದಿನ ಕೋಣೇಲಿ ಕೂಡಿ ಹಾಕಿದೆ.

ಪುರೋಹಿತ: ಬೇಗ ಅವಳನ್ನ ಬಿಡಿಸು ಹೋಗು. ಇಲ್ಲವೇ ರಂಪ ಮಾಡ್ತಾಳೆ.

ವಸಂತ: ಆಜ್ಞೆ ಒಡೆಯರೆ. (ಹೋಗುವನು)

ಕಾತ್ಯಾಯನ: ನಾವಿನ್ನು ಹೋಗಬಹುದೇ, ಮೇಧಾತಿಥಿ? ದೀಪಗಳು ಆರ್ತಾ ಬಂದಿವೆ.

ಪುರೋಹಿತ: ನಿಮ್ಮ ಕುಮಾರ ಕಂಠೀರವ ಅರಮನೆ ಬಿಡೋವರೆಗೆ ದೀಪಗಳು ಆರೋದಿಲ್ಲ ಸಚಿವೋತ್ತಮರೆ. (ಎರಡು ಹೆಜ್ಜೆ ನಡೆದು) ನನಗನಿಸುತ್ತೆ, ಚಾಣಕ್ಯ ಪಂಡಿತ ಅರ್ಥಶಾಸ್ತ್ರದಲ್ಲಿ ಬಂದು ಹೇಳೋದನ್ನ ಬಿಟ್ಟ ಅಂತ.

ಕಾತ್ಯಾಯನ: ಏನು ಅದು?

ಪುರೋಹಿತ: ತಂತ್ರವಿದ್ಯೆಯಂತೆ ರಾಜಕೀಯದಲ್ಲೂ ಪಂಚಮಕಾರಗಳು ಅಗತ್ಯ ಅಂತ.

2

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾತ್ಯಾಯನ: ಬಾಯಿ ಬಿಟ್ಟು ಹೇಳದಿದ್ದರೂ ಅರ್ಥಶಾಸ್ತ್ರದಲ್ಲಿ ಆ ಸೂಚನೆ ಇದೆ.

ಪುರೋಹಿತ: (ಇನ್ನೆರಡು ಹೆಜ್ಜೆ ನಡೆದು) ವಾತ್ಸ್ಯಾಯನ ಒಂದು ಕಡೆ ಹೇಳತಾನೆ....

ಕಾತ್ಯಾಯನ: ಏನು ಹೇಳತಾನೆ?

ಪುರೋಹಿತ: ರಾಣಿಯನ್ನ ದಾಸಿಹಾಗೆ, ದಾಸಿಯನ್ನ ರಾಣಿಹಾಗೆ ನಡೆಸಿ ಕೊಳ್ಳೋದು ಸ್ತ್ರೀವಶ್ಯದ ಮೊದಲ ತಂತ್ರ ಎಂದು.

(ಹೋಗುವರು)

ಕಾತ್ಯಾಯನ: (ಅಸಮಾಧಾನದಿಂದ) ನಿಮ್ಮ ಬುದ್ಧಿ ವಿಶಾಲವಾದ ರಾಜಮಾರ್ಗವನ್ನು ಬಿಟ್ಟು ಕಾಡು ಮೇಡಿನ ಮುಳ್ಳುದಾರಿ ಹಿಡೀತಿದೆ ಮೇಧಾತಿಥಿ. ಅಲ್ಲದೆ ಇದು ಪುರುಷ ವಶ್ಯದ ಸಂದರ್ಭ, ಸ್ತ್ರೀವಶ್ಯದ್ದಲ್ಲ. ನಡೆಯಿರಿ.

[ರಂಗ ಕೆಲವು ಕ್ಷಣಗಳು ಶೂನ್ಯ.ಆಮೇಲೆ ಒಂದು ಕಡೆಯಿಂದ ಮಂತ್ರಸಾನಿಯನ್ನು ಕರೆದುಕೊಂಡು ವಸಂತ, ಇನ್ನೊಂದು ಕಡೆಯಿಂದ ಪ್ರಣವಕುಮಾರ ಪ್ರವೇಶಿಸುವರು. ಪ್ರಣವಕುಮಾರನ ಕಂಕುಳಲ್ಲಿ ಕಾಗದ ಪತ್ರಗಳ ದೊಡ್ಡಕಟ್ಟು, ಪಾನ ಮಾಡದಿದ್ದರೂ ಅಭ್ಯಾಸವಿಲ್ಲದ ಕಾರಣ ಒಂದು ಸಣ್ಣ ಬಟ್ಟಲು ಮಧು ಅವನ ಸಮತೆಯನ್ನು ಕಲಕಿದೆ. ಎಚ್ಚರದಿಂದ ಮೆಲ್ಲನೆ ನಡೆಯುತ್ತಾನೆ. ರಂಗದ ಮಧ್ಯಕ್ಕೆ ಬಂದಾಗ ಮಂತ್ರಸಾನಿ ವಸಂತ ಎದುರಾಗುತ್ತಾರೆ]

ವಸಂತ: ಹೊಸ ಮಂತ್ರಿಗಳು, ನಮಸ್ಕಾರ ಮಾಡು, ಮಂಗಮ್ಮ.

ಮಂತ್ರಸಾನಿ: ಅಡ್ಡಬಿದ್ದಿನ್ರಿ, ಧಣೇರ.

(ಎಂದು ಕಾಲುಗಳ ಮೇಲೆ ಬೀಳುವಳು)

ಪ್ರಣವಕುಮಾರ: ಯಾರು ಈ ಹೆಂಗಸು?

ವಸಂತ: ಮಂತ್ರಸಾನಿ ಮಂಗಮ್ಮ, ಇಪ್ಪತ್ತು ವರ್ಷಗ್ಳಿಂದ ಅರಮನೇಲಿಧಾಳೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರಣವಕುಮಾರ: ಅದರಿಂದಲೇ ಅರಮನೆಯ ಗೋಡೆ ಕಂಬಗಳು, ಕಿಟಕಿ ಬಾಗಿಲುಗಳ ಹಾಗೆ ಇವಳೂ ಮುರಿದು ಬೀಳತಿದಾಳೆ.

ಮಂತ್ರಸಾನಿ: (ತಬ್ಬಿಬ್ಬಾಗಿ) ಏನು ಅವರು ಹೇಳ್ತಿರೋದು ವಸಂತಣ್ಣ ?

ಪ್ರಣವಕುಮಾರ: (ಸಿಡುಕಿನಿಂದ) ಕೊಳೀತಿರೋ ಈ ಹೆಣಗಳನ್ನ ಹೊರಗೆ ಹಾಕಿದ್ರೆ ಹೊಸರಕ್ತ ತುಂಬೋದಕ್ಕೆ ಅವಕಾಶ. ಬಿಡು ದಾರಿ.

ವಸಂತ: ಸರಿದು ನಿಲ್ಲು ಮಂಗಮ್ಮ. ಹೊಸ ಮಂತ್ರಿಗಳು ಅವಸರ ದಲ್ಲಿದಾರೆ.

ಪ್ರಣವಕುಮಾರ: ಈ ಮುದಿನಾಯಿಗೊಬ್ಬ ಮಧ್ಯಸ್ಥಗಾರ!

[ಎಂದು ಅವರನ್ನು ತಳ್ಳಿಕೊಂಡು ಹೋಗುವನು. ಮಂತ್ರಸಾನಿ ಕೆಳಗೆ ಬಿದ್ದು ಪ್ರಣವಕುಮಾರನ ಕಾಲಿನ ಒದೆತಕ್ಕೆ ಸಿಕ್ಕುವಳು]

ವಸಂತ: (ಸಮಾಧಾನ ಪಡಿಸುತ್ತ) ಏಳು ಮಂಗಮ್ಮ, ಸದ್ಯ ಅವರು ಒದ್ದಾಗ ನಿನ್ನ ಹಲ್ಲು ಮುರಿಲಿಲ್ಲವಲ್ಲ........... ಅಗಸನಾದರೇನು, ಮಂತ್ರಿಯಾದರೇನು, ಹೊಸದರಲ್ಲಿ ಗೋಣಿ ಒಗೆಯೋದು ಖಂಡಿತ. ಈ ಪೊತ್ತು ನೀನು ಇವರನ್ನ ನೋಡಬಾರದಾಗಿತ್ತು.

ಮಂತ್ರಸಾನಿ: (ಒದೆ ತಿಂದ ಅಂಗಗಳನ್ನು ಸರಿಪಡಿಸಿಕೊಳ್ಳುತ್ತ ಮೆಲ್ಲನೆ ಎದ್ದು ನಿಂತು) ಅರಮನೇಲಿ ಅಡ್ಡಾಡೋ ನಾನು ಈಪೊತ್ತಲ್ಲ ನಾಳೆ ಆದ್ರೂ ನೋಡಲೇಬೇಕಾಗಿತ್ತಲ್ಲ........ ಯಾರಣ್ಣ ಈ ಸರದಾರ ?

ವಸಂತ; ಹಳೆ ಮಂತ್ರಿಗಳ ಮಗ. ಚಿಕ್ಕಂದಿನಾಗ ನೀನಿವರನ್ನ ನೋಡಿರಬೇಕು ಮಂಗಮ್ಮ.

ಮಂತ್ರಸಾನಿ: (ನೆನಪಿಸಿಕೊಂಡು ಮೆಲುಕು ಹಾಕುತ್ತ) ಹೌದು, ನೆನಪಾತು. ಹಿಂದೆ ನೋಡೀನಿ........ ಅಪ್ಪನ ಜಾಗಕ್ಕೆ ಮಗ. ದುಡೀದೇ ಬಂದ ಪದವಿ, ಸಂಪತ್ತು ಕುಬೇರನನ್ನಾದರೂ ಕಂಗಾಲ ಮಾಡ್ತದ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಸಂತಣ್ಣ........ ನನ್ನ ಒದ್ದುಕೊಂಡು ಹೋದನಲ್ಲ ಆ ಹುಡುಗ, ಮಂತ್ರಿ ಮಗನೇ ಆಗಲಿ, ರಾಜನ ಷಡ್ಡಕನೇ ಆಗಲಿ, ಇನ್ನೆರಡು ದಿನಗಳಲ್ಲಿ ಮಣ್ಣು ಮುಕ್ಕಿಸದೆ ಹೋದರೆ ನನ್ನ ಹೆಸರು ಮಂತ್ರಸಾನಿ ಮಂಗಮ್ಮನೇ ಅಲ್ಲ.

[ಮಗಮ್ಮನ ಪ್ರತಿಜ್ಞೆಯ ನುಡಿಗಳು ಪ್ರತಿಧ್ವನಿಸುತ್ತಿದ್ದಂತೆ ರಂಗದಲ್ಲಿ ಕತ್ತಲು. ಮಂಗಮ್ಮನನ್ನು ಕರೆದುಕೊಂಡು ವಸಂತ ನಿಷ್ಕ್ರಮಿಸುವನು]

ತೆರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೨

ದೃಶ್ಯ ಹಿಂದಿನಂತೆ. ಸಿಂಹಾಸನವಾಗಿದ್ದ ಉದ್ದನೆಯ ಮಣೆ ತನ್ನ ಅಲಂಕಾರಗಳನ್ನು ಕಳೆದುಕೊಂಡು ಬರಿದಾಗಿದೆ. ಮೇಳದವರು ಮತ್ತು ವಾದ್ಯಗಾರರು ಬಲಭಾಗದ ರಂಗ ಶೀರ್ಷದಲ್ಲಿ ಕುಳಿತು ಗೀತವನ್ನು ಹಾಡುತ್ತಿದ್ದಂತೆ ರಾಗಿಣಿ ರಂಜನಿ ಮತ್ತು ಚಂಪಾ ದಿಂಬು ಮೇಲುಹಾಸುಗಳೊಡನೆ ನೇಪಥ್ಯದ ಕಡೆಯಿಂದ ಪ್ರವೇಶಿಸಿ ಕುಣಿಯುತ್ತಾ ಉದ್ದನೆಯ ಮಣೆಯನ್ನು ಮಂಚದಂತೆ ಸಿಂಗರಿಸುತ್ತಾರೆ. ತಲೆಯ ಕಡೆ ಸಣ್ಣ ಕಾಲ್ಮಣೆಯನ್ನು ತಂದಿರಿಸಿ ಕಳಶ ಕನ್ನಡಿ ಮುಂತಾದ ಪ್ರಸಾಧನೋಪಕರಣಗಳನ್ನು ಅದರ ಮೇಲಿಡುತ್ತಾರೆ.

ಮೇಳದವರ ಗೀತ

ಅರಳಿದ ಕೆಂದಾವರೆ ಸಿರಿ
ಚಲುವ ಕಂಡು ತಾನು,
ಪರಿಮಳ ಕೆಳಸುತೆ ಸುಳಿದಿದೆ
ಸನಿಹದೆ ಮರಿಮೀನು.

ದೆಸೆಗೆಂಟನೆ ತೆರೆದಿದೆ ದಳ
ನಡುವೆ ಕರ್ಣಿಕಾರ,
ನಸುಗೆಂಪಿನ ನವ ಮಂಡಲ
ಸುಧಾ ಬಿಂದು ಸಾರ.

ನೋಡಿ ನೋಡಿ ನಲಿದುದು ತೆರೆ
ಕಂಗಳ ಮರಿಮೀನು
ಕೂಡಿ ಕುಡಿಯೆ ಕಾತರಿಸಿತು
ಜಾರಿರೆ ಸವಿ ಜೇನು.

Sri Vidyabharathi Book Centre, Sringeri

 CC-O. In Public Domain. Digitized by eGangotri

[ಗೀತೆ ಮುಗಿಯುತ್ತಿದ್ದಂತೆ ವಸಂತ ಪ್ರವೇಶಿಸಿ ನೋಡುತ್ತಾ ನಿಲ್ಲುತ್ತಾನೆ.]

ವಸಂತ: ಮಹಾರಾಣಿಯ ಶಯ್ಯಾ ಗೃಹದ ಶೃಂಗಾರ ನಡೀತಿರೋ ಹಾಗಿದೆ ಇಲ್ಲಿ. ಚಂಪಾನೂ ಸೇರಿಧಾಳೆ, ರಾಗಿಣಿ ರಂಜನಿಯರ ಜೊತೇಲಿ.

(ಮುಂದೆ ಹೋಗಿ) ಚಂಪಾ! ಚಂಪಾ! ಏಯ್ ಚಂಪಾ!

ರಾಗಿಣಿ: ಏಯ್ ಚಂಪಾ ಹೆಸರಿನವರು ಇಲ್ಲಿ ಯಾರೂ ಇಲ್ಲ.

ವಸಂತ: ಅದೋ, ಅಲ್ಲಿ ತ್ರಿಭಂಗಿಯಲ್ಲಿ ನಿಂತಿಧಾಳಲ್ಲ ಅವಳೇ ಚಂಪಾ.

ರಾಗಿಣಿ: ಅವಳು ನನ್ನ ಹೊಸಶಿಷ್ಯೆ, ನಾಟ್ಯ ಕಲೀತಿಧಾಳೆ.

ವಸಂತ: ನಟಿಸೋದನ್ನೇ ಸರಿಯಾಗಿ ಕಲೀಲಿಲ್ಲ, ಇನ್ನು ನಾಟ್ಯ ಬೇರೆಯೋ ಇವಳಿಗೆ. (ಎಂದು ಚಂಪಳ ಬಳಿ ಹೋಗಿ ಕೈಹಿಡಿದೆಳೆದು) ನಡೆ ಇಲ್ಲಿಂದ.

ರಾಗಿಣಿ: (ಚಂಪಳ ಸಹಾಯಕ್ಕೆ ಹೋಗಿ ಬಿಡಿಸಿಕೊಂಡು) ನಿಮ್ಮ ಜಬರ್‌ದಸ್ತಿಗೆ ಇದು ಸ್ಥಳವಲ್ಲ. ನಮ್ಮ ತಾಲೀಂ ಇನ್ನೂ ನಡೆದಿದೆ.

ವಸಂತ: ನಿಮ್ಮ ತಾಲೀಂ ನಿರ್ವಿಘ್ನವಾಗಿ ನಡೀಬೇಕಾದ್ರೆ, ಚಂಪಾನ ನನ್ನ ಸಂಗಡ ಕಳುಹಿಸಿರಿ. ಅವಳು ನನ್ನ ಹೆಂಡತಿ.

ರಾಗಿಣಿ: ದಾಖಲೆ ಏನಿದೆ ಅವಳು ನಿಮ್ಮ ಹೆಂಡತಿ ಅನ್ನೋದಕ್ಕೆ?

ವಸಂತ: ಅವಳ ಕೊರಳಲ್ಲಿರೋ ತಾಳಿ.

ರಾಗಿಣಿ: ತಾಳಿ ನಿರ್ಜೀವ ವಸ್ತು, ಅದು ಸಾಕ್ಷಿ ಹೇಳೋದು ಹೇಗೆ?

ವಸಂತ: ಅದನ್ನ ಚಂಪಾ ಕೊರಳಿಗೆ ಕಟ್ಟಿದ ನಾನು ಸಾಕ್ಷಿ ಹೇಳು ತೇನೆ.

ಚಂಪಾ: ಯಾಕ್ರಿ ಸುಳ್ಳು ಹೇಳ್ತೀರಿ. ನೀವು ಮಾಡಿಸಿದ್ರಿ, ನಿಜ. ಅದನ್ನ ನಾನ್ನೇ ಕೊರಳಿಗೆ ಕಟ್ಟಿಕೊಂಡೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿಣಿ : (ನ್ಯಾಯಾಧೀಶನ ಗಾಂಭೀರ್ಯದಿಂದ) ನೀವು ತಾಳಿ ಮಾಡಿಸಿರಬಹುದು, ಆದರೆ ಚಂಪಾ ಕೊರಳಿಗೆ ಅದನ್ನ ನೀವು ಕಟ್ಟಲಿಲ್ಲ ವಾದ್ದರಿಂದ ನೀವು ಅವಳ ಗಂಡ ಅಲ್ಲ. ಇನ್ನು ಹೋಗಿ.

ವಸಂತ : ಅಷ್ಟು ಸುಲಭವಾಗಿ ನನ್ನ ಹೊರಡಿಸೋದಕ್ಕೆ ಆಗೋದಿಲ್ಲ ರಾಗಿಣೀದೇವಿ. ನಾನು ಈ ನಾಟಕದ ಸೂತ್ರಧಾರ, ಮನಸು ಮಾಡಿದರೆ ನಾಟಕವನ್ನ ಈಗಿಂದೀಗಲೇ ನಿಲ್ಲಿಸಬಲ್ಲೆ.

ರಾಗಿಣಿ : ಹೌದೇ ಚಂಪಾ ?

ಚಂಪಾ : (ತಲೆಯಾಡಿಸಿ ಸಮ್ಮತಿ ಸೂಚಿಸುವಳು)

ರಾಗಿಣಿ : ಹಾಗಿದ್ರೆ ಅನುಕೂಲ ಆಯ್ತು. (ವಸಂತನ ಕೈಹಿಡಿದು ಸಲಿಗೆಯಿಂದ) ತಾಲೀಂನಲ್ಲಿ ನನಗೆ ಸಹಾಯ ಮಾಡಿರಿ ನೀವು.

ವಸಂತ : ಸಹಾಯ ಮಾಡಿದರೆ ಏನು ಕೊಡತೀರಿ ?

ರಾಗಿಣಿ : ನೀವು ಕೇಳಿದ್ದನ್ನ ಕೊಡತೇನೆ.

ವಸಂತ : ನಾನು ಕೇಳಿದ್ದು ನಿಮ್ಮಲ್ಲಿ ಇಲ್ಲದೆ ಹೋದರೆ ?

ರಾಗಿಣಿ : ಅಷ್ಟು ಅಪರೂಪದ ವಸ್ತುವೇ ನೀವು ಕೇಳೋದು ?

ವಸಂತ : (ಗಂಭೀರವಾಗಿ) ಹೌದು ನಿಮ್ಮಲ್ಲದು ಅಪರೂಪ.

ರಾಗಿಣಿ : ಅಂದರೆ ?

ವಸಂತ : ನನಗೆ ಬೇಕಾದ್ದು ಶೀಲ. ನಿಮ್ಮಲ್ಲಿರೋದು ನಖಶಿಖಾಂತ ಅಶ್ಲೀಲ. ನಮ್ಮಲ್ಲೊಂದು ಗಾದೆ ಇದೆ, ಗೆಜ್ಜೆ ಕಟ್ಟದೋಳು ಗರತಿ ಆಗೊಲ್ಲ ಅಂತ.

ರಂಜಿನಿ : (ಮುಂದೆ ಬಂದು) ನೀನು ಸೋತೆ ರಾಗಿಣಿ. ನಾನು ಇವ ರನ್ನ ವಿಚಾರಿಸಿಕೊಳತೇನೆ.

ವಸಂತ : (ದರ್ಪದಿಂದ) ಸಮಯ ನೋಡಿ ನಾನೂ ನಿಮ್ಮನ್ನ ವಿಚಾರಿಸಿಕೊಳತೇನೆ. ನೆನಪಿರಲಿ, ನಿಮ್ಮ ಸೂತ್ರ ನನ್ನ ಕೈಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

[ಎಂದು ಚಂಪಳ ಕೈಹಿಡಿದು ಎಳೆದುಕೊಂಡು ಹೋಗುತ್ತಿದ್ದಂತೆ ನೇಪಥ್ಯದಲ್ಲಿ ಪುರೋಹಿತನ ದನಿ. ಏಯ್! ವಸಂತ! ಎಲ್ಲಿ ಧೀಯೋ ಬೇಗ ಬಾ!]

ವಸಂತ: (ಜೆಚ್ಚಿ ಚಂಪಳ ಕೈಬಿಟ್ಟು ಮಂತ್ರವಾದಿಯಂತೆ ತೋಳು ಗಳನ್ನೆತ್ತಿ) ಮರೆಯಾಗಿರಿ ಇಲ್ಲಿಂದ. ನನ್ನ ಮೇಲಿನೋರು ಬರತಾ ಇದಾರೆ.

ರಾಗಿಣಿ: ಮೇಲಿನೋರು ಅಂದ್ರೆ?

ವಸಂತ: ಕಂಪನಿ ಮಾಲಕರು. ನಿಮ್ಮ ಸೂತ್ರ ನನ್ನ ಕೈಯಲ್ಲಿ. ನನ್ನ ಸೂತ್ರ ಮಾಲಕರ ಕೈಯಲ್ಲಿ.

ರಾಗಿಣಿ: ಹಾಗೋ!

[ಎಂದು ಚಂಪಾ ರಂಜಿನಿಯರನ್ನು ಕರೆದುಕೊಂಡು ರಂಗದ ಮಧ್ಯಕ್ಕೆ ಹೋಗುವಳು. ವಸಂತ "ಬಂದೆ! ಬಂದೆ!" ಎನ್ನುತ್ತಾ ಎಡ ಭಾಗದ ರಂಗಶಿರ್ಷಕ್ಕೆ ಹೋಗುತ್ತಿದ್ದಂತೆ ಪುರೋಹಿತ ಎದುರಾಗುವನು. ರಾಗಿಣಿ, ರಂಜಿನಿ ಚಂಪಾ ನೇಪಥ್ಯದಲ್ಲಿ ಮರೆ ಯಾಗುವರು]

ಪುರೋಹಿತ: ಎಲ್ಲಿದ್ದೆಯೋ ವಸಂತ? ಎಷ್ಟು ಸಾರಿ ನಿನ್ನ ಕೂಗೋದು!

ವಸಂತ: ಇಲ್ಲೇ ಇದ್ದೆ ಒಡೆಯರೆ. ಕೂಗು ಕೇಳಿ ಓಡಿಬಂದೆ.

ಪುರೋಹಿತ: ನೇಪಥ್ಯದ ಸಮಾಚಾರ ಏನು?

ವಸಂತ: ಹೊಸದೇನೂ ಇಲ್ಲ, ಒಡೆಯರೆ. ಯಥಾಸ್ಥಿತಿ. ಬರತಾರೆ ಹೋಗತಾರೆ. ಆದರೆ ಕಡಿತಗಳ ಹೊರೆ ದಿನದಿನಕ್ಕೆ ಹೆಚ್ಚುತ್ತಿದೆ. ಮೊದಲು ಅವರೇ ಕಂಕುಳಲ್ಲಿ ಇಟ್ಟುಕೊಂಡು ಹೋಗತ್ತಿದ್ದರು. ಈಗ ಇಬ್ಬರು ಹೊರ ಬೇಕಾಗಿದೆ.

ಪುರೋಹಿತ: ಅಷ್ಟೊಂದು ರಾಜಕಾರ್ಯ ಮಾಡತಾರೆಯೇ ಈ ಮಹಾರಾಣಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ವಸಂತ! ಮಂಡಲಾಧಿಕಾರಿಗಳಿಂದ ಬರೋ ಒಂದೊಂದು ಪತ್ರಾನೂ ಓದಿಸಿ ಕೇಳಿ ತಾವೇ ಉತ್ತರ ಹೇಳಿ ಬರೆಯಿಸತಾರೆ.

ಪುರೋಹಿತ: ಸರ್ವಾಧಿಕಾರಿಯ ಮಗಳು, ಸರ್ವಾಧಿಕಾರಿ ಆಗ್ತಿದಾಳೆ. (ವ್ಯಂಗ್ಯದ ದೃಷ್ಟಿ ಹಾರಿಸಿ) ಮತ್ತಾವ ಸುದ್ದಿಯೂ ಇಲ್ವೇ ವಸಂತ?

ವಸಂತ: (ಮಾರ್ಮಿಕವಾಗಿ) ಪರ್ವತಾಕಾರವಾಗಿ ಬೆಳೆದಿರೋ ಆ ಹಿಮರಾಶಿಯನ್ನ ಅಗ್ಗಿಷ್ಟಿಕೆಯ ಬೆಂಕಿಯಿಂದ ಕರಗಿಸೋದಕ್ಕೆ ಆಗುತ್ಯೆ ಒಡೆಯರೆ?

ಪುರೋಹಿತ: (ಯೋಚಿಸಿ) ಅಗ್ಗಿಷ್ಟಿಕೆಯ ಬೆಂಕಿಯನ್ನು ಊದಿ ಊದಿ ಮಹಾಜ್ವಾಲೆಯಾಗಿ ಮಾಡಬೇಕು, ಉರುವಲನ್ನ ಸಂಗ್ರಹಿಸಿ, ಸುರೀಬೇಕು. ಆಗ ಹಿಮಾಲಯವನ್ನೇ ಕರಗಿಸಬಹುದು. ಆದರೆ ಅದಕ್ಕೆ...........

ವಸಂತ: ಅ ಮಂತ್ರಸಾನಿ ಮನಸು ಮಾಡಿದರೆ............

ಪುರೋಹಿತ: ಮನಸು ಮಾಡೋಹಾಗೆ ಮಾಡಬೇಕು, ವಸಂತ.

ವಸಂತ: ಐನೂರು ವರಹ ಕೇಳತಾಳೆ, ಒಡೆಯರೆ.

ಪುರೋಹಿತ: ಸಾವಿರ ಕೊಡೋಣ, ಟಂಕಸಾಲೆ ನಮ್ಮ ಕೈಲಿರೊವಾಗ ಭಯವೇನು? (ಎಂದು ಮುಚ್ಚಿಟ್ಟುಕೊಂಡಿದ್ದ ಥೈಲಿಯನ್ನು ಕೊಡುವನು)

ವಸಂತ: ಇನ್ನು ಹಕ್ಕಿ ಬಲೆಗೆ ಬಿದ್ದ ಹಾಗೆ, ನೀವು ಅದರ ಯೋಚನೆ ಬಿಟ್ಟುಬಿಡಿ, ಒಡೆಯರೆ.

ಪುರೋಹಿತ: ಎಚ್ಚರಿಕೆಯಿಂದ ಕೆಲಸ ಸಾಧಿಸಬೇಕು ವಸಂತ, ಇದರಲ್ಲಿ ನಮ್ಮ ಕೈವಾಡ ಇದೆ ಅಂತ ಯಾರಿಗೂ ಗುಮಾನಿ ಬರಬಾರದು.

ವಸಂತ: ಅದನ್ನ ನನಗೆ ಬಿಡಿ ಒಡೆಯರೆ. (ಹೋಗುವನು)

[ಈ ಸಂಭಾಷಣೆ ನಡೆಯುತ್ತಿದ್ದಂತೆ ಕತ್ತಲಾಗಿದ್ದ ರಂಗಭೂಮಿಯ ಹಿಂಭಾಗದಲ್ಲಿ ಪುನಃ ಬೆಳಕು ಹೆಚ್ಚುವುದು. ಮೇಳದವರು ಪ್ರಾರಂಭದ ಗೀತೆಯ ಮುಂದಿನ ನುಡಿಗಳನ್ನು ಹಾಡುವರು. ರಾಗಿಣಿ ರಂಜನಿಯರು ರಾಣಿಯನ್ನು ಕರೆತಂದು ಮಂಚದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಸಿದ್ಧವಾದ ತಲ್ಪದಲ್ಲಿ ಕುಳ್ಳಿರಿಸುವರು ಈಗ ರಾಣಿ ವೈಭವದ ಉಡಿಗೆ ತೊಡಿಗೆಗಳನ್ನು ತೆಗೆದು ಹಾಕಿ ಬೆಳದಿಂಗಳ ಅಭಿಸಾರಿಕೆಯಂತೆ ನಿರಾಭರಣೆಯಾಗಿ ಬಿಳಿಯ ಉಡುಪು ಪುಷ್ಪಮಾಲಿಕೆಗಳನ್ನು ಧರಿಸಿದ್ದಾಳೆ]

ಚಲುವಬೀರಿ ಜಗವ ನಲಿಸೆ
ತಾವರೆ ಎಳೆಸಿತ್ತು
ಒಲವನಿತ್ತು ಒಲವಪಡೆಯೆ
ಮರಿ ಮೀನಾಶಿಸಿತು.

ಮುಗಿಲೆತ್ತರ ಜಗದಗಲ
ತಾವರೆ ಇದೆ ಮೇಲೆ,
ಜಿಗಿ ಜಿಗಿಯುತ ಮೀನಾಡಿತು
ಪದದಡಿ ಉಯ್ಯಾಲೆ.

ಎಂದೆಂದಿಗು ಮುಗಿಯದಕನ
ಸನುಭಾವವಿದಮಲ
ಚಿರ ಬಂಧನ ಮರಿಮೀನಿಗೆ
ಮುಕ್ತಿ ಪಥದೆ ಕಮಲ

[ಗೀತೆ ನಡೆಯುತ್ತಿದ್ದಂತೆ ರಾಗಿಣಿ ರಂಜನಿಯರು ರಾಣಿಯನ್ನು ತಲ್ಪದಲ್ಲಿ ಮಲಗಿಸಿ ರಾಗಿಣಿ ಕಾಲೊತ್ತುವಳು. ರಂಜಿನಿ ಗಾಳಿ ಬೀಸುವಳು. ರಾಣಿಗೆ ನಿದ್ದೆ ಹತ್ತಿದಂತೆ ರಾಗಿಣಿ ಎದ್ದು ಎಡ ಭಾಗದ ನೇಪಥ್ಯದ ಕಡೆ ಹೋಗುವಳು. ಕೆಲವು ಕ್ಷಣಗಳ ಅನಂತರ ಪುನಃ ಪ್ರವೇಶಿಸಿ ಸನ್ನೆಯಿಂದ ರಾಣಿ ನಿದ್ದೆ ಮಾಡಿ ದಳೇ ಎಂದು ರಂಜನಿಯನ್ನು ಕೇಳುವಳು. ರಂಜಿನಿ ನಿದ್ದೆ ಮಾಡಿ ದರು ಎಂದು ಸನ್ನೆಯಿಂದಲೇ ತಿಳಿಸಿ ಬೀಸಣಿಗೆಯನ್ನು ಮಂಚದ ಮೇಲಿಟ್ಟು ರಾಗಿಣಿಯ ಬಳಿ ಹೋಗುವಳು. ಇಬ್ಬರೂ ನೇಪಥ್ಯದಲ್ಲಿ ಮರೆಯಾದಂತೆ ರಂಗದ ಹಿಂಭಾಗದಲ್ಲಿ ಕತ್ತಲು]

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗಶೀರ್ಷದಲ್ಲಿ ವಸಂತ ಮಂತ್ರಸಾನಿ ಪ್ರವೇಶಿಸುವರು. ವಸಂತನ ಕೈಯಲ್ಲಿ ಹಣದ ಥೈಲಿ, ಅದನ್ನು ಕಸಿದುಕೊಳ್ಳಲು ಮಂತ್ರಸಾನಿ ಪ್ರಯತ್ನ. ನಿದ್ರಿಸುತ್ತಿರುವ ರಾಣಿಯನ್ನು ತೋರಿಸಿ ವಸಂತ ಸನ್ನೆಯಿಂದ ರಾಣಿಯೊಡನೆ ಹೊಸ ಮಂತ್ರಿಯ ಸಂಬಂಧ ಬೆಳೆಯುವಂತೆ ಮಾಡಿದರೆ ಹಣ ಕೊಡುವುದಾಗಿ ಹೇಳುವನು.

ಮಂತ್ರಸಾನಿ ಒಪ್ಪಿ, ಹಣದ ಚೀಲವನ್ನು ತೆಗೆದು ಕೊಂಡು ಆನಂದದಿಂದ ಒಂದು ಸುತ್ತು ಕುಣಿದು, ಪುನಃ ಚೀಲವನ್ನು ವಸಂತನಿಗೆ ಕೊಡುವಳು. ವಸಂತ ನಿರ್ಗ ಮಿಸುತ್ತಿದ್ದಂತೆ ಮಂತ್ರಸಾನಿ ರಾಣಿಯ ಕಡೆ ಹೋಗುವಳು. ಮಂತ್ರಸಾನಿ ಬೀಸಣಿಗೆಯಿಂದ ಬೀಸುತ್ತಾ ಗರಿಗಳನ್ನು ಮುಖಕ್ಕೆ ತಗಲಿಸಿದಾಗ ರಾಣಿ ಎಚ್ಚೆತ್ತು—]

ರಾಣಿ : ಯಾರದು ? (ಎದ್ದು ಕುಳಿತು) ಮಂತ್ರಸಾನಿ ! ನನ್ನ ಸಖಿ ಯರೆಲ್ಲಿ ?

ಮಂತ್ರಸಾನಿ : ತಿಳೀದು ರಾಣಿತಾಯಿ.

ರಾಣಿ : ನೀನಿಲ್ಲೇಕೆ ಬಂದೆ ?

ಮಂತ್ರಸಾನಿ : ನಿಮ್ಮನ್ನು ನೋಡಬೇಕು ಅಂತ ನಾಲ್ಕು ದಿನಗಳಿಂದ ಸಮಯ ಕಾದೆ ರಾಣಿ ತಾಯಿ. ದಾಸಿಯರು ಒಳಕ್ಕೆ ಬಿಡಲಿಲ್ಲ. ಚಕ್ರಕೋಟಿ ಕಟ್ವಾರ ಅವರು ನಿಮ್ಮ ಸುತ್ತ, ಕಷ್ಟ ಸುಖ ಹೇಳಿಕೊಳ್ಳೋದಕ್ಕೂ ಆಗದ ಹಾಂಗೆ. (ಎಂದು ರಾಣಿಯ ಕಾಲು ಹಿಡಿಯುವಳು)

ರಾಣಿ : (ಮಂತ್ರಸಾನಿಯ ಮುಖ ನೋಡಿ ಕರುಣೆಯಿಂದ) ನಿನಗೇನಾಯ್ತು ಮಂಗಮ್ಮ ? ಯಾರಾದ್ರೂ ತೊಂದರೆ ಕೊಡತಾ ಇದ್ದಾರಾ? ಏಕಿಷ್ಟು ಕಂಗಾಲಾಗಿದ್ದೀಯಾ ?

ಮಂತ್ರಸಾನಿ : ಕಂಗಾಲಾಗಿರೋದು ನಾನಲ್ಲ ಮಹಾರಾಣಿ, ನಿಮ್ಮ ಹೊಸ ಮಂತ್ರಿ, ಪ್ರಣವಕುಮಾರ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ : (ಆಸಕ್ತಿಯಿಂದ) ಏನಾಗಿದೆ ಅವರಿಗೆ ?

ಮಂತ್ರಸಾನಿ : ನೀವಿಲ್ಲದಾಗ ಇಲ್ಲಿಗೆ ಬಂದು ಏನೇನೋ ಮಾಡ ತಾನೆ.

ರಾಣಿ : ನಿಜವೇ ನೀನು ಹೇಳೋದು ?

ಮಂತ್ರಸಾನಿ : ನಿಜ, ಮಹಾರಾಣಿ. ನಾ ಕಣ್ಣಾರೆ ಕಂಡೀನಿ. ಒಂದು ದಿನ ಅಲ್ಲ, ನಾಲ್ಕಾರು ದಿನ.

ರಾಣಿ : (ವಿಶ್ವಾಸ ಹುಟ್ಟಿ) ಏನು ಮಾಡಿದ್ದು ಕಂಡೆ ?

ಮಂತ್ರಸಾನಿ : (ತಲೆ ತಗ್ಗಿಸಿ ಕೃತಕ ಲಜ್ಜೆಯಿಂದ) ಹೇಳೋದಕ್ಕೆ ನಾಚಿಕೆ ಆಗತೈತಿ.

ರಾಣಿ : ನೀನು ನಾಚಿಕೊಂಡರೆ ನನಗೆ ತಿಳಿಯೋದು ಹೇಗೆ ಮಂಗಮ್ಮ ? ಧೈರ್ಯವಾಗಿ ಹೇಳು.

[ಮಂತ್ರಸಾನಿ ಮಾತಾಡಲು ಅನುವಾಗುತ್ತಿದ್ದಂತೆ ಮೇಳದ ಗೀತೆ ಪ್ರಾರಂಭವಾಗುವುದು. ರಾಗಿಣಿ ರಂಜಿನಿಯರು ಪ್ರವೇಶಿಸಿ ಗೀತದ ಭಾವಗಳನ್ನು ಅಭಿನಯಿಸಿ ತೋರಿಸುವರು]

ಮೇಳದ ಗೀತ

ಹಗಲೆಲ್ಲ ಕನಸಾಯ್ತು ಇರುಳು ಬಾರದು ನಿದ್ದಿ
ಹೆಗಲೇರಿ ಕುಂತವನೆ ಮಾರ, –ಕೇಳಮ್ಮ
ಸೊರಗವನೆ ಮಂತ್ರಿ ಕುಮಾರ.

ನೀನಿಲ್ಲದಿದ್ದಾಗ ನಿನ್ನ ಮನಿಗೆ ಬಂದು
ಏನೇನೋ ಮಾಡತಾನೆ ಸಂಚ....ಗೆಣೆಗಾರ
ನೋಡಿ ನೀ ಮಲಗಿದ್ದ ಮಂಚ.

ತಲೆದಿಂಬ ತೆಗೆದೆದೆ– –ಗಿಟ್ಟು ಮುದ್ದಾಡತಾನೆ
ಆಡತಾನಕ್ಕರೆಯ ಮಾತುಗಳ, —ಗೆಣೆಗಾರ
ಬಿಡೆನೆಂದು ಹಿಡಿತಾನೆ ಕೊರಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲಡಿ ಕೂತುಕೊಂಡು ನಿನ್ನ ಕಾಲೊತ್ತುತಾನೆ
ಆಳುಮಗ ನಿಮಗೆ ನಾನೆನುತ — ಗೆಣೆಗಾರ
ಮುತ್ತ ಕೊಡುತಾನೆ ಪದತಳಕ.

ನೀನು ಕುಡಿದ ಗಿಂಡಿ ನೀನುಂಡ ಗಂಗಾಳ
ನೀಗಿತ್ತು ನನ್ನ ಹಸಿವೆಂದು, –ಗೆಣೆಗಾರ
ತೇಗ ಬಿಡುತಾನಲ್ಲಿ ನಿಂದು.

ನೀನು ಮುಡಿದ ಹೂವ ಕಣ್ಣಿಗೊತ್ಕೋ ತಾನೆ
ನೀ ಬಿಟ್ಟ ಚಿಗುರೆಲೆ ತೊಟ್ಟ–ಗೆಣೆಗಾರ
ಜಿಗಿದು ಬಾಯ್ಗಿಟ್ಟ ಮತಿಗೆಟ್ಟ.

ಬಿಚ್ಚಿಟ್ಟ ಕುಪ್ಪುಸ–ಕವನ ಕೈಯಲಿ ತ್ರಾಸ
ಪಚ್ಚೆ ಉಂಗುರ ಮಿರುಗಿರಲು, –ಗೆಣೆಗಾರ
ಮುಚ್ಚ ತೆಗೆದನೆರಡು ಸಾಲು

ನೀನುಟ್ಟ ಸೀರೆಯ ನಿಲುಗೊಂಜೆಗುಡಿಸುತ
ಸೆರಗ ಸರಿಸಿ, ನಕ್ಕು ನಗಿಸಿ, –ಗೆಣೆಗಾರ
ನಿರಿಗೆ ಕೈಯಿಡುತಾನೆ ಮರೆಸಿ

[ಕುತೂಹಲದಿಂದ ಕೇಳುತ್ತಿದ್ದ ರಾಣಿ, ಕೊನೆಯ ನುಡಿಯಲ್ಲಿ ರಾಗಿಣಿ ರಂಜನಿಯರ ಅಶ್ಲೀಲ ಅಭಿನಯವನ್ನು ಕಂಡು ಕೋಪ ದಿಂದ ಎದ್ದು ನಿಂತು.]

ರಾಣಿ : ನಿಲ್ಲಿಸು ನಿನ್ನ ಅಸಂಬದ್ಧ ಕತೆಯನ್ನು

[ಎಂದು ಪಟಾರನೆ ಮಂಗಮ್ಮನ ಕೆನ್ನೆಗೆ ಹೊಡೆಯುವಳು. ಮಂತ್ರಸಾನಿ ಕುಸಿದು ಬೀಳುವಳು. ರಾಗಿಣಿ ರಂಜನಿಯರು ಹಠಾತ್ತನೆ ನಾಟ್ಯವನ್ನು ನಿಲ್ಲಿಸಿ ರಾಣಿಯ ಬಳಿಗೆ ಬರುವರು]

ರಾಣಿ : ಈ ಮುದುಕಿಯನ್ನ ಎಳೆದುಕೊಂಡು ಹೋಗಿ ಸೆರೆಮನೆಗೆ ತಳ್ಳಿರಿ. ಕೊಳೆಯಲಿ ಅಲ್ಲಿ ಅವಳು.

Sri Vidyabharathi Book Centre, Sringeri

 CC-O. In Public Domain. Digitized by eGangotri

ರಂಜನಿ : ಆಗ್ಲಿ (ಎಂದು ಮಂತ್ರಸಾನಿಯನ್ನ ಎಳೆದು ಕೊಂಡ ಹೋಗುವಳು)

ರಾಣಿ : ಮಂತ್ರಸಾನಿಯ ಅಸಂಬದ್ಧ ಕತೆಯಿಂದ, ಅಶ್ಲೀಲ ನುಡಿಗಳಿಂದ ಈ ಮನೆಯೆಲ್ಲ ಅಪವಿತ್ರವಾಗಿದೆ ರಾಗಿಣಿ, ಗಂಗೋದಕವನ್ನು ಸಿಂಪಡಿಸಿ ಹೂಗಳನ್ನ ಹರಡರಿ

ರಾಗಿಣಿ : ಆಜ್ಞೆ

(ಎಂದು ರಾಗಿಣಿ ನಾಟ್ಯದಿಂದ ಗಂಗೋದಕವನ್ನ ಸಿಂಪಡಿಸಿ, ಹೂಗಳನ್ನು ಹರಡುತ್ತಿದ್ದಂತೆ, ಮೇಳದವರು)

ಗೀತ

ಮಾತಿನ ಶ್ಲೀಲದ ಕೊಳೆ ತೊಳೆದೇನಾಯ್ತು
ಉಳಿದಿತ್ತು ಮನಸಿನ ಶ್ಲೀಲ.
ಮಾತಿಗೆ ನಿಲುಕದ ಮನಸಿ ನಾಳದ ಕೊಳೆ.
ಕುಣಿದಾಡೆ ಬಿಚ್ಚಿತ್ತು ಬಾಲ
ತನ್ನಾಳ ಮನಸಿನ ಭಾವವನರಿಯರು
ಕಟ್ಟುವರು ಸೆರಗಲ್ಲಿ ಕೆಂಡ,
ಸುಟ್ಟಿತುಟ್ಟ ಸೀರೆ ತನುಗೆರಗಿತು ಜ್ವಾಲೆ
ಮತ್ತೆ ಕೊಡುವರು ತಲೆದಂಡ
ಮನಸಿನ ನಿಲುವೆ ಕಾ— ರಣವು ಈ ಲೋಕಕ್ಕೆ
ಮನವೆ ಕಟ್ಟಿತ್ತು ಸಂಸಾರ,
ಮನವಳಿದಿರೆ ಸರ್ವ ಲೋಕಗಳಳಿವುವು
ಅದುವೆ ಮೋಕ್ಷದ ಸಿದ್ಧಿಸಾರ

(ಗೀತೆ ಮುಗಿದಂತೆ ರಾಗಿಣಿ ತಲ್ಪದ ಮೇಲೆ ಕುಳಿತ ರಾಣಿಯ ಬಳಿಗೆ ಬರುವಳು)

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಜಿನಿ : (ಪ್ರವೇಶಿಸಿ) ಅವರು ಬಂದಾರ್ರಿ ಮಹಾರಾಣಿ

ರಾಣಿ : ಅವರು ಅಂದ್ರೆ?

ರಂಜಿನಿ : ಹೊಸಮಂತ್ರಿ, ಪ್ರಣವಕುಮಾರರು

ರಾಣಿ : ರಾಗಿಣಿ, ನೀನು ಹೋಗಿ ಅವರನ್ನ ಕರೆಕೊಂಡು ಬಾ

ರಾಗಿಣಿ: ಆಜ್ಞೆ (ಹೋಗುವಳು)

[ರಂಜಿನಿ ನಲುಗಿದ ಹಾಸಿಗೆ ದಿಂಬುಗಳನ್ನು ಸರಿಪಡಿಸುತ್ತಿದ್ದಂತೆ. ರಾಗಿಣಿ ಪ್ರಣವಕುಮಾರನನ್ನ ಕರೆದುಕೊಂಡು ಎಡಗಡೆಯ ರಂಗಶೀರ್ಷದಿಂದ ಪ್ರವೇಶಿಸುವಳು.]

ರಾಗಿಣಿ : ಹೀಗೆ ದಯಮಾಡಿಸಬೇಕು. ಹೂವು ಹರಡಿದ ದಾರೀಲಿ ನಡೆಯೋ ಪುಣ್ಯ ಒದಗಿ ಬಂದಿದೆ ನಿಮುಗಿಂದು.

ಪ್ರಣವಕುಮಾರ : ಯಾರಿಗಾಗಿ ಈ ಸಿದ್ಧತೆ?

ರಾಗಿಣಿ : (ವ್ಯಂಗ್ಯದ ದನಿಯಿಂದ) ನಿಮಗಾಗಿ ಅಂತ ತಿಳಿದ್ರೆ ಎಡವೀರಿ, ಮಂತ್ರಿವರ್ಯರೆ, ಇದಕ್ಕೆ ಕಾರಣಳಾದ ಮಂತ್ರಸಾನಿ ಮಂಗಮ್ಮನ್ನ ಮಹಾರಾಣಿಯವರು ಈಗ ತಾನೆ ಸೆರೆಮನೆಗೆ ಕಳುಹಿಸಿದರು.

ಪ್ರಣವಕುಮಾರ : ಮಂತ್ರಸಾನಿ ಮಾಡಿದ ಅಪರಾಧ?

ರಾಗಿಣಿ : ನನಗೆ ಹೇಳೊದಕ್ಕೆ ನಾಚಿಕೆ ಆಗತ್ತೈತ್ರಿ. ಮನಸ್ಸು ಮಾಡಿದರೆ ರಾಣೀ ಸಾಹೇಬರೇ ಅದನ್ನ ನಿಮಗೆ ಹೇಳಬಹುದು. ಸ್ತ್ರೀಣಾಂಚ ಚಿತ್ತಂ ಪುರುಷಸ್ಯ ಭಾಗ್ಯಂ.

ಪ್ರಣವಕುಮಾರ : (ಮೃದುವಾಗಿ ನಕ್ಕು) ಎರಡು ದಿನಕ್ಕೆ ಪರಿಣತೆಯಾದೆ, ರಾಗಿಣಿ. ಆ ಸುಭಾಷಿತದ ಮುಂದಿನ ಚರಣ ನಿನಗೆ ಗೊತ್ತಿದೆ ಏನು? "ಬ್ರಹ್ಮೋ ನ ಜಾತಿ ಸ್ತ್ರೀಯಶ್ಚರಿತ್ರಂ" ಸ್ತ್ರೀಯರ ಚರಿತ್ರೆಯನ್ನು ಬ್ರಹ್ಮನೂ ತಿಳಿಯಲಾರ. ಹೆಂಗಸರ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ನಡಕೋಬೇಕು ಅಂತ ನಮ್ಮ ಗುರುಗಳು ಹೇಳುತಿದ್ದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಗಿಣಿ : ಮಂತ್ರಿಯಾದ ಮೇಲೆ ಗುರುಬೋಧೆಯನ್ನು ಮರೀಬೇಕು ಅಂತ ನಿಮಗಾರೂ ಹೇಳಲಿಲ್ಲೇನು ?........ ನಡೆಯಿರಿ. ರಾಣಿಯರು ನಿಮಗಾಗಿ ಕಾದಿದಾರೆ.

(ಎಂದು ಪ್ರಣವಕುಮಾರನನ್ನು ರಾಣಿಯ ಬಳಿಗೆ ಕರೆದು ಕೊಂಡು ಹೋಗುವಳು.)

ರಾಗಿಣಿ : ಮಂತ್ರಿ ಪ್ರಣವಕುಮಾರರು ವಂದಿಸುವರು ಮಹಾರಾಣಿ.

ಪ್ರಣವಕುಮಾರ : (ಕೈಯೆತ್ತಿ ವಂದಿಸುವನು)

ರಾಣಿ : ನಿಮ್ಮ ಕಡತಗಳೆಲ್ಲಿ ? ಕಾಣುತ್ತಿಲ್ಲ ?

ರಾಗಿಣಿ : ಹೊರಗೆ ರಾಶಿಯಾಗಿ ಬಿದ್ದಿದೆ, ಮಹಾರಾಣಿ. ಅಪ್ಪಣೆ ಆದರೆ ತರತೇನಿ.

ರಾಣಿ : ಅಗತ್ಯವಿಲ್ಲ. ಈದಿನ ರಾಜ್ಯಕಾರ್ಯಕ್ಕೆ ಬಿಡುವು. ಧರ್ಮ ಶಾಸ್ತ್ರವನ್ನು ಕುರಿತು ಮಾತಾಡಬೇಕಾಗಿದೆ ಇವರ ಸಂಗಡ................... ನೀನಿನ್ನು ಹೋಗಬಹುದು. (ರಾಗಿಣಿ ರಂಜನಿಯರು ಹೋಗುವರು.) ಹೀಗೆ ಕುಳಿತುಕೊಳ್ಳಿರಿ, ಪ್ರಣವಕುಮಾರ.

(ಎಂದು ಪಾರ್ಶ್ವದಲ್ಲಿ ಸ್ಥಳ ಮಾಡುವಳು.)

ಪ್ರಣವಕುಮಾರ : ನಾನು ! .... ಸನ್ನಿಧಾನದ ಸಮಕ್ಷಮ ಕುಳಿತುಕೊಳ್ಳೋದು !

ರಾಣಿ : ಈಗ ನಾನು ಸನ್ನಿಧಾನವಲ್ಲ, ಸೌಗಂಧಿಕಾ. ಮಹಾರಾಜರು ಕರುಣೆಯಿಂದ ರಾಣಿ ಪದವಿಗೇರಿಸಿದ ಸಾಮಾನ್ಯ ಸಾಮಂತನ ಮಗಳು.

ಪ್ರಣವಕುಮಾರ : ಆದರೂ ತಮ್ಮ ಸಂಗಡ ಏಕಾಸನದಲ್ಲಿ...........

ರಾಣಿ : ಇಲ್ಲಿ ಇಬ್ಬರಿಗೂ ಸ್ಥಳವಿದೆ, ಪ್ರಣವಕಮಾರ.

(ಇನ್ನಷ್ಟು ಸರಿಯುವಳು)

ಪ್ರಣವಕುಮಾರ : ನನಗೆ ಧೈರ್ಯವಿಲ್ಲ ಮಹಾರಾಣಿ.

Sri Vidyabharathi Book Centre, Sringeri

CC-O. In Public Domain. Digitized by eGangotri

(ಎರಡು ಹೆಜ್ಜೆ ಹಿಂದಕ್ಕೆ ಸರಿದು ನಿಲ್ಲುವನು)

ರಾಣಿ : ಹಾಗಾದರೆ ಇದು ನಿನಗೆ ಸರಿಯಾದ ಸ್ಥಾನ.

(ಎಂದು ಕಾಲಿಟ್ಟುಕೊಂಡಿದ್ದ ಮಣೆಯನ್ನು ಮುಂದೆ ತಳ್ಳುವಳು. ಪ್ರಣವಕುಮಾರ ಮಣೆಯನ್ನು ಅಂಗವಸ್ತ್ರದಿಂದ ಒರೆಸಿ, ರಾಣಿಗೆ ವಂದಿಸಿ ಕುಳಿತುಕೊಳ್ಳುವನು.)

ರಾಣಿ : ಈಗ ನಾವು ಸಮಾಧಾನದಿಂದ ಮಾತಾಡಬಹುದಲ್ಲವೆ?

ಪ್ರಣವಕುಮಾರ : ನಿಮ್ಮ ಆ ಸಖಿಯರು ಸೇವೆಯ ನೆವದಿಂದ ನಮ್ಮ ಏಕಾಂತಕ್ಕೆ ಭಂಗ ತರದಿದ್ದರೆ.

ರಾಣಿ : ಆ ಭಯವೇನೂ ಇಲ್ಲ. ನಾನು ಕರೆದಾಗಲೆ ಅವರು ಬರಬೇಕಾದರೆ. ನಾನು ನಿಮ್ಮಿಂದ ಯುದ್ಧರಂಗದಲ್ಲಿ ಏನು ನಡೆದಿದೆ ಎನ್ನೋದನ್ನ ತಿಳಕೊಳ್ಳಬೇಕಾಗಿದೆ.

ಪ್ರಣವಕುಮಾರ : ಸಂಕೋಚವಿಲ್ಲದೆ ಕೇಳಿ, ಸಂಕೋಚವಿಲ್ಲದೆ ಉತ್ತರ ಕೊಡುತ್ತೇನೆ.

ರಾಣಿ : ಯುದ್ಧರಂಗದಲ್ಲಿ ಮಹಾರಾಜರು ಧೈರ್ಯ ಸಾಹಸಗಳಿಂದ ಹೋರಾಡಿದರು ಅನ್ನೋದು ನಿಜವೇ?

ಪ್ರಣವಕುಮಾರ : ನಿಜ, ಮಹಾರಾಣಿ. ಧೈರ್ಯ ಸಾಹಸಗಳಷ್ಟೇ ಅಲ್ಲ, ಹೆಜ್ಜೆ ಹೆಜ್ಜೆಗೂ ಸಾವನ್ನೆದುರಿಸಿ ಮುನ್ನುಗ್ಗಿ ಹೋರಾಡಿ ಮಹಾರಾಜರು ವಿಜಯ ಗಳಿಸಿದರು. ಅಂಗರಕ್ಷಕ ದಳದ ನಾಯಕನಾಗಿ ನಾನು ಕಂಡದ್ದನ್ನ ಹೇಳತಿದೇನೆ.

ರಾಣಿ : ಮಹಾರಾಜರ ಈ ಸಾಹಸವನ್ನು ದಂಡನಾಯಕರು ವಿರೋಧಿಸಲಿಲ್ಲವೆ?

ಪ್ರಣವಕುಮಾರ : ವಿರೋಧಿಸಿದರು, ಪ್ರಭುಗಳು ಶಿಬಿರದಲ್ಲಿದ್ದು ಆಜ್ಞೆ ಮಾಡಿದರೆ ಸಾಕು, ನಾವು ಹೋರಾಡಿ ವಿಜಯ ಗಳಿಸತೇವೆ ಎಂದು ಕೈಮುಗಿದು ಕೇಳಿಕೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಣಿ : ಅದಕ್ಕವರು ಏನು ಹೇಳಿದರು ?

ಪ್ರಣವಕುಮಾರ : ನಾನೂ ನಿಮ್ಮಂತೆ ಯೋಧ. ನೀವು ಪ್ರತಿದಿನ ಸಾವನ್ನೆದುರಿಸಿ ಹೋರಾಡುವಾಗ ನಾನು ಶಿಬಿರದಲ್ಲಿ ಕೈಕಟ್ಟಿಕೊಂಡು ಕುಳಿತಿರೋದು ಸಾಧ್ಯವೆ ? ಹುಟ್ಟಿದವರಿಗೆ ಸಾವು ಖಂಡಿತ. ನೀವು ಅದಕ್ಕೆ ಅಡ್ಡಿ ಬರಬೇಡಿ,— ಎಂದರು.

ರಾಣಿ : ಆ ಮೇಲೆ ?

ಪ್ರಣವಕುಮಾರ : ಮಹಾರಾಜರ ಪರೋಕ್ಷದಲ್ಲಿ ದಂಡನಾಯಕರ ರಹಸ್ಯ ಸಭೆ ನಡೀತು. ಈ ಯುದ್ಧದಲ್ಲಿ ಪ್ರಭುಗಳು ಪ್ರಾಣಾರ್ಪಣೆ ಮಾಡಲು ನಿರ್ಧರಿಸಿಕೊಂಡ ಹಾಗಿದೆ. ನಾವು ಅದನ್ನ ತಪ್ಪಿಸಬೇಕು. ಪ್ರತಿ ಹೋರಾಟದಲ್ಲೂ ನಾಲ್ಕಾರು ಮಂದಿ ಸಂಗಡಿದ್ದು ಪ್ರಭುಗಳಿಗೆ ಅಪಾಯವಾಗದ ಹಾಗೆ ನೋಡಿಕೊಳ್ಳಬೇಕು ಎಂದು ನಿರ್ಧರವಾಯಿತು. ಪ್ರಭುಗಳ ಅಂಗರಕ್ಷಣೆಗಾಗಿ ಒಂದು ರಹಸ್ಯ ದಳ ರಚಿತವಾಗಿ ನಾನು ಅದರ ನಾಯಕನಾದೆ.

ರಾಣಿ : ಯುದ್ಧ ಮುಗಿದು ಶಾಂತಿ ನೆಲಸಿದ ಮೇಲೂ ಮಹಾರಾಜರು ರಾಜಧಾನಿಗೇಕೆ ಹಿಂದಿರುಗಲಿಲ್ಲ ?

ಪ್ರಣವಕುಮಾರ: ಅದರ ಕಾರಣವನ್ನು ಓಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ರಾಣಿ : (ಉತ್ತೇಜಿತೆಯಾಗಿ) ನಿಜವಾದ ಕಾರಣವನ್ನು ಮುಚ್ಚುವ ಮರಗಿನ ಮಾತುಗಳು ಅವು. ಮಹಾರಾಜರ ಈ ಸಾಹಸದ ಅಂತರಂಗಕಾರಣವೇನು ಅನ್ನೋದನ್ನ ನಾನು ನಿನ್ನಿಂದ ತಿಳಿಯಬೇಕಾಗಿದೆ, ಪ್ರಣವಕುಮಾರ.

ಪ್ರಣವಕುಮಾರ: ಅಂತರಂಗದ ಯಾವ ರಾಜಕಾರಣವೂ ನನಗೆ ತಿಳೀದು ಮಹಾರಾಣಿ.

ರಾಣಿ : (ಕೆಲವು ಕ್ಷಣಗಳು ಮೌನ) ಅಂತರಂಗದ ಕಾರಣ ತಿಳಿದಿಲ್ಲ, ಆದರೆ ಬಹಿರಂಗ ಕಾರಣ, ಪ್ರತಿನಿತ್ಯದ ಬಹಿರಂಗ ವರ್ತನೆ. ಎಲ್ಲ ದಂಡನಾಯಕರಂತೆ ಅವರೂ ಪಾನಗೋಷ್ಠಿಯಲ್ಲಿ..............................

(ಶ್ಲೇಷೋಕ್ತಿಯಲ್ಲಿ ನಿಲ್ಲಿಸುವಳು)

Sri Vidyabharathi Book Centre(Sringeri

CC-O. In Public Domain. Digitized by eGangotri

ಪ್ರಣವಕುಮಾರ : ಪ್ರಭುಗಳ ವರ್ತನೆಯನ್ನು ಟೀಕಿಸೋ ಅಧಿಕಾರ ನನಗಿಲ್ಲ, ಮಹಾರಾಣಿ. ದಯಮಾಡಿ ಆ ವಿಚಾರವನ್ನು ಕೇಳಬೇಡಿರಿ.

ರಾಣಿ : ನೀನು ಅವರ ಅಂಗರಕ್ಷಕ ದಳದ ನಾಯಕ, ನಿನಗೆ ಎಲ್ಲ ವಿಷಯಗಳೂ ತಿಳಿದಿರಬೇಕು. ಸಂಕೋಚವಿಲ್ಲದೆ ಉತ್ತರ ಕೊಡೋಹಾಗೆ ಮಾತು ಕೊಟ್ಟಿದ್ದೀ ಅಲ್ಲವೇ ? ನಿನ್ನ ತಂದೆ ಮಹಾಮಂತ್ರಿ ಕಾತ್ಯಾಯನ ಶರ್ಮರು, ರಾಜಧಾನಿಯ ವೇಶ್ಯಾವಾಟಕೆಯಿಂದ ಆರಿಸಿದ ನೂರು ಮಂದಿ ತರುಣ ನರ್ತಕಿಯರನ್ನು ಮಹಾರಾಜರ ಖಾಸಾ ಸೇವೆಗಾಗಿ ಕಳುಹಿಸಿದ ವಿಚಾರ ನನಗೆ ತಿಳಿದಿದೆ.

ಪ್ರಣವಕುಮಾರ : (ಮೌನವಾಗಿ ತಲೆ ತಗ್ಗಿಸುವನು)

ರಾಣಿ : ಹೇಳೋದಿಲ್ವೇ............ ಹೇಳೋದಿಲ್ವೇ........ (ಭುಜ ಹಿಡಿದಾಡಿಸಿ) ನೀನು ಹೇಳದಿದ್ದರೂ ನಾನು ತಿಳಕೋಬಲ್ಲೆ, ಪ್ರಣವಕುಮಾರ. ಇಪ್ಪತ್ತು ವರ್ಷದ ಅನುಭವ ಇದೆ ನನಗೆ, ಯುದ್ಧ, ಬೇಟೆ ಇವು ನೆಪಕ್ಕಾಗಿ. ಮುಖ್ಯ ಉದ್ದೇಶ ಮಹಾರಾಜರ ವಿಲಾಸ ಜೀವನದ ಸಂತೃಪ್ತಿ.

[ರಾಣಿ ಮತ್ತು ಪ್ರಣವಕುಮಾರ ಕುಳಿತಿರುವ ರಂಗದ ಹಿಂಭಾಗ ಕತ್ತಲಾಗಿ ರಂಗಮಧ್ಯದಲ್ಲಿ ಬೆಳಕು ಹೆಚ್ಚುವುದು, ಮೇಳದವರು ಗೀತ ಹಾಡುತ್ತಿದ್ದಂತೆ ರಾಗಿಣಿ ರಂಜನಿಯರು ಪ್ರವೇಶಿಸಿ ಗೀತದ ಭಾವಗಳನ್ನು ಅಭಿನಯಿಸುವರು.]

ಮೇಳದವರ ಗೀತೆ

ಮನಸಿನ ಬೇಸರ ಕಳೆವುದು ಕುಡಿತ,
ತನುವಿನ ತಾಪಕಂಗನೆಯರ ಕುಣಿತ;
ಬದುಕು ಬೊಂಬೆಯಾಟ ನಡೆದಿದೆ ಇಂತು,
ಕಾಮನ ಕೈಯಲ್ಲಿ ಸೂತ್ರದ ತಂತು.
ಇಪ್ಪತ್ತರೊಡನಾಟ ಬೇಲಿ ಇಲ್ಲದ ತೋಟ
ಕಂಡ ಕಂಡವರ ಕೈಚಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂವತ್ತರನುರಾಗ ಮುಗಿದಿತ್ತು ಬಲು ಬೇಗ
ನಲವತ್ತಕಾದನು ಗಂಡು.
ತುಂಬಲೈವತ್ತಕ್ಕೆ ಕಳಚಿ ಬಿದ್ದಿತು ರೆಕ್ಕೆ,
ಹುಡುಕಾಡಿದನು ಸ್ವಾನುಭಾವ
ಮಡದಿ ಮಕ್ಕಳಭಾರ ಬೇಡದ ಸಂಸಾರ
ತಿಳಿದನಿದೆಲ್ಲ ನಿಸ್ಸಾರ.
ಅರವತ್ತು ತುಂಬಿರೆ ,ತಲೆಯೆಲ್ಲ ನೆರೆತಿರೆ,
ಮರಳಿತ್ತು ಮತ್ತೆ ಹೆಣ್ಣಾಸೆ
ಬಂದಿತ್ತು ಹೊಸಪ್ರಾಯ, ಕವಲೆ ಧರ್ಮದ ಪಾಯ,
ಆದನು ಹೆಣ್ಣಿನ ದಾಸ.

[ಗೀತೆ ಮುಗಿದು ರಾಗಿಣಿ ರಂಜನಿಯರು ಕೊನೆಯ ನುಡಿಯ ಪ್ರೇಮಯಾಚನಾ ಭಂಗಿಯಲ್ಲಿ ನಿಲ್ಲುವರು]

ರಾಣಿ : ಮಹಾರಾಜರ ವಿಲಾಸ ಜೀವನದ ವಾಸ್ತವ ಚಿತ್ರ ಅಲ್ಲವೆ ಇದು?....ಹೇಳು, ಪ್ರಣವಕುಮಾರ.... ಏಕೆ ಮೌನವಾಗಿದ್ದೀಯೆ? ....ಹೇಳೊದಕ್ಕೆ ನಾಚಿಕೆಯೇನು ?.... ಒಪ್ಪಿಕೊಂಡರೆ ಅಗೌರವ ಏನು?....ಮಾತಾಡು, ಪ್ರಣವಕುಮಾರ ....ನನ್ನ ಪ್ರಶ್ನೆಗೆ ಉತ್ತರಕೊಡು, ...ಕೊಡೋದಿಲ್ವೆ ಅಥವಾ ಈ ಮೌನವೇ ನಿನ್ನ ಉತ್ತರವೋ?....ನನ್ನ ಕಲ್ಪನೆ ಸತ್ಯ....ನೂರಕ್ಕೆ ನೂರು ಪಾಲು ಸತ್ಯ....ಎಂಥ ಅಭಾಗಿನಿ ನಾನು ! ಇಪ್ಪತ್ತು ವರ್ಷಕಾಲ ನನ್ನನ್ನ ವಂಚಿಸಿ, ಈ ಅಜ್ಞಾನದ ಮೋಹನಿದ್ರೆಯಲ್ಲಿ ಕೆಡವಿದರು ನಿಮ್ಮ ಆ ಧೂರ್ತ ಮಹಾರಾಜರು !

(ಎಂದು ದಿಂಬಿನ ಮೇಲೆ ತಲೆಯಿಟ್ಟು ಅಳುವಳು)

ಪ್ರಣವಕುಮಾರ : ರಾಣಿ ! ರಾಣಿ !

[ಎಂದು ಎದ್ದು ನಿಂತು ಭುಜದ ಮೇಲೆ ಕೈಯಿಟ್ಟು ಸ್ಪರ್ಶದಿಂದ ಚಮತ್ಕೃತನಾಗಿ, ಕೈಯೆತ್ತಿ, ಮಂತ್ರಮುಗ್ಧನಂತೆ ರಾಣಿಯನ್ನು ನೋಡುತ್ತಾ ನಿಲ್ಲುವನು]

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿಣಿ ರಂಜನಿಯರು ನಾಟ್ಯಭಂಗಿಯಿಂದ ಎದ್ದು ಪ್ರಣವ ಕುಮಾರ ಸಮೀಪಕ್ಕೆ ಬರುವರು]

ರಾಗಿಣಿ : ನಮ್ಮನ್ನು ಕೇಳು ಪ್ರಣವಕುಮಾರ, ನಿನ್ನ ಮೂಕ ಪ್ರಶ್ನೆಗೆ ನಾವು ಉತ್ತರ ಕೊಡುತ್ತೇವೆ.

ರಂಜಿನಿ : ರಾಣಿಯ ಮಾನಸ ಪುತ್ರಿಯರು ನಾವು. ಅವಳು ರಾಗಿಣಿ ನಾನು ರಂಜಿನಿ.

ರಾಗಿಣಿ : ಮನಸ್ಸಿನ ಭಾವನೆಗಳು ಹುಟ್ಟೋದು ನನ್ನಿಂದ. ಅದ ರಿಂದಲೇ ನನ್ನ ಹೆಸರು ರಾಗಿಣಿ.

ರಂಜಿನಿ : ಆ ಭಾವನೆಗಳಿಗೆ ಮಾತಿನ ರೂಪ ಕೊಡ್ತೋಳು ನಾನು. ಆದ್ದರಿಂದಲೆ ನನ್ನ ಹೆಸರು ರಂಜಿನಿ.

ರಾಗಿಣಿ : ರಾಣಿಯ ಮನಸ್ಸಿನ ಭಾವನೆಗಳನ್ನು ತೆರೆದ ಪುಸ್ತಕದಂತೆ ನಿನ್ನ ಮುಂದಿಡುತ್ತೇವೆ ನಾವು. ಇಪ್ಪತ್ತು ವರ್ಷಗಳ ಕಾಲ ನನ್ನನ್ನು ವಂಚಿಸಿ ದರು ಮಹಾರಾಜರು.

ರಂಜಿನಿ : ಅಜ್ಞಾನದ ಕತ್ತಲ ಕೋಟೆಯಲ್ಲಿ ನನ್ನನ್ನು ಬಂಧಿಸಿಟ್ಟರು.

ರಾಗಿಣಿ : ಸತೀತ್ವದ ಮರುಳು ಹಿಡಿಸಿ ನನ್ನ ಬಾಳನ್ನ ಹಾಳು ಮಾಡಿ ದರು.

ರಂಜಿನಿ : ಯೌವನದ ಸುಖಸ್ವಪ್ನಗಳನ್ನ ಮಣ್ಣುಗೂಡಿಸಿದರು.

ರಾಗಿಣಿ : (ನಿಟ್ಟುಸಿರಿಟ್ಟು) ಈಗ ನಾನು ಎಚ್ಚೆತ್ತು ಕುಳ್ತಿದ್ದೇನೆ ಈ ಕೆಟ್ಟ ಕನಸಿನಿಂದ,

ರಂಜಿನಿ : ಇದುವರೆಗೆ ನಾನು ಕಳೆದ ನಿಸ್ಸಾರ ಜೀವನದಿಂದ.

ರಾಗಿಣಿ : ನನ್ನ ಮನಸ್ಸಿನ ಆಸೆ ಆಕಾಂಕ್ಷೆಗಳು,

ರಂಜಿನಿ : ದೇಹದ ಸುಖ ಸಂಪರ್ಕಗಳು,

ರಾಗಿಣಿ
ರಂಜಿನಿ } ಈಗ ಎಚ್ಚೆತ್ತು ಹೆಡೆಯೆತ್ತಿ ನಿಂತಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿಣಿ : ಇದುವರೆಗೆ ನಾನು ಚಿಂತಿಸದಿದ್ದ ಪಾಪ ಕಾರ್ಯಕ್ಕೆ ಈಗ ಸಿದ್ಧಳಾಗಿದ್ದೇನೆ.

ರಂಜಿನಿ : ಸತೀತ್ವದ ಮುಸುಕನ್ನ ಕಿತ್ತೆಸೆದು ಅಸತಿ ಆಗತೇನೆ.

ರಾಗಿಣಿ : ನನ್ನ ಮನಃಶ್ಶಾಂತಿಗಾಗಿ, ದೇಹ ಸುಖಕ್ಕಾಗಿ ಜಾರ ಪತಿಯನ್ನ ಮಾಡಕೋತೇನೆ.

ರಂಜಿನಿ : ಪ್ರಣವಕುಮಾರ, ನೀನು ತರುಣ, ರೂಪವಂತ.

ರಾಗಿಣಿ : ನನಗೆ ತಿಳಿದಿದೆ, ನಿನ್ನನ್ನು ಮಹಾರಾಜರು ಮಂತ್ರಿಯಾಗಿ ಮಾಡಿ ರಾಜಧಾನಿಗೆ ಕಳುಹಿಸಿದ್ದರ ಕಾರಣ ನನ್ನ ಸತೀತ್ವ ಪರೀಕ್ಷೆ.

ರಂಜಿನಿ : ಆ ಪರೀಕ್ಷೆಯಲ್ಲಿ ತೇರ್ಗಡೆ ಆಗೋ ಇಚ್ಛೆ ಇಲ್ಲ ನನಗೆ.

ರಾಗಿಣಿ / ರಂಜಿನಿ } ನೀನು ನನ್ನ ಪ್ರಿಯಕರ! ಜಾರಪತಿ : ಪ್ರಣಯದೇವತೆ!

[ಕೊನೆಯ ಮಾತು ಪುನರಾವರ್ತಿತವಾಗಿ ದನಿತಗ್ಗಿ ಮಂದ್ರದಲ್ಲಿ ಮುಗಿಯುತ್ತಿದ್ದಂತೆ ರಾಣಿ ಎದ್ದು ಕುಳಿತುಕೊಂಡು]

ರಾಣಿ : ಪ್ರಣವಕುಮಾರ, ಏಕೆ ಸ್ತಂಭಿತನಂತೆ ನಿಂತಿದ್ದೀಯೆ?.... ಹತ್ತಿರ ಬಾ....ಏಕೆ ಸಂಕೋಚ? ಇಲ್ಲಿ ನಾವಿಬ್ಬರೇ. ಯಾರೂ ಒಳಗೆ ಬರೋದಿಲ್ಲ....ಯಾರನ್ನೂ ಒಳಗೆ ಬಿಡಬಾರದೆಂದು ಆಜ್ಞೆ ಮಾಡಿದ್ದೇನೆ.

ಪ್ರಣವಕುಮಾರ : (ಆಕರ್ಷಿತನಾದಂತೆ ಮಂಚದ ಬಳಿ ಬರುವನು)

ರಾಣಿ : ನನ್ನ ಪಾರ್ಶ್ವದಲ್ಲಿ ಕುಳಿತುಕೊ....(ಕುಳಿತು ಕೊಳ್ಳುವನು) ಹತ್ತಿರ....ಇನ್ನೂ ಹತ್ತಿರ....ಮೈಗೆ ಮೈ ತಾಕುವಂತೆ....(ಹತ್ತಿರ ಸರಿಯುವಳು) ಈಗ ನನ್ನ ಕೈಗಳು ನಿನ್ನ ಭುಜದ ಮೇಲೆ ....(ಭುಜದ ಮೇಲೆ ಕೈ ಇಡುವಳು) ಏಕೆ ಬೆಚ್ಚಿದೆ?....ನನ್ನ ಕೈಯಲ್ಲಿ ವಿದ್ಯುತ್ ಇದೆಯೇ? ಬೆಚ್ಚೋ ಅಷ್ಟು ತೀವ್ರವೇ ನನ್ನ ಸ್ಪರ್ಶ ?....(ಕೆನ್ನೆ ಸವರುತ್ತಾ) ನೋಡು, ಎಷ್ಟು ಮೃದುವಾಗಿದೆ ನನ್ನ ಬೆರಳುಗಳು? ಎಲ್ಲಿ, ನಿನ್ನ ಕೈಗಳನ್ನ ನನ್ನ ಭುಜದ ಮೇಲಿಡು. (ತಾನೇ ಕೈ ಹಿಡಿದು ಭುಜದ ಮೇಲಿಟ್ಟುಕೊಳ್ಳುವಳು) ಮುಖದಲ್ಲಿ ಮುಖವಿಟ್ಟರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ್ರ ಮಂಡಲ ಅಮೃತಸುರಿಸುವುದು. (ತುಟಿಗಳನ್ನು ಮುಂದೆ ಚಾಚು ವಳು. ಪ್ರಣವಕುಮಾರ ಮುಖ ತಿರುಗಿಸುವನು)........ಏಕೆ?........... ಅಮೃತಪಾನ ಬೇಡವೆ ನಿನಗೆ ?....ನೋಡು, ನನ್ನ ಎದೆ ಹೇಗೆ ಡವಡವ ಅಂತ ಹೊಡೆದು ಕೊಳ್ಳುತಿದೆ. ಕಿವಿಯಿಟ್ಟು ಕೇಳಬಹುದು ಆ ಶಬ್ಧವನ್ನ (ಮುಖತಿರುವಿದ್ದಂತೆಯೇ ಪ್ರಣವಕುಮಾರ ತಲೆ ಆಡಿಸುವನು)....ನಿನ್ನ ಎದೆಯೂ ಹಾಗೆಯೇ ಹೊಡಕೊಳ್ಳುತಿರಬೇಕು ಅಲ್ಲವೆ? (ಎಂದು ಅವನ ಕೊರಳು ಎದೆಯಲ್ಲಿ ಕೈ ಆಡಿಸುತ್ತಾ)....ಈ ಪಚ್ಚೆಯ ಪದಕ! (ತಿರುಗಿಸಿ) ನೋಡಿ ಬೆಚ್ಚಿ ಕೈಯೆತ್ತಿ ಹಿಂದಕ್ಕೆ ಸರಿದು)....ಎಲ್ಲಿ ಸಿಕ್ಕಿತು ಇದು ನಿನಗೆ?.... ....ಯಾರು ಇದನ್ನ ಕೊಟ್ಟವರು?

[ಕಣ್ಣರಳಿಸಿ ಬೆದರಿಕೆ ಆಶ್ಚರ್ಯಗಳಿಂದ ಪ್ರಣವಕುಮಾರನನ್ನು ನೋಡುವಳು.]

ಪ್ರಣವಕುಮಾರ: (ರಾಣಿ ದೂರ ಸರಿದದ್ದರಿಂದ ಚೈತನ್ಯ ಪಡೆದು) ಅದು ಚಿಕ್ಕಂದಿನಿಂದ ನನ್ನ ಕೊರಳಲ್ಲಿದೆ, ಮಹಾರಾಣೀ.

ರಾಣಿ: (ಆತಂಕದ ದನಿಯಿಂದ) ಇದರ ವಿಚಾರವಾಗಿ ನಿನ್ನ ತಂದೆ ....ಕಾತ್ಯಾಯನ ಶರ್ಮರು....ನಿನಗೇನಾದರೂ ಹೇಳಿಧಾರೆಯೆ?....

ಪ್ರಣವಕುಮಾರ: ಏನೂ ಹೇಳಿಲ್ಲ.

ರಾಣಿ: ಪದಕ ತೆಗೆದು ನನ್ನ ಕೈಗೆ ಕೊಡು.

ಪ್ರಣವಕುಮಾರ: (ಸಂಕೋಚದಿಂದ) ಅದನ್ನ ಯಾವಾಗಲೂ ಕೊರಳಿಂದ ತೆಗೆಯಬಾರದು ಎಂದು ತಂದೆಯವರು ಹೇಳಿದ್ದಾರೆ, ಮಹಾರಾಣಿ.

ರಾಣಿ: (ಬದಲಿಸಿದ ಕಂಠದಿಂದ) ನಾನು ರಾಣಿ, ಆಜ್ಞೆಮಾಡುತೇನೆ. ತೆಗೆದು ಕೊಡು.

[ಪ್ರಣವಕುಮಾರ ತೆಗೆದು ಕೊಡುವನು]

ರಾಣಿ: (ತೆಗೆದು ಕೊಂಡು ನೋಡುತ್ತಾ) ಹಿಂದೆ ಇದನ್ನು ನಾನು ಯಾವಾಗ, ಎಲ್ಲಿ ನೋಡಿದ್ದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri
[ಚಿಂತಾಮಗ್ನಳಾಗಿ ನೆಟ್ಟದೃಷ್ಟಿಯಿಂದ ಪದಕವನ್ನು ನೋಡುತ್ತಿದ್ದಂತೆ ಮೇಳದವರ ಗೀತೆ ಆರಂಭವಾಗುವುದು. ರಾಗಿಣಿ ರಂಜನಿಯರು ಅಭಿನಯದಿಂದ ಗೀತೆಯನ್ನು ಅರ್ಥರಿಸುವರು]

ಮೇಳದವರ ಗೀತೆ

ಆಳಮನಸಿನಲ್ಲಿ ಅಡಗಿದ್ದ ಕಥೆ ಅದು
ಬಾಳ ಜೇಗುದಿ ಬಂಜೆ ಮೇಳ,
ತಾಳ ಮದ್ದಲೆಯಂತೆ ನಾವದ ವಾಚಿಸಿ
ಬೆಳಗುವೆವದರಂತರಾಳ.

ಹೊಲೆಮನೆಯಲಿ ತಾಯಿ ಬಸುಸುಯ್ದು ಮಲಗಿರೆ,
ನಡೆದಿತ್ತು ಹೊರಗೊಂದು ವಂಥೆ;
ಗುಣಿಸಿ ಗಗನದ ತಾರೆ ಮಸಗೆ ಕತ್ತಲ ತೆರೆ
ತಿಳಿಯದೇನಹುದೆಂದು ಮುಂದೆ.

ಹುಟ್ಟು ಸಾವಿನ ಮಾತು, ಕೆಟ್ಟು ಬದುಕಲು ಸೋತು
ನುಡಿದರು ಜೋಯಿಸರಾಗ,
ಹೆತ್ತ ತಂದೆಗೆ ಮೃತ್ಯು, ತಾಯ್ತನದಾಪತ್ತು,
ಕುಲಕೆ ಕುಠಾರ ಕಠೋರ.

ಒಂದಿನದಾಯುಸ್ಸು ಪಡೆದು ಬಂದಿದೆ ಕೂಸು
ದಿನ ಮುಗಿಯೋ ಮುನ್ನ ನೀವು
ಕಾಡಿಗೆಸೆವುದಿದ ಮಾಡಲೇತಕೆ ಖೇದ ?
ಪಾಪಿ ಜನುಮಕಲ್ಲೆ ಸಾವು.

ಎದೆಗಪ್ಪಿ ಮುದ್ದಿಸಿ, ಹಚ್ಚಡ ಹೊದ್ದಿಸಿ,
ಕೊರಳಿಗ್ಗಾಕುತೆ ಪಚ್ಚೆ ಪದಕ,
ಮಂತ್ರಸಾನಿಯ ಕೈಗೆ ಕೊಟ್ಟರು ಕೂಸನ್ನು
ಮುಂದಾದುದರಿಯರೀತನಕ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಣವಕುಮಾರ: ಯಾರು ಆ ತಾಯಿ? ಒಂದು ದಿನದ ಕೂಸನ್ನು ಕಾಡಿಗೆ ಕಳುಹಿಸಿದ ನಿಷ್ಕರುಣಿ ಹೆಣ್ಣು?

ರಾಗಿಣಿ: ನಮಗದು ತಿಳಿಯದು.

ಪ್ರಣವಕುಮಾರ: ನಿಮ್ಮ ಪಾರದರ್ಶಕ ದೃಷ್ಟಿ ಆ ರಹಸ್ಯವನ್ನು ಭೇದಿಸೋದಕ್ಕೆ ಅಸಮರ್ಥವಾಯಿತೆ?

[ಮೇಳದವರು ಗೀತೆಯ ಕೊನೆ ನುಡಿಯನ್ನು ಹಾಡುವರು. ರಾಗಿಣಿ ರಂಜಿನಿಯರ ಅಭಿನಯ]

[ಮೇಳದವರು ಗೀತೆಯ ಕೊನೆಯ ನುಡಿಯನ್ನ ಹಾಡುವರು ರಾಗಿಣಿ ರಂಜಿನಿಯುವರ ಅಭಿನಯ]

ಗೀತೆ

ಹುಡುಕುವೆನೆಂದರೆ ಮುಂದೆ ಕತ್ತಲ ತೆರೆ,
ಹಿಂದೆ ಕೊರೈಸುವ ಬೆಳಕು,
ಎರಡರ ನಡುವೆ ನಮ್ಮೊಳಗಿನಂಧಃಕಾರ
ಅಜ್ಞಾನ ಕೊರೆದೊಂದು ಬಿರುಕು.

ಪ್ರಣವಕುಮಾರ: (ಆವೇಶದಿಂದ ಉತ್ತೇಜಿತನಾಗಿ) ವಂಚಕಿಯರು ನೀವು, ನಿಮ್ಮನ್ನ ನೀವು ವಂಚಿಸಿಕೊಂಡು ಈಗ ನನ್ನನ್ನ ವಂಚಿಸೋ ಸಂಚು ಹೂಡಿದ್ದೀರಿ....ತೊಲಗಿರಿ ಇಲ್ಲಿಂದ.

ರಾಣಿ: ಆ ತಿಳಿಗೇಡು ಹೆಣ್ಣುಗಳ ಮೇಲೆ ಕೋಪ ಮಾಡೋದರಿಂದ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗೋದಿಲ್ಲ, ಪ್ರಣವಕುಮಾರ.

ಪ್ರಣವಕುಮಾರ: ಕ್ಷಮಿಸಿರಿ ಮಹಾರಾಣಿ. ಆ ಪಚ್ಚೆ ಪದಕದಲ್ಲಿ ನನ್ನ ಜನ್ಮರಹಸ್ಯ ಅಡಗಿದೆ, ಅದನ್ನ ನಾನು ತಿಳೀಬೇಕು, ಅದಕ್ಕಾಗಿ ಶೋಧನೆ ನಡೆಸಬೇಕು.

ರಾಣಿ: (ವಿಚಾರ ಶೀಲ ಗಾಂಭೀರ್ಯದಿಂದ) ಕೋಪ ಆವೇಶಗಳು ನಿನ್ನ ಶೋಧನೆಗೆ ಸಹಾಯ ಮಾಡೋದಿಲ್ಲ, ಪ್ರಣವಕುಮಾರ. ಈಗಾಗಲೆ ನಾವು ಒಂದು ಕ್ಷಣಿಕ ಆವೇಗದ ಅಧೀನರಾಗಿ....

(ಅರ್ಧೋಕ್ತಿಯಲ್ಲಿ ನಿಲ್ಲಿಸುವಳು)

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಣವಕುಮಾರ: (ಚಮತ್ಕೃತನಾಗಿ ಕುತೂಹಲದಿಂದ) ಏನು ಮಾಡಿದೆವು ಮಹಾರಾಣಿ?

ರಾಣಿ: (ವಿಷಾದದಿಂದ) ಜ್ಯೋತಿರ್ಮಯ ನಕ್ಷತ್ರವೊಂದನ್ನು ಒಡೆದು ನುಚ್ಚುನೂರು ಮಾಡಿದೆವು. ಆ ನಕ್ಷತ್ರಚೂರ್ಣ ಬೆಳಕಿನ ಹರಳು ಗಳಂತೆ ಈ ಪ್ರದೇಶದಲ್ಲೆಲ್ಲ ಹರಡಿದೆ.

ಪ್ರಣವಕುಮಾರ: ಯಾವುದು ಆ ನಕ್ಷತ್ರ?

ರಾಣಿ: ತಾಯಿ ಮಕ್ಕಳ ನಡುವೆ ಇರಬಹುದಾಗಿದ್ದ ಅವ್ಯಾಜ ಪ್ರೇಮ. ಕ್ಷಣಿಕ ಆವೇಗದಿಂದ ನಾವದನ್ನು ಕಲುಷಿತ ಗೊಳಿಸಿದೆವು.

ಪ್ರಣವಕುಮಾರ: ನಿಮ್ಮ ಮಾತು ನನಗೆ ಅರ್ಥವಾಗ್ತಿಲ್ಲ ಮಹಾ ರಾಣಿ.

ರಾಣಿ: (ಪ್ರಣವಕುಮಾರನ ಮಾತುಗಳನ್ನ ಗಮನಿಸದೆ ತನ್ನ ಚಿಂತಾ ಧಾರೆಯನ್ನು ಮುಂದುವರೆಸಿ) ಈ ವಿಚಾರದಲ್ಲಿ ನಾನು ನಿನಗಿಂತ ಹೆಚ್ಚು ಅಪರಾಧಿ, ಕುಮಾರ. ಪುರುಷರು ತಾವು ಅಪೇಕ್ಷಿಸಿದ್ದನ್ನ ಯಾವ ಪ್ರಯತ್ನವೂ ಇಲ್ಲದೆ ಸುಲಭವಾಗಿ ಪಡೆಯುವರು. ಸಂತೆಯಲ್ಲಿ ಬೇಕಾದ ವಸ್ತುವನ್ನ ಕೊಂಡುತರುವಷ್ಟು ಸುಲಭ ಗಂಡಿನ ಸಾಧನೆ. ಆದರೆ ಹೆಣ್ಣಿನ ವಿಚಾರ ಅಷ್ಟು ಸಹಜವಲ್ಲ. ತನ್ನ ಅಪೇಕ್ಷೆಯನ್ನ ಪೂರೈಸಿಕೊಳ್ಳೋದ ಕ್ಕಾಗಿ ಹೆಣ್ಣು ಬಿಡುವಿಲ್ಲದೆ ಶ್ರಮಿಸಬೇಕು. ವಂಚನೆ, ವಿಲಾಸ, ವಿಭ್ರಮ, ಈ ಎಲ್ಲ 'ಶಸ್ತ್ರಾಸ್ತ್ರಗಳನ್ನ ಉಪಯೋಗಿಸಬೇಕು. ಬದುಕಿನ ಬಹುಕಾಲವನ್ನ ತನ್ನ ಸಾಧನೆಗಾಗಿ ವೆಚ್ಚಮಾಡಬೇಕು. ಆದರೂ ಕೊನೆಗೆ ಅವಳಿಗೆ ಸಿಕ್ಕೋ ದೊಂದು ಮರೀಚಿಕೆ, ಆಕಾರ ಅಸ್ತಿತ್ವಗಳಿಲ್ಲದ ಒಂದು ಮಹತ್ ಶೂನ್ಯ.

ಪ್ರಣವಕುಮಾರ: ಒಗಟೆಯಂತಿದೆ ನಿಮ್ಮ ಮಾತುಗಳು.

ರಾಣಿ: (ಪ್ರಕೃತಸ್ಥಳಾಗಿ) ಆ ಒಗಟೆಯನ್ನ ಬಿಡಿಸೋ ಪ್ರಯತ್ನ ಮಾಡೋದು ಅನರ್ಥಕ್ಕೆ ಕರೆಕೊಟ್ಟಂತೆ.

ಪ್ರಣವಕುಮಾರ: ಅಂದರೆ?

ರಾಣಿ: ಹೂವನ್ನ ದಳ ದಳವಾಗಿ ಬಿಚ್ಚಿನೋಡುವುದರಿಂದ ಅದರ ಪರಿಮಳದ ನೆಲೆ ಸಿಕ್ಕೋದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಣವಕುಮಾರ: ಹಾಗಾದರೆ ನನ್ನ ಶೋಧನೆಯ ಗತಿ ?

ರಾಣಿ: ಆಶೆಯ ನರಕ, ನಿರಾಶೆಯ ಸ್ವರ್ಗ.

ಪ್ರಣವಕುಮಾರ: (ವಿಷಾದದಿಂದ) ನನ್ನಪಾಲಿಗೆ ಎರಡೂ ಒಂದೇ. ಆಶೆಯ ಮುಸುಕಿನಲ್ಲಿ ನಿರಾಶೆಯ ಉದಯ, ನಿರಾಶಯ ನಸುಕಿನಲ್ಲಿ ಆಶೆಯ ಅಸ್ತ.

ರಾಣಿ: ಹಾಗಂತ ತಿಳಿಯೋದು ಪಲಾಯನದ ಸಂಕೇತ............ ಮನುಷ್ಯ ಇದುವರೆಗೆ ಯಾವ ಸಮಸ್ಯೆಯನ್ನೂ ಓಡಿ ಹೋಗೋದರಿಂದ ಪರಿಹರಿಸಿ ಕೊಂಡಿಲ್ಲ. ಪ್ರಣವಕುಮಾರ, ಸಮಸ್ಯೆಯನ್ನು ಎದುರಿಸಿನಿಂತು ಹೋರಾಡಿ ಗೆಲ್ಲೋದು ನಿನ್ನಂಥ ಯೋಧರ ಲಕ್ಷಣ. ಅದು ನಿನ್ನ ಕರ್ತವ್ಯ ಅಂದರೂ ತಪ್ಪಲ್ಲ. ಬುದ್ಧಿಜೀವಿಯಾದ ಮನುಷ್ಯ, ...ತನ್ನ ಹುಟ್ಟು ಪರಿವಾರ ಪರಿಸ್ಥಿತಿಗಳನ್ನ ದಾಟಿ ನಿಂತಾಗ ಪ್ರತಿಭೆ ಎಚ್ಚೆತ್ತು ಏನು ಹೇಳುತ್ತೆ ಅನ್ನೋದನ್ನ ಕೇಳು.

(ಮೇಳಗಾನ ಆರಂಭವಾಗುವುದು.)

ಗೀತೆ

ಗೆರೆಯೊಂದು ಕವಲೊಡೆದು ಎರಡಾದ ಗೆರೆಗಳು
ಇಹದೊಳು ಮತ್ತೆ ಒಂದಾಗದು;
ನೀನು ನಾನೆಂಬ ವಿಭೇದಗಳಲಿದಾಗ
ಪರದಲ್ಲಿ ಮತ್ತೆ ಕೂಡುವುದು

ಸಮ ಅಂತರದ ಗೆರೆ, ಎರಡೊಂದು ಕೂಡದೆ
ನಡೆವುದೆ ಧರ್ಮದ ಮಾರ್ಗ
ನಡುವೆ ಮತ್ತೊಂದಕ್ಕೆ ಎಡೆಗೊಡದೆಂದೆಂದು
ಮನಸು ಕಲ್ಪಿಸಿದ ಆ ಸ್ವರ್ಗ

ಎಲ್ಲ ದೇಹಗಳಲಿದು ನಿರ್ದೇಹಿಯಾದಾಗ
ಮರಳಿ ಸಲ್ಲುವುದು ಸಂಬಂಧ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರ್ಲಜ್ಜ ನಿರ್ಮಾಯ ನಿತ್ಯ ನಿರಂಜನ
ಶಕ್ತಿದೇವಿಯ ಸ್ಥಿರ ಬಂಧ.

ಮಾತಿಗೆ ನಿಲುಕದ ಮೋಜಿನ ನಿಲುವದು
ಆತ್ಮ ಆತ್ಮದ ಸಾಕ್ಷಾತ್ಕಾರ;

ಸೋತು ಗೆಲ್ಲುವ ಪರಿ, ಸಾಧಕನಿಗೆ ಸಿರಿ
ಅತ್ಮನಿಂದಾತ್ಮನುದ್ಧಾರ.

[ಗೀತೆಯ ಭಾವಾನುಗುಣವಾಗಿ ಅಭಿನಯಿಸಿದ ರಾಗಿಣಿ ರಂಜಿನಿಯರು ಕೊನೆಯ ನುಡಿಯಲ್ಲಿ ಪ್ರಣವಕುಮಾರನನ್ನು ಕರೆದುಕೊಂಡು ನಿಷ್ಕ್ರಮಿಸುತ್ತಿದ್ದಂತೆ ರಾಣಿ ಮತ್ತು ಪ್ರಣವ ಕುಮಾರ ಅಗಲಿಕೆಯ ಭಾವ ಸೂಚಕವಾಗಿ ಕೈ ಚಾಚಿ ನಿಲ್ಲು ವರು]

ತೆರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೩

[ತೆರೆ ಸರಿದಂತೆ ರಂಗದ ಹಿಂಭಾಗದಲ್ಲಿ ಬಿಳಿಯ ತೆರೆಯ ಹಿಂದೆ ಶೂಲದ ಮರದ ಅಡಿಯಲ್ಲಿ ವಸಂತ ನೇಣಿನ ಹಗ್ಗ ಕುಣಿಕೆಗಳನ್ನು ಸರಿಪಡಿಸುತ್ತಿರುವನು. ತೆರೆಯ ಮುಂದೆ ರಾಜಸಭೆಗೆ ಸಜ್ಜಿತವಾದ ಆಸನಗಳು. ವಸಂತನನ್ನು ಹುಡುಕುತ್ತಾ ಎಡಗಡೆಯ ರಂಗಶೀರ್ಷದಲ್ಲಿ ಚಂಪಾ ಕಾಣಿಸಿಕೊಳ್ಳುವಳು.]

ಚಂಪಾ: ಎಲ್ಲಿ ಹೋಗ್ಯಾರೆ ಇವರು! ನೇಪಥ್ಯದಾಗ ಎಲ್ಲಕಡೆ ಹುಡುಕಿದೆ, ಸಿಗಲಿಲ್ಲ. ಹೊರಕ್ಕ ಬಯಲಾಗ ನೋಡದಿ, ಅಲ್ಲೂ ಇಲ್ಲ. ಇನ್ನು ರಂಗಸ್ಥಳ ಒಂದು ಉಳಿದದ, ಅಲ್ಲೂ ಹುಡುಕತೀನಿ........ (ಎಂದು ಪ್ರೇಕ್ಷಕರ ಕಡೆ ನೋಡಿ) ಇನ್ನೇನು ನಾಟಕ ಷುರು ಆಗಬೇಕು........ ಇಲ್ಲದೆ ಹೋದ್ರ ಜನ ರೊಚ್ಚಿಗೇಳ್ತಾರ. ....ಆಗಲೆ ಅವರ ಗುಜು ಗುಜು ಪ್ರಾರಂಭ ಆಗದ.

(ಎಂದು ರಂಗಭೂಮಿಯಲ್ಲಿ ಹುಡುಕಿದಂತೆ ಅಭಿನಯಿಸಿ)

ಇಲ್ಲೂ ಕಾಣೋದಿಲ್ಲ........ಅಂಗಾದರ, ಎಲ್ಲಿ ಹೋಗಿರಬೇಕು?

(ಎಂದು ರಂಗದ ಹಿಂಭಾಗಕ್ಕೆ ಬಂದಾಗ ವಸಂತ ಎದುರಾಗುವನು)

ವಸಂತ: (ಗಡಿಬಿಡಿಯಿಂದ) ದೂರ ಸರಿ! ದೂರ ಸರಿ! ಎದುರಿಗೆ ಬಾಯಿ ತೆರೆದು ನಿಂತಿರೋದು ಕಾಣಲಿಲ್ಲೇನು.

(ಎಂದು ರಂಗಮಧ್ಯಕ್ಕೆ ಎಳೆತರುವನು)

ಚಂಪಾ: ಏನು ನಿಂತದ?.... ನನಗೇನೂ ಕಾಣ್ತಿಲ್ಲ.

ವಸಂತ: (ಚಂಪಳ ಮಾತಿನ ಸರಣಿಯನ್ನು ಅನುಕರಿಸಿ) ತಾವರೆ ಹೂವಿನ ಹಾಂಗ ಕಣ್ಣರಳಿಸಿ ನೋಡಿದ್ರ ಕಾಣೂದಿಲ್ಲ ಅದು.

ಚಂಪಾ: ಮತ್ತ ಹೇಂಗ ಕಾಣ್ತದ?

ವಸಂತ: (ಗಂಭೀರವಾಗಿ) ಒಳಗಣ್ಣಿಗೆ ಕಾಣೋವಸ್ತು ಅದು;....

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡು ಆ ಶೂಲದ ಮರದ ಬೋದಿಗೆ ಮೇಲೆ ಬಾಯಿ ತೆರೆದು, ನಾಲಿಗೆ ಚಾಚಿ, ಕೆಂಗಣ್ಣು ಕಿಡಿ ಹಾರಿಸ್ತಾ ಬಲಿಗಾಗಿ ಕಾದು ಕುಳಿತಾಳ ಮೃತ್ಯು ದೇವತೆ. ನೀನು ಇನ್ನೆರಡು ಹೆಜ್ಜೆ ಮುಂದೆ ಹೋಗಿದ್ರೆ ಕೈ ಚಾಚಿ ಎಳ ಕೊಳ್ತಿದ್ದಳು ನಿನ್ನ.

[ಯಾವುದೋ ಭಯಂಕರ ವಸ್ತುವನ್ನು ಕಂಡಂತೆ ಚಂಪಾ ಕೈಗಳಿಂದ ಮುಖ ಮುಚ್ಚಿಕೊಂಡು ಚೀರುವಳು.]

ವಸಂತ: ಇಷ್ಟೊಂದು ಚೀರಾಡೋದಕ್ಕೆ ಏನು ಕಂಡೆ ಅಲ್ಲಿ?

ಚಂಪಾ: (ಗಾಬರಿಯಿಂದ) ನೀವು ಹೇಳಿದಿರಲ್ಲ ಆ ಮೃತ್ಯುದೇವತೆ, ಕೈಚಾಚಿ ನನ್ನ ಹಿಡಿಯೋದಕ್ಕೆ ಬಂತು ಕಾಣ್ರಿ, ನೀವು ಎಳಕೊಳ್ಳದೆ ಹೋಗಿದ್ರ ಖರೇ ಸಿಕ್ಕಿಬೀಳ್ತಿದ್ದೆ.

[ಎಂದು ಬಿಕ್ಕಿ ಬಿಕ್ಕಿ ಅಳುವಳು]

ವಸಂತ: ಪಾಪ: ನಿಜವಾಗಿ ಹೆಂಗಸು ಬೆದರಿದ ಹಾಗಿದೆ....... **sorry dear,** ನೀನಂಥ ಅಂಜುಬುರುಕಿ ಅಂತ ನನಗೆ ತಿಳಿದಿರಲಿಲ್ಲ.

[ಎಂದು ಸಮಾಧಾನ ಪಡಿಸುವನು]

ಚಂಪಾ: [ನಗುತ್ತಾ] ಬರೋಬರಿ ಠಕ್ಕಿಸಿದೆ ನಿಮ್ಮನ್ನ.

ವಸಂತ: ಹಂಗಾರ ಈ ಚೀರಾಟ, ಹಾರಾಟ, ಇವುಗಳ ಅರ್ಥ?

ಚಂಪಾ: ಅಭಿನಯ! ಅಷ್ಟು ಗೊತ್ತಾಗಲಿಲ್ಲೇ ನಿಮಗ?

ವಸಂತ: ಬಾಳ ಬೆರಕಿ ಅದಿ ನೀನು; ಗುರುವಿಗೇ ತಿರುಮಂತ್ರ ಕಲಿಸೋ ಆಕಿ. ನಾನೂ ನಿನ್ನ ಸಂಗಡ ನೆಗಾಡತೀನಿ.

[ಎಂದು ಇಬ್ಬರೂ ಸರದಿಯ ಪ್ರಕಾರ ನಗುತ್ತಿದ್ದಂತೆ, ರಾಜ ಪುರೋಹಿತ ಪ್ರವೇಶಿಸುವನು]

ಪುರೋಹಿತ: ವಸಂತ! ವಸಂತ! (ನೋಡಿ) ನೀವಿಬ್ಬರೂ ಸೇರಿ ಕೊಂಡು ನಗುವಿನ ಸ್ಪರ್ಧೆ ನಡೆಸತಿರೋ ಹಾಗಿದೆ ಇಲ್ಲಿ?

ವಸಂತ: [ತಬ್ಬಿಬ್ಬಾಗಿ] ನಗುವಿನ ಅಭಿನಯ ಅಭ್ಯಾಸ ಮಾಡ ತಿದ್ದೆವು, ಒಡೆಯರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರೋಹಿತ: ನಿಮ್ಮ ಅಭ್ಯಾಸಕ್ಕೆ ಇದೇ ಅಲ್ಲವೇ ಸಮಯ ....? [ರಂಗದ ಸುತ್ತ ನೋಡಿ] ಎಲ್ಲಾ ಪೂರ್ವ ಸಿದ್ಧತೆ ಮುಗಿದಿಥೆಯೊ ?

ವಸಂತ: ಮುಗಿದಿದೆ, ಒಡೆಯರೆ. ನೀವು ಮಹಾರಾಜರನ್ನ ಕರ ಕೊಂಡು ಬಂದರೆ ಆಟ ಷುರು ಮಾಡಬಹುದು.

ಪುರೋಹಿತ: ಶೂಲದ ಮರ ?

ವಸಂತ: ಅದೇ ನೋಡಿ ಒಡೆಯರೆ.

ಪುರೋಹಿತ: ನೇಣ ಹಗ್ಗಗಳನ್ನು ಭದ್ರವಾಗಿ ಕಟ್ಟಿದ್ದೀಯಾ ?

ವಸಂತ: ಕಟ್ಟಿದೆ ಒಡೆಯರೆ, ಕುಣಿಕೆಯಲ್ಲಿ ನಾನೇ ತಲಿ ಹಾಕಿ ನೋಡೀನ್ರಿ, ಕೊರಳಲ್ಲಿ ಹಗ್ಗದ ಗುರುತು ಇನ್ನೂ ಉಳಿದದ.

[ಎಂದು ಕೊರಳನ್ನು ಸವರಿಕೊಳ್ಳುವನು]

ಪುರೋಹಿತ: ಅಪರಾಧಿಯನ್ನ ಶೂಲಕ್ಕೇರಿಸಿದಾಗ ಹಗ್ಗ ಏನಾ ದರೂ ಹರಿದು ಬಿದ್ದರೆ ನಿನ್ನನ್ನೇ ಶೂಲಕ್ಕೇರಿಸತೇನೆ. ನೆನಪಿರಲಿ.

[ಹೋಗುವನು]

ಚಂಪಾ: ಏಕ್ರೀ ಇವ ಹೀಗಾಡತಾನ ?

ವಸಂತ: ಕಂಪನಿ ಮಾಲೀಕ ಅಲ್ಲವೆ ? ಪ್ರಣವಕುಮಾರನ ಪಾತ್ರ ವಹಿಸಿರೋ ತರುಣನ ಮೇಲೆ ಯಾವುದೋ ಹೆಣ್ಣಿನ ವಿಚಾರದಲ್ಲಿ ಸಿಟ್ಟಾಗಿ ಸೇಡು ತೀರಿಸಿಕೊಳ್ಳೋದಕ್ಕೆ ಸಂಚು ಹೂಡಿದಾನ.

ಚಂಪಾ: ಆ ಹುಡುಗನ್ನ ಶೂಲಕ್ಕೇರಿಸಿದರೆ ನೀವು ನೋಡಕೊಂಡು ಸುಮ್ಮನಿರತೀರ ?

ವಸಂತ: ಸುಮ್ಮನಿರೋದು ಸಾಧ್ಯವೆ ? ಕವಿಯ ಸಂಗಡ ಯೋಚನೆ ಮಾಡಿ ನಾಟಕದ ಗತಿ ಬದಲು ಮಾಡಿಥೇನೆ. ನಾನು ಗೆಲ್ಲತೇನೋ ಮಾಲಿಕ ಗೆಲ್ಲತಾನೋ ನೀನೇ ನೋಡತಿರು. (ಎಂದು ಹೋಗುವರು)

[ಹೊಗಳುಭಟ್ಟರು ಪರಾಕು ಘೋಷಿಸುತ್ತಿದ್ದಂತೆ ಬಿರುದು ಬಾವಲಿಗಳನ್ನು ಹಿಡಿದ ಭಟರಿಂದ ಪರಿವೇಷ್ಟಿತನಾದ ರಾಜ

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನು ಕರೆದುಕೊಂಡು ಪುರೋಹಿತ ಪ್ರವೇಶಿಸುವನು. ಭಟರು ರಂಗದ ಹಿಂಬದಿಯಲ್ಲಿ ಸಾಲಾಗಿ ನಿಲ್ಲುವರು.]

ಪುರೋಹಿತ: ವಿಜಯೀಭವ, ರಾಜಾಧಿರಾಜ ಹರ್ಷವರ್ಧನ ಮಹಾರಾಜ. ಧರ್ಮಾಧಿಕರಣದ ಸಭೆ ಪ್ರಾರಂಭವಾಗೋದಕ್ಕೆ ಮೊದಲು ನಾನು ತಮ್ಮಲ್ಲಿ ಕೆಲವು ವಿಚಾರಗಳನ್ನ ವಿಜ್ಞಾಪಿಸಿಕೊಳ್ಳಬೇಕಾಗಿದೆ.

ರಾಜ: ನಾನೂ ನಿಮ್ಮಿಂದ ಕೆಲವು ವಿವರಗಳನ್ನ ತಿಳಿದುಕೊಳ್ಳ ಬೇಕಾಗಿದೆ.

ಪುರೋಹಿತ: ನಾನು ಸಿದ್ಧವಾಗಿದೇನೆ ಮಹಾಪ್ರಭು.

ರಾಜ: ಅಪರಾಧ ರುಜುವಾತು ಆಗೋದಕ್ಕೆ ಅಗತ್ಯವಾದ ಸಾಕ್ಷ್ಯ ಗಳನ್ನು ಸಂಗ್ರಹಿಸಿಧೀರ, ರಾಜಪುರೋಹಿತರೆ?

ಪುರೋಹಿತ: ಅಟ್ಟ ಹಗಲು ಎಲ್ಲರ ಸಮಕ್ಷಮ ಅಪರಾಧ ನಡೀತಿದೆ ಮಹಾಪ್ರಭು. ರಾಜಕಾರ್ಯದ ನೆವದಿಂದ ಪ್ರಣವಕುಮಾರ ರಾತ್ರಿ ಹಗಲೆನ್ನದೆ ಸಮಯಾಸಮಯಗಳನ್ನು ನೋಡದೆ ಅಂತಃಪುರಕ್ಕೆ ಹೋಗಿ ಬರತಿಧಾನೆ.

ರಾಜ: [ಅಸಮಾಧಾನದಿಂದ] ನಾವು ಕೇಳಿದ್ದು ಅಪರಾಧದ ವಿವರ ಗಳನ್ನಲ್ಲ, ಸಾಕ್ಷಿಗಳನ್ನ ಸಂಗ್ರಹಿಸಿದ್ದೀರ ಅಂತ.

ಪುರೋಹಿತ: ಸಂಗ್ರಹಿಸಿದೆ ಮಹಾಪ್ರಭು. ಮೊದಲನೆಯ ಸಾಕ್ಷಿ ವಸಂತ, ಅಂತಃಪುರದ ಕಂಚುಕಿ, ಎರಡನೆಯ ಸಾಕ್ಷಿ ವಸಂತನ ಹೆಂಡತಿ ಚಂಪಾದೇವಿ. ರಾಜಸಭೆಯಲ್ಲಿ ಪ್ರಣವಕುಮಾರ, ಪ್ರಭುಗಳ ಓಲೆಯನ್ನು ತಂದೊಪ್ಪಿಸಿದಾಗ ಮಹಾರಾಣಿಯವರು ಹೇಗೆ ನಡೆದುಕೊಂಡರು ಅನ್ನೋದನ್ನ ಇವರು ತಿಳಿಸತಾರೆ. [ಎಂದು ಪಟ್ಟಿ ಕೊಡುವನು]

ರಾಜ: ಆ ಮೇಲೆ?

ಪುರೋಹಿತ: ಮಂತ್ರಸಾನಿ ಮಂಗಮ್ಮ ಮೂರನೆಯ ಸಾಕ್ಷಿ ಮಹಾರಾಣಿಯವರಲ್ಲಿ ಪ್ರಣವಕುಮಾರ ಸಲಿಗೆ ಬೆಳೆಸಿದ ಎನ್ನೋದನ್ನ ಇವಳು ಹೇಳತಾಳೆ.

ರಾಜ: ಅರಮನೆಯ ಯಾವುದೋ ಮೂಲೆಯಲ್ಲಿ ಕಣ್ಣು ಮುಚ್ಚಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಬಿದ್ದಿರೋ ಆ ಮುದುಕಿ ಅಂತಃಪುರದಲ್ಲಿ ನಡೆಯೋದನ್ನ ಹೇಗೆ ತಿಳಿಯಬಲ್ಲಳು. ಇದೆಯೋ ನಿಮ್ಮ ಸಾಕ್ಷಿ ಸಂಗ್ರಹದ ವೈಖರಿ?

ಪುರೋಹಿತ: ಕ್ಷಮಿಸಿ ಮಹಾಪ್ರಭು. ಈ ವಿಚಾರದಲ್ಲಿ ನಾನು ಶಕ್ತಿ ಮೀರಿ ಶ್ರಮಿಸಿದ್ದೇನೆ.

ರಾಜ: ಶಕ್ತಿ ಮೀರಿ ಹಣ ಪೋಲು ಮಾಡಿದ್ದೀರಿ........ ರಾಣಿಯ ಸಖಿಯರು ರಾಗಿಣಿ, ರಂಜಿನಿ ಅವರನ್ನೇಕೆ ಸಾಕ್ಷಿಗಳ ಪಟ್ಟಿಯಲ್ಲಿ ಸೇರಿಸಿಲ್ಲ?

ಪುರೋಹಿತ: ಇದ್ದಕ್ಕಿದ್ದ ಹಾಗೆ ಅವರು ಕಾಣೆಯಾಗಿದ್ದಾರೆ, ಮಹಾ ಪ್ರಭು. ಅರಮನೆಯಲ್ಲಿ ಎಲ್ಲ ಕಡೆ ಹುಡುಕಿಸಿದೆ, ಸಿಕ್ಕಲಿಲ್ಲ.

ರಾಜ: ನಿಮ್ಮ ರಕ್ಷಣಾ ವ್ಯವಸ್ಥೆ ಅಷ್ಟು ಚೆನ್ನಾಗಿದೆ.

ಪುರೋಹಿತ: ಕ್ಷಮಿಸಿರಿ, ಮಹಾಪ್ರಭು.

ರಾಜ: (ಕೋಪದಿಂದ) ಏನನ್ನು ಕ್ಷಮಿಸೋದು! ಹೀಗಾದರೆ ಒಂದು ದಿನ ನಾನು ಊರಲ್ಲಿಲ್ಲದಿದ್ದಾಗ ರಾಣಿಯೂ ಕಾಣೆಯಾಗಬಹುದು. ನಿಮ್ಮ ಅವಿವೇಕ ಅದಕ್ಷತೆಗಳಿಗೆ ಮಿತಿಯೇ ಇಲ್ಲ.

ಪುರೋಹಿತ: (ಮೌನವಾಗಿ ತಲೆ ತಗ್ಗಿಸುವನು)

ರಾಜ: (ಸಮಾಧಾನದಿಂದ) ಹೀಗೆ ಬನ್ನಿ, ಪುರೋಹಿತರೆ. (ದನಿ ತಗ್ಗಿಸಿ) ಇದು ರಾಣಿಯ ಶೀಲದ ಪ್ರಶ್ನೆ. ಸಾಕ್ಷಿಗಳು ಹೇಳೋದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದರೂ ಅವರ ತಲೆ ತೆಗೆಸಬೇಕಾಗುತ್ತೆ.

ಪುರೋಹಿತ: (ಯೋಚಿಸಿ) ಹಾಗಿದ್ದರೆ ವಿಚಾರಣೆ ಇಲ್ಲದೆ ಶಾಸ್ತ್ರಗಳ ಆಧಾರದಿಂದ ನಾವು ಅಪರಾಧಗಳನ್ನು ನಿರ್ಧರಿಸಬಹುದು.

ರಾಜ: ಅದು ಹೇಗೆ ಸಾಧ್ಯ?

ಪುರೋಹಿತ: ಸುಭಾಷಿತ ಹೇಳುತ್ತೆ:

ವೇಶ್ಯಾ ವಾ ನೃಪ ವಲ್ಲಭಾ ಕುಲವಧೂ
ವಾ ಹೀನ ವಂಶೋದ್ಭವಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವೃದ್ಧಾ ವಾ ನವಯೌವನಾ ಸಹಧವಾ
ವಾ ನಷ್ಟಭರ್ತಾ ಸ್ತ್ರಿಯಃ
ಪುಂಶ್ಚಲ್ಯಃ ಸಕಲಾಃ ಕಲಾಸು ನಿಪುಣಾಃ
ಭೋಗೈಕ ಜೀವಾ ಯದಿ,

—ಎಂದು. ಅದರ ಪ್ರಕಾರ ಕಲಾನಿಪುಣೆಯಾದ ರಾಣಿ ಪುಂಶ್ಚಲಿಯೇ ಆಗಿರಬೇಕು. ಆಕೆಯ ಸಂಗಡ ಸಲಿಗೆಯಿಂದ ನಡೆದುಕೊಂಡ ಪ್ರಣವಕುಮಾರ ಅಪರಾಧಿ ಎನ್ನೋದರಲ್ಲಿ ಸಂದೇಹವೇ ಉಳಿಯೋದಿಲ್ಲ. ನಿರಂಕುಶ ಪ್ರಭುಗಳಾದ ಮಹಾರಾಜರು ಅವನ ವಧೆಗೆ ಆಜ್ಞೆ ಮಾಡಬಹುದು. ಶೂಲದ ಮರ ಸಿದ್ಧವಾಗಿದೆ.

ರಾಜ: ಮಾಡಬಹುದು. ಆದರೆ ಆಜ್ಞೆಯನ್ನು ಕಾರ್ಯಗತ ಮಾಡೋರು ಯಾರು? ಸೈನಿಕರೆಲ್ಲ ಪ್ರಣವಕುಮಾರನ ಭಕ್ತರು. ಅವನನ್ನ ಪ್ರತ್ಯಕ್ಷ ಕಾರ್ತಿಕೇಯನೆಂದೇ ತಿಳಕೊಂಡಿದ್ದಾರೆ. ಅವನನ್ನ ಉಳಿಸಿಕೊಳ್ಳಲು ನಮ್ಮೆಲ್ಲರನ್ನ ಬಂಧಿಸಲೂ ಅವರು ಸಿದ್ಧ. ಈ ಕಾರಣದಿಂದಲೇ ನಾನು ಪ್ರಣವ ಕುಮಾರನನ್ನ ಮಹಾಮಂತ್ರಿಯಾಗಿ ಮಾಡಿ ರಾಣಿಯ ಹತ್ತಿರ ಕಳುಹಿಸಿದ್ದು.

ಪುರೋಹಿತ: (ವಿನಯದಿಂದ) ಕ್ಷಮಿಸಬೇಕು ಮಹಾಪ್ರಭು, ಪ್ರಣವಕುಮಾರನನ್ನ ನೀವು ಮಹಾಮಂತ್ರಿಯಾಗಿ ಮಾಡಿ ರಾಣಿಯ ಹತ್ತಿರ ಕಳುಹಿಸಬಾರದಾಗಿತ್ತು.

ರಾಜ: ಅದಕ್ಕಿಂತ ದೊಡ್ಡದಾದ ಮತ್ತೊಂದು ತಪ್ಪನ್ನ ನಾನು ಈ ಮೊದಲೆ ಮಾಡಿದ್ದೇನೆ, ಪುರೋಹಿತ. ನೀವು ಉದಾಹರಿಸಿದ ಸುಭಾಷಿತದ ನಾಲ್ಕನೆಯ ಪಾದ

"ತದ್ದೋಷಂ ಪುರುಷಸ್ಯ ಯಸ್ಯ ಲಲನಾ
ಶೀಲಚ್ಯುತೈವ ಪ್ರಿಯಾ।

ಎಂದು ಹೇಳಿ ಎಲ್ಲ ತಪ್ಪನ್ನೂ ಪುರುಷರ ಮೇಲೆ ಹೊರಿಸುತ್ತೆ.

ಪುರೋಹಿತ: (ಏನೂ ತಿಳಿಯದವನಂತೆ) ಸುಭಾಷಿತ ಹಾಗ ಹೇಳಿದ್ದರೆ ಅದು ಕವಿಯ ಕುತರ್ಕ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ : ನಾನು ಹಾಗೆ ಭಾವಿಸೋದಿಲ್ಲ ಪುರೋಹಿತ. ರಾಣಿ ಪುಂಶ್ಚಲಿ ಆಗಿದ್ದರೆ, ಆ ದೋಷ ನನ್ನದು. ಅದರ ಕಾರಣ ನಾನು. ಭೋಗಜೀವರಾದ ವೇಶ್ಯೆಯರ, ಶೀಲಚ್ಯುತರಾದ ಕುಲಸ್ತ್ರೀಯರ ಸಹವಾಸದಲ್ಲಿ ನನ್ನ ಯೌವನ ಕಳೆದೆ. ಅಂತಃಪುರದಲ್ಲಿ ನನ್ನ ಧರ್ಮಪತ್ನಿ ಇದ್ದಾಳೆ ಎನ್ನೋದನ್ನೂ ಮರೆತೆ. ನನ್ನ ವರ್ತನೆಯ ಫಲ,........ತಿರುಗುಬಾಣದಂತೆ ಈಗ ನನ್ನ ಮೇಲೇ ಬಿದ್ದಿದೆ.

ಪುರೋಹಿತ : "ನಾ ವಿಷ್ಣು ಪೃಥುವೀ ಪತಿಃ" ಎಂದು ಹೇಳುತ್ತೆ ಧರ್ಮಶಾಸ್ತ್ರ, ನೀವು ದೇವತೆಗಳ ಅವತಾರ ಮಹಾಪ್ರಭು, ನೀವು ತಪ್ಪು ಮಾಡೋದಿಲ್ಲ. ಮಾಡಕೂಡದು.

ರಾಜ : ಈ ಕಲ್ಪನೆಗಳಿಂದ ಜನರನ್ನ ವಂಚಿಸೋದು ಈಗ ಸಾಧ್ಯ ವಿಲ್ಲ, ಪುರೋಹಿತ. ಈಗ ಅವರು ಎಚ್ಚೆತ್ತಿದ್ದಾರೆ, ರಾಜನೂ ತಮ್ಮಂತೆ ಮನುಷ್ಯ, ರಕ್ತ ಮಾಂಸಗಳಿಂದ ಮಾಡಲ್ಪಟ್ಟವನು, ಗುಣದೋಷಗಳಿಂದ ಕೂಡಿದವನು, ಎನ್ನೋದನ್ನ ಜನ ತಿಳಕೊಂಡಿದಾರೆ. ಸೈನಿಕರಿಗೆ ನನ್ನ ಲಂಪಟ ತನದ ಪರಿಚಯ ಆಗಿದೆ. ಸೆರೆ ಕುಡಿದು, ಎಚ್ಚರತಪ್ಪಿ ನಾನು ವೇಶ್ಯೆಯರ ನಡುವೆ ಒದ್ದಾಡೋದನ್ನ ಕಣ್ಣಾರೆ ಕಂಡಿದ್ದಾರೆ. ಸಿಂಹಾಸನದಿಂದ ಉರುಳಿ ಕೆಸರಲ್ಲಿ ಬಿದ್ದಿದ್ದೇನೆ ನಾನು, ಈಗ ನನ್ನ ಉಳಿಸೋ ಮಾರ್ಗವನ್ನ ನೀವೇ ಹುಡುಕಬೇಕು, ಪುರೋಹಿತ.

ಪುರೋಹಿತ : ನಿಮ್ಮ ದುಡುಕಿನಿಂದ ಉದ್ಧಾರದ ಮಾರ್ಗಗಳು ಮುಚ್ಚಿ ಹೋಗಿವೆ, ಮಹಾಪ್ರಭು. ವಿಚಾರಣೆ ನಡೆಸಿ ಅಪರಾಧಿಯನ್ನು ಶೂಲಕ್ಕೇರಿಸೋದೊಂದೇ ಈಗ ಉಳಿದಿರುವ ಮಾರ್ಗ.

ರಾಜ : ವಿಚಾರಣೆ ನಡೆಸೋರು ಯಾರು ?

ಪುರೋಹಿತ : ಧರ್ಮಾಧಿಕರಣದ ಪ್ರಥಮ ನ್ಯಾಯಾಧೀಶರಾದ ನೀವು.

ರಾಜ : ನನಗಾಧೈರ್ಯವಿಲ್ಲ, ಪುರೋಹಿತ.

ಪುರೋಹಿತ : (ಯೋಚಿಸಿ) ಹಾಗಾದರೆ ನಿವೃತ್ತ ಮಹಾಮಂತ್ರಿ ಕಾತ್ಯಾಯನ ಶರ್ಮರು ವಿಚಾರಣೆ ನಡೆಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ : ಮಗನ ಅಪರಾಧಕ್ಕೆ ತಂದೆಯಿಂದ ವಿಚಾರಣೆ!

ಪುರೋಹಿತ : ಏಕಾಗಬಾರದು, ಪ್ರಭು? ಕಾತ್ಯಾಯನ ಶರ್ಮರು ನ್ಯಾಯಶಾಸ್ತ್ರ ಪಂಡಿತರೆಂದು ಹೆಸರಾಗಿದ್ದಾರೆ. ಅವರ ತೀರ್ಪನ್ನು ನಾಗರಿಕರಂತೆ ಸೈನಿಕರೂ ಒಪ್ಪಿಕೊಳ್ಳುತಾರೆ.

ರಾಜ : ಹಾಗಿದ್ದರೆ ಕೂಡಲೆ ಅವರಿಗೆ ಹೇಳಿ ಕಳುಹಿಸಿರಿ.

ಪುರೋಹಿತ : ಮಗನ ಬಂಧನದ ಸುದ್ದಿಕೇಳಿದ ಕಾತ್ಯಾಯನ ಶರ್ಮರು ತಮ್ಮ ದರ್ಶನಕ್ಕಾಗಿ ಹೊರಟರಂತೆ. ಇನ್ನೇನು ಅವರಿಲ್ಲಿಗೆ ಬರಬಹುದು.

(ಭಟನು ಬರುವನು)

ಭಟ : ಸಚಿವೋತ್ತಮ ಕಾತ್ಯಾಯನ ಶರ್ಮರು ದರ್ಶನಕ್ಕಾಗಿ ಬಂದಿದಾರೆ, ಮಹಾಪ್ರಭು.

ರಾಜ : ಅವರನ್ನು ಕೂಡಲೇ ಒಳಗೆ ಕಳುಹಿಸು.

ಭಟ : ಅಜ್ಞೆ. (ಹೋಗುವನು)

ರಾಜ : ಕಾತ್ಯಾಯನರು ಮಗನ ಪ್ರಾಣಭಿಕ್ಷೆ ಕೇಳಿದರೆ ಅವರಿಗೆ ನಾವು ಕೊಡುವ ಉತ್ತರವೇನು?

ಪುರೋಹಿತ : ನೀವೇ ವಿಚಾರಣೆ ನಡೆಸಿರಿ. ತಪ್ಪು ರುಜುವಾತಾದರೂ ಅಪರಾಧಿಯನ್ನ ಕ್ಷಮಿಸೋ ಅಧಿಕಾರ ನಿಮಗಿದೆ ಎಂದು ಹೇಳಿ, ಎದುರಿಗೆ ಒಂದಿಷ್ಟು ಅನಿಷ ಚೆಲ್ಲಿರಿ.

(ಕಾತ್ಯಾಯನ ಪ್ರವೇಶಿಸುವನು)

ಕಾತ್ಯಾಯನ : ಕಾತ್ಯಾಯನನು ವಂದಿಸುವನು ಮಹಾಪ್ರಭು. ಪ್ರಣವಕುಮಾರನ ಸಂಬಂಧವಾಗಿ ಒಂದು ರಹಸ್ಯವನ್ನ ತಿಳಿಸಲು ನಾನು ಬಂದಿದ್ದೇನೆ.

ರಾಜ : (ಕೃತಕ ಗಾಂಭೀರ್ಯದಿಂದ) ಮಹಾರಾಣಿಯ ಶೀಲಭಂಗ ಪ್ರಯತ್ನದ ಅಪರಾಧಕ್ಕಾಗಿ ಪ್ರಣವಕುಮಾರನು ಬಂಧಿಸಲ್ಪಟ್ಟಿದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾತ್ಯಾಯನ: ಅಪರಾಧವೇನೇ ಇರಲಿ, ವಿಚಾರಣೆ ನಡೆಸಿ ಶಿಕ್ಷೆ ವಿಧಿಸುವವರು ನೀವು ಮಹಾಪ್ರಭು. ಆ ವಿಚಾರದಲ್ಲಿ ನಾನು ಅನಾಸಕ್ತ.

ರಾಜ: ನಿಮ್ಮ ಅನಾಸಕ್ತಿಯ ಕಾರಣ? ನೀವು ಪ್ರಣಯ ಕುಮಾರನ ತಂದೆ!

ಕಾತ್ಯಾಯನ: ನಾನವನನ್ನ ಸಾಕಿದೆ ಅಷ್ಟೇ. ಜನ್ಮವಿತ್ತ ತಂದೆ ಬೇರೆ. ಇದುವರೆಗೆ ರಹಸ್ಯವಾಗಿಟ್ಟಿದ್ದ ಈ ವಿಚಾರವನ್ನ ಪ್ರಭುಗಳಿಗೆ ತಿಳಿಸಿ ದೇಶತ್ಯಾಗ ಮಾಡುವುದು ಈಗ ನನ್ನ ಉದ್ದೇಶ.

ರಾಜ: (ಅಸಮಾಧಾನದಿಂದ) ದೇಶತ್ಯಾಗ! ನಿಮ್ಮ ವರ್ತನೆ ನಮಗೆ ಅರ್ಥವಾಗುತ್ತಿಲ್ಲ ಕಾತ್ಯಾಯನ ಏರ್ಪರಿ?

ಪುರೋಹಿತ: ಇದುವರೆಗೆ ಈ ವಿಚಾರವನ್ನ ರಹಸ್ಯವಾಗಿಟ್ಟ ಕಾರಣ ವೇನು ಎಂಬುದನ್ನು ಸಚಿವೋತ್ತಮರು ತಿಳಿಸಿಲ್ಲ.

ಕಾತ್ಯಾಯನ: ಅನುಮತಿ ಕೊಟ್ಟರೆ ಎಲ್ಲವನ್ನೂ ವಿವರಿಸುತ್ತೇನೆ ಮಹಾಪ್ರಭು.

ರಾಜ: ಹೇಳಿರಿ, ಈ ರಹಸ್ಯವನ್ನು ತಿಳಿಯಲು ನಮಗೂ ಕುತೂಹಲ.

ಕಾತ್ಯಾಯನ: ಅವಧಾರು, ಮಹಾಪ್ರಭು, ಇಪ್ಪತು ವರ್ಷಗಳ ಹಿಂದಿನ ಮಾತು. ಆಗ ನಾನು ಪ್ರಭುಗಳ ಸಚಿವಾಲಯದಲ್ಲಿ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿದ್ದೆ. ಮಂತ್ರಿ ಪದವಿ ಇನ್ನೂ ದೂರದಲ್ಲಿತ್ತು. ಅದೊಂದು ದಿನ ಸರಿ ರಾತ್ರಿ, ನಿದ್ದೆ ಬಾರದೆ ಮನೆಯ ಮುಂದಿನ ನಗರೋದ್ಯಾನದಲ್ಲಿ ತಿರುಗಾಡುತ್ತಿದ್ದಾಗ ಮಧ್ಯಮ ವಯಸ್ಸಿನ ಹೆಂಗಸೊಬ್ಬಳು ಎದುರಿಗೆ ಬಂದು ನಿಂತಳು. ಅವಳ ಉದ್ದೇಶ ಏನೆಂಬುದನ್ನು ತಿಳಿಯಲು, "ಏನಾಗಬೇಕು ನಿನಗೆ?" ಎಂದು ಕೇಳಿದೆ. ಹಚ್ಚಡದಲ್ಲಿ ಮುಚ್ಚಿಟ್ಟುಕೊಂಡಿದ್ದ ಮಗುವನ್ನು ಮುಂದೆ ಹಿಡಿದು ಹೆಂಗಸು, "ಈ ಕೂಸನ್ನ ಸಾಕಿಕೊಳ್ಳಿರಿ ಧಣೀರ," ಎಂದು ಬೇಡಿ ಕೊಂಡಳು. "ಮಗು ಯಾರದು?" ಎಂದೆ ನಾನು ಅದಕ್ಕವಳು, "ನಾನು ಮಂತ್ರಸಾನಿ ಧಣೀರ, ಒಬ್ಬರ ಮನೀಗೆ ಹೆರಿಗೆಗೆ ಹೋಗಿದ್ದಿನ್ರಿ. ಮಗು ಹುಟ್ಟಿದ ನಕ್ಷತ್ರ ಚೆನ್ನಾಗಿಲ್ಲ, ತಂದೆಗೆ ಮೃತ್ಯು,

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಿಗೆ ಮಿಥ್ಯಾಪವಾದ ಎಂತ ಜೋಯಿಸರು ಹೇಳಿದ್ರೂ ಅಂತ ನನಗೆ ರೊಕ್ಕ ಕೊಟ್ಟು, ಈ ಪಾಪಿ ಮಗೂನ ಕಾಡಿಗೆಸೆದು ಬಾ ಎಂತ ಹೇಳಿ ಕಳಿಸಾರ್ರಿ, ನಾನು ಹೆಂಗ್ರಿ ಆ ಕೆಲಸ ಮಾಡಲಿ. ನೀವು ಸಾಕಿಕೊಳ್ಳಿ" ಎಂದು ಹೇಳಿ, ಮಗುವನ್ನು ಅಲ್ಲಿಯೇ ಬಿಟ್ಟು ಹೊರಟು ಹೋದಳು. ಬೇರೆ ಉಪಾಯವಿಲ್ಲದೆ ನಾನು ಮಗುವನ್ನ ಮನೆಗೆ ತೆಗೆದುಕೊಂಡು ಹೋದೆ. ಮಕ್ಕಳಿಲ್ಲದ ನನ್ನ ಹೆಂಡತಿ ಮಗುವನ್ನ ಪ್ರೀತಿಯಿಂದ ಸಾಕಿ ದೊಡ್ಡವನಾಗಿ ಮಾಡಿದಳು. ಆ ಮಗುವೇ ಪ್ರಣವಕುಮಾರ.

ರಾಜ: ಮಗುವಿನ ತಂದೆ ತಾಯಿ ಯಾರು ಎನ್ನೋದನ್ನ ತಿಳಿಯೋದಕ್ಕೆ ನೀವು ಪ್ರಯತ್ನಿಸಲಿಲ್ಲವೆ?

ಕಾತ್ಯಾಯನ: ಪ್ರಯತ್ನಿಸಲಿಲ್ಲ ಮಹಾಪ್ರಭು.

ರಾಜ: ಮಗು ನಿಮ್ಮದಲ್ಲ ಎಂತ ಯಾರಿಗೂ ತಿಳಿಯದೆ?

ಕಾತ್ಯಾಯನ: ಮೊದಲು ಕೆಲವರಿಗೆ ತಿಳಿದಿರಬಹುದು. ಮುಂದೆ ಜನ ಅದನ್ನ ಮರೆತರು. ಪ್ರಣವಕುಮಾರ ನನ್ನ ಮಗನೆಂದೇ ಭಾವಿಸಿದರು.

ರಾಜ: (ಯೋಚಿಸಿ ಕೆಲವು ಕ್ಷಣಗಳ ನಂತರ) ಸುಳ್ಳನ್ನು ಸತ್ಯವೆಂದು ಪ್ರಚಾರ ಮಾಡಿ ನೀವು ಜನರನ್ನು....ನನ್ನನ್ನು ವಂಚಿಸಿದಿರಿ ಕಾತ್ಯಾಯನ ಶರ್ಮರೆ. ನಿಮ್ಮ ಮಗನೆಂಬ ಅಭಿಮಾನದಿಂದ ನಾನು ಪ್ರಣವಕುಮಾರನನ್ನು ಸೈನ್ಯಾಧಿಕಾರಿಯನ್ನಾಗಿ ಮಾಡಿದೆ. ಮಂತ್ರಿ ಪದವಿಯನ್ನ ಕೊಟ್ಟೆ. ಅವನೊಬ್ಬ ಅಪರಿಚಿತ ಅನಾಥನೆಂದು ತಿಳಿದಿದ್ದರೆ ಈ ಅನರ್ಥಗಳೊಂದೂ ನಡೀತಿರಲಿಲ್ಲ.

ಕಾತ್ಯಾಯನ: ಪ್ರಣವಕುಮಾರನು ಅನಾಥ ಅಪರಿಚಿತನಲ್ಲ, ಪ್ರಭು. ಮಗುವಿನ ಕೊರಳಲ್ಲಿದ್ದ ಪಚ್ಚೆಯ ಪದಕದಲ್ಲಿ ಅವನ ಜನ್ಮರಹಸ್ಯ ಅಡಗಿದೆ.

ರಾಜ: ಈಗೆಲ್ಲಿದೆ ಆ ಪದಕ?

ಕಾತ್ಯಾಯನ: ಪ್ರಣವಕುಮಾರನ ಕೊರಳಲ್ಲಿ. ಅದನ್ನ ಯಾವಾಗಲೂ ಕೊರಳಿಂದ ತೆಗೆಯ ಬೇಡ ಎಂದು ನಾನವನಿಗೆ ಹೇಳಿದ್ದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ: ನಾವದನ್ನ ನೋಡಬೇಕು. ಪ್ರಣವಕುಮಾರನನ್ನ ಕರೆತರುವಂತೆ ಭಟರಿಗೆ ಆಜ್ಞೆಮಾಡಿರಿ, ಪುರೋಹಿತ.

ಪುರೋಹಿತ: ಈ ವಿಚಾರದಲ್ಲಿ ನನ್ನದೊಂದು ಸಲಹೆ ಮಹಾಪ್ರಭು,

ರಾಜ: ಏನದು ?

ಪುರೋಹಿತ: ಪ್ರಣವಕುಮಾರನಿಂದ ಪದಕವನ್ನು ತರಿಸುವ ವ್ಯವಸ್ಥೆ ನಾನು ಮಾಡುತ್ತೇನೆ. ಅಷ್ಟರಲ್ಲಿ ಪ್ರಭುಗಳು ಮಂತ್ರಸಾನಿ ಮಂಗಮ್ಮ ಈ ವಿಚಾರದಲ್ಲಿ ಏನು ಹೇಳುತ್ತಾಳೆ ಎನ್ನೋದನ್ನ ತಿಳಿದರೆ ಒಳ್ಳೆಯದು.

ರಾಜ: ಎಲ್ಲಿದ್ದಾಳೆ ಈಗವಳು ?

ಪುರೋಹಿತ: ಇಲ್ಲಿಯೇ, ಭಟರ ಬಂಧನದಲ್ಲಿ.

ರಾಜ: ಮಂತ್ರಸಾನಿ ಮಂಗಮ್ಮನನ್ನ ಒಳಗೆ ಕಳುಹಿಸಿ. ನೀವು ಹೋಗಬಹುದು.

ಪುರೋಹಿತ: ಆಜ್ಞೆ ಮಹಾಪ್ರಭು.

[ಎಂದು ಪ್ರೇಕ್ಷಕರ ಕಡೆ ವಂಚನೆ ವಿಡಂಬನೆಗಳ ನಗೆ ಬೀರಿ ನಿಷ್ಕ್ರಮಿಸುವನು]

(ಕೆಲವು ಕ್ಷಣಗಳು ರಂಗದಲ್ಲಿ ನಿಶ್ಶಬ್ದ. ಅನಂತರ)

ರಾಜ: ಕಾತ್ಯಾಯನ ಶರ್ಮ!

ಕಾತ್ಯಾಯನ: ಆಜ್ಞೆ ಪ್ರಭು.

ರಾಜ: ಆ ಮಗೂನ ತಂದುಕೊಟ್ಟ ಹೆಂಗಸನ್ನು ಪುನಃ ನೋಡಿದರೆ ಗುರುತಿಸಬಲ್ಲಿರಾ ?

ಕಾತ್ಯಾಯನ: ಕೆಲವು ವರ್ಷಗಳ ಅನಂತರ ಆ ಹೆಂಗಸು ಯಾರೆಂಬುದನ್ನ ನಾನು ಗುರುತಿಸಿದೆ.

ರಾಜ: ಯಾರು ಅವಳು ?

ಕಾತ್ಯಾಯನ: ಮಂತ್ರಸಾನಿ ಮಂಗಮ್ಮ. ರಾಣಿಯ ಪ್ರಸವಕ್ಕಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri
ನೀವು ಮಲಯಾಳದಿಂದ ಕರೆಸಿಕೊಂಡ ಸೂಲಗಿತ್ತಿ.

ರಾಜ: ಹಾಗಾದರೆ........ ಆ ಮಗು ಯಾರದೂ ಅನ್ನೊದನ್ನೂ ನೀವು ತಿಳಿದಿರಬೇಕು........... ಅಲ್ಲವೆ?

ಕಾತ್ಯಾಯನ: ಮಗುವಿನ ಕೊರಳಲ್ಲಿದ್ದ ಪಚ್ಚೆಯ ಪದಕವನ್ನು, ನೋಡಿದಾಗಲೇ ನನಗೆ ಸಂದೇಹ ಹುಟ್ಟಿತು. ಶೋಧನೆಯಿಂದ ಅದನ್ನು ಸ್ಥಿರಪಡಿಸಿಕೊಂಡೆ. ಮಗುವನ್ನು ರಾಜಪುತ್ರನಂತೆ ಸಲಹಿದೆ. ರಾಜೋಚಿತ ವಾದ ಎಲ್ಲ ವಿದ್ಯೆಗಳನ್ನು ಕಲಿಸಿದೆ.

ರಾಜ: ಈ ವಿಷಯವನ್ನು ನೀವು ನನಗೇಕೆ ಈ ಮೊದಲೇ ಹೇಳಲಿಲ್ಲ?

ಕಾತ್ಯಾಯನ: ಅದಕ್ಕೆ ವಿಶೇಷ ಕಾರಣವೊಂದಿತ್ತು, ಮಹಾಪ್ರಭು. ಬುದ್ಧಿಪೂರ್ವಕವಾಗಿ ಮಗುವನ್ನು ಬೀದಿಗೆಸೆದ ಆ ತಂದೆ ತಾಯಿ, ಮಗು ಸಾಯದೆ ಉಳಿಯಿತೆಂದೂ ಪ್ರವರ್ಧಮಾನವಾಗಿ ಬೆಳೆಯುತ್ತಿದೆಯೆಂದೂ ತಿಳಿದಾಗ ಅಸಮಾಧಾನ ಪಡಬಹುದೆಂದು ಭಾವಿಸಿದೆ. ಸುಪ್ತವಾಗಿದ್ದ ಭಯ ವಿದ್ವೇಷಗಳು ಎಚ್ಚೆತ್ತುಕೊಳ್ಳಬಹುದೆಂದು ತಿಳಿದೆ.

ರಾಜ: ನೀವು ತಪ್ಪು ಮಾಡಿದಿರಿ ಕಾತ್ಯಾಯನ ಶರ್ಮರೆ. ನಿಮ್ಮ ಆ ತಪ್ಪು ಕಲ್ಪನೆಯಿಂದ ಬಿಡಿಸಲಾಗದಂತಹ........ ಅನೇಕ ಸಮಸ್ಯೆಗಳು ಹುಟ್ಟಿಕೊಂಡಿವೆ.... ಆ ಸಮಸ್ಯೆಗಳು ಎಷ್ಟೊಂದು ಘೋರ........ ಎಂಥ ಬೀಭತ್ಸ........ ಎಂಬುದು ಅರಿವಾದಾಗ ದೇಹ ಕಂಪಿಸುತ್ತೆ. ಎದೆ ಡಬಡಬ ಎಂತ ಹೊಡೆದುಕೊಳ್ಳುತ್ತೆ. ಸಾವಿರಾರು ಚೇಳುಗಳು ಏಕಕಾಲದಲ್ಲಿ ಕುಟುಕಿ ದಂತೆ........ ಅಸಹ್ಯ ಯಾತನೆಯನ್ನು ಅನುಭವಿಸತೇನೆ.

(ವಿಷಣ್ಣನಾಗಿ ತಲೆಯ ಮೇಲೆ ಕೈಯಿಟ್ಟುಕೊಳ್ಳುವನು)

ಕಾತ್ಯಾಯನ: ಮಹಾಪ್ರಭು. ಕೈ ಜೋಡಿಸಿ ಬೇಡಿಕೊಳತೇನೆ ನೀವು ಈಗ ವಿಷಣ್ಣರಾಗಬಾರದು. ನೀವು ಭಾವಿಸಿದಂತೆ ಯಾವ ಅನರ್ಥ ವಾಗಲಿ, ಬೀಭತ್ಸವಾಗಲಿ ನಡೆದಿಲ್ಲ. ಮಹಾರಾಣಿಯ ಸತೀತ್ವದಲ್ಲಿ. ಪ್ರಣವಕುಮಾರನ ಸಂಯಮದಲ್ಲಿ ನನಗೆ ಪೂರ್ಣ ನಂಬಿಕೆ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ: ಆದರೆ....... ನಗರದಲ್ಲಿ ಹರಡುತ್ತಿರುವ ಈ ಜನಾಪವಾದ!

ಕಾತ್ಯಾಯನ: ರಾಣಿಯ ಹೆಸರಿಗೆ ಕಳಂಕ ಹಚ್ಚುವ ಉದ್ದೇಶದಿಂದ ವಿರೋಧಿಗಳು, ಆಸಕ್ತರು ಹರಡುತ್ತಿರುವ ಈ ಅಪವಾದ ನಿರಾಧಾರವಾದದ್ದು.

ರಾಜ: ಸಮಯಾಸಮಯವೆನ್ನದೆ,....... ಪ್ರಣವಕುಮಾರ....... ಅಂತಃಪುರಕ್ಕೆ ಹೋಗಿ ಬರುತ್ತಿದ್ದದ್ದು!

ಕಾತ್ಯಾಯನ: ಅವಸರದ ರಾಜಕಾರ್ಯಕ್ಕೆ ನಿರ್ಬಂಧವಿಲ್ಲ ಎಂದು ನೀವೇ ಪ್ರವೇಶಕ್ಕೆ ಅನುಮತಿ ಕೊಟ್ಟಿರಲಿಲ್ಲವೆ, ಮಹಾಪ್ರಭು. ....ರಾಜ ಕಾರ್ಯದಲ್ಲಿ ರಾಣಿಯ ಆಸಕ್ತಿ, ಪ್ರಣವಕುಮಾರನ ಕಾರ್ಯದಕ್ಷತೆ, ಇವು ಕೆಲವೇ ತಿಂಗಳುಗಳಲ್ಲಿ ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಪ್ರಜೆಗಳ ದೃಷ್ಟಿಯಲ್ಲಿ ಈಗ ರಾಣಿಯವರು ರಾಜಮಾತೆ ಆಗಿದ್ದಾರೆ.

(ಭಟರು ಮಂತ್ರಸಾನಿಯನ್ನು ಕರೆತಂದು ರಾಜನ ಮುಂದೆ ನಿಲ್ಲಿಸಿ ನಿಷ್ಕ್ರಮಿಸುವರು)

ಮಂತ್ರಸಾನಿ: ಅಡ್ಡ ಬಿದ್ದಿನ್ರಿ ಧಣೇರ.

(ಎಂದು ಮೊಣಕಾಲೂರಿ ನಮಸ್ಕರಿಸುವಳು.)

ರಾಜ: ನಿಮ್ಮ ಪಾದಸಾಕ್ಷಿಯಾಗಿ ಸತ್ಯ ಹೇಳತೇನೆ ಅಂತ ಪ್ರಮಾಣ ಮಾಡು, ಮಂಗಮ್ಮ.

ಮಂಗಮ್ಮ: (ಪಾದಗಳನ್ನು ಮುಟ್ಟಿ) ನಿಮ್ಮ ಪಾದದಾಣೆಗೂ ಸತ್ಯ ಹೇಳತೇನೆ ಧಣೇರ.

ರಾಜ: (ಕಾತ್ಯಾಯನನನ್ನು ತೋರಿಸಿ) ಇವರಾರು ನಿನಗೆ ತಿಳಿದಿದೆಯೆ?

ಮಂಗಮ್ಮ: ಯಾಕ್ರೀ ಧಣೇರ ಹಂಗ ಕೇಳ್ತೀರಿ? ನಾ ಕಾಣನಾ ಮಹಾಮಂತ್ರಿಗಳನ್ನು.

ರಾಜ: ನೀನಿವರನ್ನು ಮೊದಲು ನೋಡಿದ್ದು ಯಾವಾಗ?

ಮಂಗಮ್ಮ: ಮೊದಲು ನೋಡಿದ್ದು.......

ರಾಜ: ನೆನಪಿಸಿಕೊಂಡು ಹೇಳು. ಆಗಿವರು ಮಂತ್ರಿ ಆಗಿರಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಚಿವಾಲಯದ ಸಾಮಾನ್ಯ ಅಧಿಕಾರಿ ಆಗಿದ್ದರು.

ಮಂಗಮ್ಮ: ನೆನಪಾತು ಧಣೇರ. ಎರಡು ಹತ್ತು ವರ್ಷಗಳ ಹಿಂದೆ ಒಂದು ದಿನ ಸರಿರಾತ್ರೀಲಿ ಊರಿನ ತೋಟದಾಗ ಇವರನ್ನು ನೋಡಿದ್ದಿನ್ರಿ.

ರಾಜ: ನೋಡಿ ಏನು ಮಾಡಿದೆ?

ಮಂಗಮ್ಮ: ತಂದೆ ತಾಯಿಗೆ ಬೇಡದ ಒಂದು ಮಗುವನ್ನ ಸಾಕಿ ಕೊಳ್ಳಲಿ ಅಂತ ಕೊಟ್ಟೇನ್ರಿ.

ರಾಜ: ಆ ಮಗುವಿನ ತಂದೆ ತಾಯಿ ಯಾರು?

ಮಂಗಮ್ಮ: ಖರೆ ಹೇಳತೀನಿ ಧಣೇರ. ನಿಮ್ಮ ಪಾದ ಮುಟ್ಟಿ ಪ್ರಮಾಣ ಮಾಡ್ತೀನಿ.

ರಾಜ: ಹೇಳು, ಹೇಳು, ಮಂಗಮ್ಮ. ಸತ್ಯವಾಗಿ ಏನು ನಡೆಯಿತು? ನಿನ್ನ ಸತ್ಯ ನಮ್ಮನ್ನು ನರಕಕ್ಕೆ ತಳ್ಳಬಹುದು. ಇಲ್ಲವೇ ಸ್ವರ್ಗಕ್ಕೇರಿಸಬಹುದು.

ಕಾತ್ಯಾಯನ: ಸತ್ಯವು ಬೆಂಕಿಯಂತೆ. ಸತ್ಯವು ಋತ. ಅಸತ್ಯ ಅನೃತಗಳನ್ನು ಅದು ಬೆಂಕಿಯಂತೆ ದಹಿಸಬಲ್ಲುದು. ಸತ್ಯಕ್ಕೆ ನೀವು ಹೆದರ ಬೇಕಾಗಿಲ್ಲ, ಮಹಾಪ್ರಭು.

ಮಂಗಮ್ಮ: ನಾನು ನಿಮ್ಮ ಅನ್ನ ತಿಂದೀನ್ರಿ ಧಣೇರ. ರಾಣಿತಾಯಿ ಹೆರಿಗೆಗಾಗಿ ನೀವು ಹೆಚ್ಚು ರೊಕ್ಕ ಕರ್ಚು ಮಾಡಿ ನನ್ನ ಮಲೆಯಾಳದಿಂದ ಕರೆಸಿದಿರಿ, ನಿಮ್ಮ ಒಳಿತಕ್ಕಾಗೇ ನಾನು ಎಲ್ಲಾ ಮಾಡೀನ್ರಿ.

ರಾಜ: ಏನು ಮಾಡಿದೆ, ಮಂಗಮ್ಮ?

ಮಂಗಮ್ಮ: ರಾಣಿತಾಯನ್ನ ನೋಡಿದಾಗಲೆ ನಾನು ತಿಳಿದಿನ್ರಿ. ಹೊಟ್ಟೇಲಿ ಕೂಸು ಸರಿಯಾಗಿ ಬೆಳೀತಿಲ್ಲ, ಸತ್ತು ಹುಟ್ಟೋದು ಅಂತ. ಅದಕ್ಕೊಂದು ಸಂಚು ಮಾಡಿದೆ. ತಿಳಿದಾಕೆ ಒಬ್ಬಳು ಕಳ್ಳಬಸುರಾಗಿ ನನ್ನ ಹತ್ತಿರ ಬಂದಿದ್ದಳು.... ಆಕೀಗೆ ರೊಕ್ಕದ ಆಸೆ ತೋರಿಸಿ ಸರಿ ಮಾಡಿಕೊಂಡಿದ್ದೆ. ರಾಣಿತಾಯಿ ಹೆರಿಗೆ ಹಿಂದಿನ ದಿನ ಅವಳು ಗಂಡುಮಗು ಹೆತ್ತಳು. ನಾನು ಭಾವಿಸಿದ ಹಾಂಗ ರಾಣಿತಾಯಿಗೆ ಸತ್ತ ಕೂಸು ಹುಟ್ಟಿತು. ಅದನ್ನು ಮುಚ್ಚಿಟ್ಟು ಬೇರೆ ಕೂಸನ್ನ ನಿಮಗೆ ತೋರಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ: (ಆಶ್ಚರ್ಯ ಅಸಮಾಧಾನಗಳಿಂದ) ಇದು ನಿಜವೇ ಮಂತ್ರ ಸಾನಿ ?

ಮಂಗಮ್ಮ: ನಿಜ ಧಣೇರಾ. ನಿಮ್ಮ ಪಾದ ಮುಟ್ಟಿ ಪ್ರಮಾಣ ಮಾಡೀನ್ರಿ.

ರಾಜ: ಹಾಗಾದರೆ ಜ್ಯೋತಿಷ್ಕರ ಮಾತು ಕೇಳಿ ನಾನು ಕಾಡಿಗೆಸೆದ ಮಗು, ಕಾತ್ಯಾಯನ ಶರ್ಮರಿಗೆ ನೀನು ಸಾಕಿಕೊಳ್ಳೋದಕ್ಕೆ ಕೊಟ್ಟ ಮಗು, ಎರಡೂ ಬೇರೆ........ಈ ರಹಸ್ಯ ಇನ್ನಾರಿಗಾದರೂ ತಿಳಿದಿದೆಯೇ ಮಂಗಮ್ಮ?

ಕಾತ್ಯಾಯನ: ಜ್ಯೋತಿಷ್ಕರ ಭವಿಷ್ಯ ಒಂದು ರೀತಿಯಲ್ಲಿ ಫಲಿಸಿ ದಂತೆಯೇ ಆಯಿತು, ಪ್ರಭು. ರಾಣಿ ಹೆತ್ತ ಮಗುವಿನ ನಕ್ಷತ್ರ ದೋಷಗಳೆಲ್ಲ ಆ ಮಗುವಿನ ಅಂತ್ಯದೊಡನೆ ಪರಿಹಾರವಾಯಿತು. ಇನ್ನು ನೀವು ನಿಶ್ಚಿಂತ ರಾಗಿರಿ. ಮಂಗಮ್ಮ ತನ್ನ ಚತುರತೆಯಿಂದ ರಾಣಿಯನ್ನೂ ನಿಮ್ಮನ್ನೂ ನನ್ನನ್ನೂ ಉದ್ಧರಿಸಿದಳು.

ರಾಜ: ಆದರೂ........

(ಮನಸ್ಸಿನ ಅಶಾಂತಿಯಿಂದ ಎದ್ದು ಶತಪಥ ತಿರುಗಾಡುವನು)

ಕಾತ್ಯಾಯನ: ಈ ವೃದ್ಧೆಯನ್ನು ಇಲ್ಲಿಂದ ಕರೆದೊಯ್ಯಿರಿ. ಇಲ್ಲವೆ ಮಹಾರಾಜರ ಅಶಾಂತಿ ಹೆಚ್ಚುವುದು.

(ಭಟರು ಮಂತ್ರಸಾನಿಯನ್ನು ಕರೆದುಕೊಂಡು ಹೋಗು ತ್ತಿದ್ದಂತೆ ;)

[ನೇಪಥ್ಯದಲ್ಲಿ ಸ್ತ್ರೀ ಪುರುಷರ ಮಿಳಿತ ಕಂಠ ;]

ಪ್ರಾಣದಾನ! ಪ್ರಾಣದಾನ! ಪ್ರಣವಕುಮಾರ
ನಿರಪರಾಧಿ. ಅವನನ್ನು ರಕ್ಷಿಸಿರಿ.

ರಾಜ: ಯಾರು ಬೊಬ್ಬೆ ಹಾಕಿದವರು ?

ಕಾತ್ಯಾಯನ: ನಾಗರಿಕರು ಮಹಾಪ್ರಭು. ಅರಮನೆಯ ಬಯಲಲ್ಲಿ ಜನ ಗುಂಪು ಕೂಡಿದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

[ಸಖಿಯರೊಡನೆ ರಾಣಿ ಪ್ರವೇಶಿಸುವಳು. ಹಿಂದೆ ಮೇಳದವರು ಮತ್ತು ನಾಗರಿಕರು. ಮೇಳದವರು ಬಲಭಾಗದ ರಂಗಶೀರ್ಷ ದಲ್ಲಿ ನಿಲ್ಲುವರು. ನಾಗರಿಕರು ರಂಗದಿಂದ ಇಳಿದು ಪ್ರೇಕ್ಷಕ ರೊಡನೆ ಸೇರಿಕೊಳ್ಳುವರು.

ರಾಣಿ ಮತ್ತು ಸಖಿಯರು ಕೈ ಜೋಡಿಸಿ ನಾಟ್ಯಗತಿಯಿಂದ ರಾಜನೆಡೆಗೆ ಹೋಗುತ್ತಿದ್ದಂತೆ ;]

ಮೇಳದವರು

ಪ್ರಣವಕುಮಾರನ ಶೂಲಕೇರಿಸ ಬೇಡಿ
ಬೇಡಿಕೊಂಬೆನು ಮುಗಿದು ಕೈಯ;
ಬಾರೆಂದು ಕರೆದಾಗ ಬಾರದಾರಿಗು ಸಾವು
ಪ್ರಾಣದಾನವ ಮಾಡಿ, ಜೀಯ.

ರಾಣಿ : ಪ್ರಣವಕುಮಾರನಿಗೆ ಮರಣ ದಂಡನೆ ವಿಧಿಸತೀರಿ ಅಂತ ಕೇಳಿ ಕಾತರದಿಂದ ಬಂದಿದ್ದೇನೆ ಪ್ರಭು. ಅವನ ಪ್ರಾಣ ಉಳಿಸಿರಿ.

(ಮೊಣಕಾಲೂರಿ ಕೈ ಜೋಡಿಸಿ ಬೇಡಿಕೊಳ್ಳುವಳು.)

ರಾಜ : ನೀನು ಕೇಳಿದ ವಾರ್ತೆ ನಿಜ ಅಲ್ಲ, ರಾಣಿ. ಈ ಅಭಿನಯ ಮುಗಿಸಿ ಅಂತಃಪುರಕ್ಕೆ ಹಿಂದಿರುಗು.

ರಾಣಿ : ಆಗಲೆ ವಧಕರು ಪ್ರಣವಕುಮಾರನನ್ನ ಶೂಲದ ಮರದ ಹತ್ತಿರಕ್ಕೆ ಕರೆದೊಯ್ದರಂತೆ. ನೀವು ತಡೆಯದೆ ಹೋದರೆ ಅವರು ತಮ್ಮ ಕಾರ್ಯನಡೆಸತಾರೆ.

ಮೇಳದವರು

ದೊರೆಗಳು ನೀವು, ನಿಮ್ಮಾಜ್ಞೆ ಶಿರೋಭಾರ,
ಪ್ರಜೆಗಳ ಜೀವತಿನ್ನುವಿರಾ ?
ನರಭಕ್ಷ ಹುಲಿಯಂತೆ ಕಂಡ ಕಂಡೋರನ್ನ
[illegible] ನೀವು ಲಕ್ಷಿಸಿರಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ : (ಕೋಪದಿಂದ) ರಾಜಾಜ್ಞೆ ಶಿರೋಭಾರವಲ್ಲ, ಶಿರೋಧಾರ್ಯ. ಪ್ರಣವಕುಮಾರನು ಅಪರಾಧಿ, ರಾಜಶಾಸನದಂತೆ ಅವನ ವಿಚಾರಣೆ ನಡೆಯ ಬೇಕಾಗಿದೆ.

ರಾಣಿ : ಪ್ರಣವಕುಮಾರನನ್ನು ಶೂಲಕ್ಕೇರಿಸಿದ ಮೇಲೆ ವಿಚಾರಣೆ ನಡೆಸುವಿರಾ, ಪ್ರಭು? ಇದು ರಾಜಶಾಸನವಲ್ಲ, ರಾಜಶಾಸನದ ವಿಡಂಬನೆ.

ಮೇಳದವರು

ಪ್ರಣವಕುಮಾರನು ಮಾಡಿದ ತಪ್ಪೇನು?
ಸಾಕ್ಷಿಗಳೇನುಂಟು ಅದಕ ?
ಗಾಳಿ ಮಾತನು ಕೇಳಿ ತಾಳಿಯು ಕಳಕೊಂಡ
ಮೂಳಿ ಆಗದಿರಿನಿವನಕ.

ನಾಗರಿಕರು : ಅಹ್ಹಹ್ಹ! (ಗಟ್ಟಿಯಾಗಿ ನಕ್ಕು) ಚೆನ್ನಾಗಿ ಹೇಳಿದಿರಿ ರಾಣಿಸಾಹೇಬ, ಗಾಳಿ ಮಾತು ಹರಡಿತಿರೋನು ರಾಜಪುರೋಹಿತ. ಧಿಕ್ಕಾರ ರಾಜಪುರೋಹಿತನಿಗೆ, ಜೈ! ಪ್ರಣವಕುಮಾರ!

ರಾಜ : (ಕೋಪಾವೇಶದಿಂದ ಚಡಪಡಿಸುತ್ತಾ) ರಾಜಶಾಸನಕ್ಕೆ ದಯಾ ಮಮತೆ ದಾಕ್ಷಿಣ್ಯಗಳಿಲ್ಲ, ರಾಣಿ. ಪ್ರಣವಕುಮಾರನ ಅಪರಾಧ ಸ್ಥಿರವಾದರೆ ಖಂಡಿತ ಮರಣ ದಂಡನೆಗೆ ಗುರಿಯಾಗುವನು.

ನಾಗರಿಕರು : ಪ್ರಣವಕುಮಾರನು ನಿರಪರಾಧಿ. ನಾವು ಅವನನ್ನ ರಕ್ಷಿಸತೇವೆ. ಜೈ ಪ್ರಣವಕುಮಾರ!

(ನೇಪಥ್ಯದಲ್ಲಿ ಜಯಘೋಷ ದೂರದಲ್ಲಿ ಕೇಳಿಬರುವುದು.)

ಮೇಳದವರು

ಕುಲಕೆ ಕಂಠೀಹಾರ, ರಾಜಕಾರಣ ಚತುರ,
ಪ್ರಣವಕುಮಾರ ಸುಚರಿತ್ರ;
ಅವನ ಉಳಿಸಿಕೊಂಡು ನೀವೂನೂ ಉಳಿಯಿರಿ
ಕೀಳ ಬೇಡಿರಿ ವಂಶ ಸೂತ್ರ.

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಣಿ : ನಿರಪರಾಧಿಯನ್ನು ಶಿಕ್ಷಿಸಿ ಆತ್ಮನಾಶ ತಂದುಕೊಳ್ಳ ಬೇಡಿರಿ ಮಹಾರಾಜ, ಪ್ರಣವಕುಮಾರ ಅಳಿದರೆ ರಾಜ್ಯ ಉಳಿಯುವುದಿಲ್ಲ. ನಾನು ಉಳಿಯುವುದಿಲ್ಲ. ನೀವು ಉಳಿಯೋದಿಲ್ಲ.

ರಾಜ : (ಕೋಪಾವೇಶದಿಂದ ದನಿಯೆತ್ತಿ) ಹುಚ್ಚಿ ನೀನು. ಸೌಗಂಧಿಕಾ. ಹುಚ್ಚಿ ಹಾಗೆ ಏನೇನೋ ಅರಚತಿದೀಯ. ಈಗಲೇ ನೀನು ಇಲ್ಲಿಂದ ಹೋಗದೆ ಹೋದರೆ ಭಟರು ನಿನ್ನನ್ನು ಬಲಾತ್ಕಾರದಿಂದ ಎಳಕೊಂಡು ಹೋಗತಾರೆ.

ರಾಣಿ : (ದನಿಯೆತ್ತಿ) ನಿಮ್ಮ ಭಟರಿಗೆ ನನ್ನ ಮೇಲೆ ಕೈಮಾಡೋ ಧೈರ್ಯ ಇದೆಯೆ ನೋಡತೇನೆ. (ಸೆಟೆದು ನಿಲ್ಲುವಳು)

ನಾಗರೀಕರು : ರಾಣೀ ಮೇಲೆ ಕೈಮಾಡಿದರೆ ನಾವು ಸಹಿಸೋದಿಲ್ಲ.

ರಾಜ : (ಆವೇಶದಿಂದ) ಈ ಹುಚ್ಚಿ ಹೆಂಗಸನ್ನ ಬಂಧಿಸಿ ಇಲ್ಲಿಂದ ಕರೆದುಕೊಂಡು ಹೋಗಿರಿ.

ಕಾತ್ಯಾಯನ : ಶಾಂತರಾಗಿರಿ ಮಹಾರಾಜ. ನಾಗರಿಕರು ರಾಣಿಯವರನ್ನು ತಾಯಿ ಹಾಗೆ ಗೌರವಿಸತಾರೆ. ದೇವತೆ ಅಂತ ಪೂಜೆ ಮಾಡತಾರೆ. ಸೈನಿಕರೊಡನೆ ನಾಗರಿಕರೂ ಸೇರಿದರೆ ಅನರ್ಥ ಅನಿವಾರ್ಯ.

ರಾಜ : (ಸಮಾಧಾನದಿಂದ) ನೀನು ಅಪೇಕ್ಷಿಸುವುದೇನು ರಾಣಿ ?

ರಾಣಿ : ಪ್ರಣವಕುಮಾರನ ಬಿಡುಗಡೆ, ಪ್ರಾಣದಾನ.

ನಾಗರಿಕರು : ನಾವು ರಾಣಿಯನ್ನ ಅನುಮೋದಿಸುತ್ತೇವೆ. ಪ್ರಣವಕುಮಾರನ ಬಿಡುಗಡೆ, ಪ್ರಾಣದಾನ.

ರಾಜ : (ನಾಗರಿಕರನ್ನುದ್ದೇಶಿಸಿ ದೊಡ್ಡ ದನಿಯಲ್ಲಿ) ಪ್ರಣವಕುಮಾರ ನಿಮಗೇನಾಗಬೇಕು ?

ರಾಣಿ : ನಾನು ಆ ಪ್ರಶ್ನೆಗೆ ಉತ್ತರ ಕೊಡತೇನೆ. ಪ್ರಣವಕುಮಾರನು ನನ್ನ ಪುತ್ರ, ನಿಮ್ಮ ಔರಸ ಸಂತಾನ. ಜ್ಯೋತಿಷ್ಕರ ಸಲಹೆಯಂತೆ ನಾವು ಕಾಡುಪಾಲು ಮಾಡಿದ ಆ ಕೂಸು ಮಹಾಮಂತ್ರಿ ಕಾತ್ಯಾಯನ ಶರ್ಮರ ಆಶ್ರಯದಲ್ಲಿ ಬೆಳೆದು ರಾಜ್ಯದ ಉದ್ಧಾರಕ್ಕಾಗಿ ಅವತರಿಸಿದೆ.

Sri Vidyabharathi Book Centre, Sringeri

ರಾಜ : ಕಾಡಿಗೆಸೆದ ಆ ಮಗುವೇ ಪ್ರಣವಕುಮಾರನೆಂಬುದಕ್ಕೆ

CC-O. In Public Domain. Digitized by eGangotri

ಸಾಕ್ಷ್ಯವೇನಿದೆ. ?

ರಾಣಿ : ಪ್ರಣವಕುಮಾರನ ಕೊರಳಲ್ಲಿದ್ದ ಪಚ್ಚೆಯ ಪದಕ. ಮಗುವನ್ನ ಮಂತ್ರಸಾನಿಯ ಕೈಗೆ ಕೊಟ್ಟಾಗ ನಾನು ಅದರ ಕೊರಳಿಗೆ ಕಟ್ಟಿದ ಪದಕ ಇದು.

(ಎಂದು ಪದಕವನ್ನು ತೋರಿಸುವಳು)

(ನೇಪಥ್ಯದಲ್ಲಿ ಸೈನಿಕರ ಕೋಲಾಹಲ)

ಸೈನಿಕರು : ಜಯ ! ಜಯ ! ಪ್ರಣವಕುಮಾರ ! ಕಾರ್ತಿಕೇಯಾವತಾರ !

ರಾಜ : (ಚಕಿತನಾಗಿ) ಏನಾಯಿತು ? ಏಕೆ ಈ ಕೋಲಾಹಲ! ಜಯಧ್ವನಿ!

(ವಸಂತ ಅವಸರದಿಂದ ಓಡಿ ಬರುವನು)

ವಸಂತ : ಅನರ್ಥ ! ಅನರ್ಥ ! ರಾಜಪುರೋಹಿತ ಮೇಧಾತಿಥಿ ಶರ್ಮರು ಕೊಲೆಯಾದರು !

ರಾಜ : ಯಾರು ಕೊಲೆ ಮಾಡಿದವರು ?

ವಸಂತ : ರಾಜಪುರೋಹಿತರು ಪ್ರಣವಕುಮಾರನನ್ನ ವಧಾಸ್ಥಾನಕ್ಕೆ ಕರೆದು ಕೊಂಡು ಹೋಗಿ ಶೂಲಕ್ಕೇರಿಸಲು ಪ್ರಯತ್ನಿಸಿದರು. ಈ ಸಂಚು ತಿಳಿದ ಸೈನಿಕರು ರಾಜಪುರೋಹಿತರನ್ನ ಕೊಂದು ಪ್ರಣವಕುಮಾರನನ್ನ ಬಿಡುಗಡೆ ಮಾಡಿದರು. ಈಗ ಅವರು ಜಯ ಘೋಷ ಮಾಡುತ್ತಾ ಪ್ರಣವ ಕುಮಾರನನ್ನ ರಾಜಸಭೆಗೆ ಕರೆತರುತ್ತಿದ್ದಾರೆ.

(ನೇಪಥ್ಯದಲ್ಲಿ ಪುನಃ ಪುನಃ ಸೈನಿಕರ ಜಯ ಘೋಷ)

ರಾಜ : (ವಿಚಲಿತನಾಗಿ ಕೆಲವು ಕ್ಷಣಗಳು ಚಿಂತಿಸಿ) ಈ ಗೊಂದಲ ದಲ್ಲಿ ನನಗೆ ಸ್ಥಾನವಿಲ್ಲ.

(ಎಂದು ಹೊರಡುವನು)

ಕಾತ್ಯಾಯನ : ನಿಲ್ಲಿರಿ, ನಿಲ್ಲಿರಿ ಪ್ರಭು. (ತಡೆಯುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ: ನಾನು ಸಿಂಹಾಸನವನ್ನ ತ್ಯಜಿಸಿದ್ದೇನೆ ಕಾತ್ಯಾಯನ ರಾಜ್ಯದ ಹಿತರಕ್ಷಣೆ ಈಗ ನಿಮ್ಮನ್ನವಲಂಬಿಸಿದೆ,

ಕಾತ್ಯಾಯನ: ಸಿಂಹಾಸನದ ಉತ್ತರಾಧಿಕಾರಿ?

ರಾಜ: ಸಿಂಹಾನದ ಉತ್ತರಾಧಿಕಾರಿ! (ಕೆಲವು ಕ್ಷಣಗಳು ಯೋಚಿಸಿ) ರಾಣಿಯ ಸಂತಾನ, ಪ್ರಣವಕುಮಾರ........ಯಥಾ ಸಮಯದಲ್ಲಿ ನಾನು ಪುನಃ ಕಾಣಿಸಿಕೊಳ್ಳುತ್ತೇನೆ.

(ಎಂದು ಅವಸರದಿಂದ ನಿಷ್ಕ್ರಮಿಸುವನು)

(ಪ್ರಣವಕುಮಾರನನ್ನ ಕರೆದುಕೊಂಡು ಸೈನಿಕರು ಜಯಘೋಷ ಮಾಡುತ್ತಾ ಪ್ರವೇಶಿಸುವರು.)

ನಾಯಕ: ಮಹಾರಾಜರೆಲ್ಲಿ? ನಾವು ಅವರನ್ನ ನೋಡಬೇಕಾಗಿದೆ.

ಕಾತ್ಯಾಯನ: ನೀವು ಮಹಾರಾಜರಿಂದ ಅಪೇಕ್ಷಿಸೋದೇನು?

ನಾಯಕ: ರಾಜಸಭೆಯಲ್ಲಿ ಸರ್ವರ ಸಮಕ್ಷಮ ಪ್ರಣವಕುಮಾರ ನನ್ನ ಅಂಗೀಕರಿಸಿ ಯುವರಾಜ ಪಟ್ಟ ಕಟ್ಟುವಂತೆ ಬೇಡಿಕೊಳ್ಳೋದು.

ಕಾತ್ಯಾಯನ: ಆಗಲೇ ಮಹಾರಾಜರು ಸಿಂಹಾಸನವನ್ನ ತ್ಯಜಿಸಿ ತಮ್ಮ ಉತ್ತರಾಧಿಕಾರಿಯನ್ನ ಗೊತ್ತು ಮಾಡಿಧಾರೆ.

ನಾಯಕ: ಯಾರು ಆ ಉತ್ತರಾಧಿಕಾರಿ?

ಕಾತ್ಯಾಯನ: ನೀವು ಯಾರನ್ನ ಶೂಲದ ಮರದಿಂದ ರಕ್ಷಿಸಿ, ಮೆರವಣಿಗೆಯಲ್ಲಿ ಕರೆತಂದಿರೋ ಆ ಪ್ರಣವಕುಮಾರ.

ಸೈನಿಕರು: ಜಯ ಪ್ರಣವಕುಮಾರ! ಕಾರ್ತಿಕೆಯಾವತಾರ!

ಪ್ರಣವಕುಮಾರ: ನಾನಿದನ್ನು ಬಯಸಲಿಲ್ಲ ತಂದೆ.

(ಕಾತ್ಯಾಯನನಿಗೆ ವಂದಿಸುವನು.)

ಕಾತ್ಯಾಯನ: ನೀನು ಸಿಂಹಾಸನವನ್ನೇರುವುದು ನಿನ್ನ ಬಯಕೆಯ ಫಲವಾಗಿ ಅಲ್ಲ, ಪ್ರಣವಕುಮಾರ. ಅದು ನಿನ್ನ ಜನ್ಮಸಿದ್ಧ ಹಕ್ಕು, ಅಯಾಚಿತ ಫಲ! ನಿನ್ನ ಜನ್ಮಧಾತೆ ರಾಣಿ ಸೌಗಂಧಿಕಾ ದೇವಿಯವರಿಗೆ ಅದಕ್ಕಾಗಿ ಕೃತಜ್ಞತೆ ಸಲ್ಲಿಸು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರಣವಕುಮಾರ: ಹಾಗಾದರೆ ನನ್ನ ಅನ್ವೇಷಣೆ ಮುಗಿಯಿತು. ವಂದಿಸುವೆನು, ತಾಯಿ.

(ಎಂದು ರಾಣಿಯ ಕಾಲುಗಳನ್ನು ಹಿಡಿಯುವನು.)

ರಾಣಿ: ಏಳು ಪ್ರಣವಕುಮಾರ, (ಭುಜಹಿಡಿದೆಬ್ಬಿಸಿ) ನಿನ್ನ ಸ್ಥಾನ ನನ್ನ ಕಾಲುಗಳ ಬಳಿ ಅಲ್ಲ. ನಿನ್ನ ತಂದೆ, ನನ್ನ ಪತಿದೇವರು ಅಲಂಕರಿಸಿದ್ದ ಆ ಸಿಂಹಾಸನದಲ್ಲಿ.

ಸೈನಿಕರು : ರಾಜಾಧಿರಾಜ ! ಪ್ರಣವಕುಮಾರ ! ಕಾರ್ತಿಕೇಯಾವತಾರ! ಜಯ ಪರಾಕು !

ನಾಯಕ ; ಈ ಸಮಯದಲ್ಲಿ ಮಹಾರಾಜರು ಇಲ್ಲಿದ್ದಿದ್ದರೆ........

ಕಾತ್ಯಾಯನ ; ಅವರು ರಾಜಸಭೆಯನ್ನ ಬಿಟ್ಟು ಹೆಚ್ಚು ಹೊತ್ತಾಗಿಲ್ಲ ನಾಯಕರೆ. ಅರಮನೆಯಲ್ಲಿ ಎಲ್ಲಿಯೋ ಇರಬೇಕು. ಹುಡುಕಿಸಿರಿ.

ನಾಯಕ ; (ಸೈನಿಕರನ್ನುದ್ದೇಶಿಸಿ] ಅರಮನೆಯ ಎಲ್ಲ ಕಡೆ ಮಹಾರಾಜರನ್ನು ಹುಡುಕಿ, ದಯಮಾಡಿ ರಾಜಸಭೆಗೆ ಬರುವಂತೆ ಬಿನ್ನವಿಸಿಕೊಳ್ಳಿರಿ

[ಕೆಲವು ಮಂದಿ ಸೈನಿಕರು ಹೋಗುವರು.]

ರಾಣಿ ; ಮಂತ್ರಸಾನಿ ಮಂಗಮ್ಮನ ಸತ್ಯನಿಷ್ಠೆ ನಿನ್ನನ್ನು ರಕ್ಷಿಸಿತು, ಕುಮಾರ. ತಂದೆ ತಾಯಿ ಕಾಡಿಗೆಸೆದ ನಿನ್ನನ್ನು ಕಾತ್ಯಾಯನ ಶರ್ಮರ ಆಶ್ರಯದಲ್ಲಿಟ್ಟು ಅವಳು ಮಹದುಪಕಾರ ಮಾಡಿದಳು, ನಿನ್ನ ಕೃತಜ್ಞತೆ ಅವಳಿಗೆ ಸಲ್ಲಿಸತಕ್ಕದು. [ರಾಜಸಭೆಯ ಸುತ್ತ ಕಣ್ಣಾಡಿಸಿ] ಎಲ್ಲಿ ಮಂತ್ರಸಾನಿ ಕಾಣುತ್ತಿಲ್ಲ. ರಾಜಪುರೋಹಿತರು ಅವಳನ್ನು ಬಂಧಿಸಿ ರಾಜಸಭೆಗೆ ಕರೆದೊಯ್ದರೆಂದು ಕೇಳಿದೆ.

ನಾಯಕ ; ಬಂಧನದಿಂದ ಬಿಡಿಸಿ ನಾವು ಅವಳನ್ನು ಕರೆತಂದಿದ್ದೇವೆ. ಮಹಾರಾಣಿ.

[ಸೈನಿಕನೊಬ್ಬನು ಮಂಗಮ್ಮನನ್ನ ಕರೆದುಕೊಂಡು ಬರುವನು]

ರಾಣಿ ; ಮಂಗಮ್ಮನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡು, ಪ್ರಣವಕುಮಾರ.

Sri Vidyabharathi Book Centre, Sringeri

CC-O. In Public Domain. Digitized by eGangotri

[ಪ್ರಣವಕುಮಾರ ಮಂಗಮ್ಮನನ್ನು ಸಮೀಪಿಸುತ್ತಿದ್ದಂತೆ.]

ಮಂಗಮ್ಮ ; ಅಯ್ಯೋ! ಅಯ್ಯೋ! ನೀವು ನನ್ನ ಕಾಲಿಗೆ ಬೀಳೋದ ಧಣೀರ! [ತಡೆದು] ಕೂಸಾಗಿದ್ದಾಗಲೆ ನಿಮ್ಮ ಮುಖದಲ್ಲಿ ರಾಜ ಕಳೆ ಗುರುತಿಸಿದಿನ್ರಿ ನಾನು.

[ಎಂದು ಪ್ರಣವಕುಮಾರನ ಕಾಲು ಮುಟ್ಟಿ ನಮಸ್ಕಾರ ಮಾಡುವಳು]

[ನೇಪಥ್ಯದಲ್ಲಿ ಪುನಃ ಕೋಲಾಹಲ.]

ಸಂಮಿಳಿತಧ್ವನಿ ; ಮಹಾರಾಜರ ಆತ್ಮಘಾತ! ಹೀಗಾಗಬಾರದಿತ್ತು!

[ಎಲ್ಲರು ಆಶ್ಚರ್ಯ ಆತಂಕಗಳಿಂದ ನೇಪಥ್ಯದ ಕಡೆನೋಡುತ್ತಿದಂತೆ ರಂಗದಲ್ಲಿ ಕತ್ತಲಾಗಿ ಹಿಂಭಾಗದ ಬಿಳಿಯ ತೆರೆಯ ಮೇಲೆ ಶೂಲದ ಮರದಲ್ಲಿ ನೇತಾಡುತ್ತಿರುವ ರಾಜನ ಮೃತ ದೇಹ ಕಾಣುವುದು.]

ಮೇಳದವರು ಹಾಡುವರು

ಅವಿಚಾರ ಅವಿವೇಕ ಕೊಂದಿತ್ತು ರಾಜನ್ನ
ರಾಣಿ ಆದಳು ರಾಜಮಾತೆ
ಊರು ಹುಟ್ಟಿಲ್ಲದ ಕೂಸಿಗಾಯಿತು ಪಟ್ಟ
ಜನರಿಗಿನ್ನೇನಿಲ್ಲ ಕೊರತೆ.

ತೆರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಬಂಧ

ಕವಲು ದಾರಿಯಲ್ಲಿ ವೃತ್ತಿರಂಗಭೂಮಿ

ರಂಗಭೂಮಿಯ ಪ್ರಗತಿಯು ವಿಲಾಸಿ ಮತ್ತು ವೃತ್ತಿ ಈ ಎರಡು ಪ್ರಕಾರಗಳ ಸಂಬಂಧ ಮತ್ತು ಪರಸ್ಪರವಾಗಿ ಒಂದರ ಮೇಲೆ ಮತ್ತೊಂದು ಬೀರುವ ಪ್ರಭಾವವನ್ನು ಅವಲಂಬಿಸಿದೆಯೆಂಬುದನ್ನು ಒಪ್ಪುವುದಾದರೆ ಕಳೆದ ಕೆಲವು ವರ್ಷಗಳಿಂದ ವಿಲಾಸೀ ರಂಗಭೂಮಿಯಲ್ಲಿ ಕಂಡುಬರುತ್ತಿರುವ ತೀವ್ರ ಚಟುವಟಿಕೆ ಹಾಗೂ ವೃತ್ತಿ ರಂಗಭೂಮಿಯನ್ನು ಆವರಿಸಿರುವ ನಿರುತ್ಸಾಹದ ಆಲಸ್ಯ, ಇವು ರಂಗಭೂಮಿಯ ಪ್ರಗತಿಯಲ್ಲಿ ಆಸಕ್ತಿ ಉಳ್ಳವರನ್ನು ಚಕಿತ ಗೊಳಿಸದಿರಲಾರದು.

ಕೆಲವು ವರ್ಷಗಳ ಹಿಂದೆ ರಾಜ್ಯದ ಮುಖ್ಯ ನಗರಗಳ ನಾಟಕ ಶಾಲೆ ಗಳಲ್ಲಿ ತಮ್ಮ ಜನಪ್ರಿಯ ನಾಟಕಗಳ ನೂರು ನೂರು ಪ್ರದರ್ಶನಗಳನ್ನು ನಡೆಸಿ ದಾಖಲೆ ಸ್ಥಾಪಿಸಿದ ವೃತ್ತಿ ನಾಟಕ ಸಂಸ್ಥೆಗಳು ಕಳೆದ ೨–೩ ವರ್ಷ ಗಳಿಂದ ಆ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಅದರ ಪ್ರತಿಯಾಗಿ ಒಂದೇ ಪ್ರಯೋಗದಲ್ಲಿ ಕೊನೆಗೊಳ್ಳುತ್ತಿದ್ದ ವಿಲಾಸೀ ಸಂಸ್ಥೆಗಳ ನಾಟಕಗಳು ಒಂದೇ ಸಾರಿಗೆ ಅಥವಾ ಕೆಲವು ವಾರಗಳ ಅಂತರದಲ್ಲಿ ಯಶಸ್ವಿಯಾಗಿ ಪುನಃ ಪುನಃ ಪ್ರದರ್ಶಿಸಲ್ಪಡುತ್ತಿವೆ.

ನಗರ ಪ್ರದೇಶಗಳಲ್ಲಿ ನಾಟಕ ಶಾಲೆಗಳ ದುಬಾರಿ ಬಾಡಿಗೆ, ವಾಸದ ಮನೆಗಳ ಅಭಾವ, ಪ್ರಕಟನೆಗಾಗಿ ತಗಲುವ ದುಬಾರಿ ವೆಚ್ಚ, ಇವು ಸ್ವಲ್ಪ ಮಟ್ಟಿಗೆ ಈ ಪರಿಸ್ಥಿತಿಯ ಕಾರಣವಾದರೂ ನಾಗರಿಕ ಪ್ರೇಕ್ಷಕರ ಒಲವು ವೃತ್ತಿ ನಾಟಕಗಳಿಂದ ದೂರವಾಗಿ ಕ್ರಮೇಣ ವಿಲಾಸಿ ನಾಟಕಗಳ ಕಡೆಗೆ ತಿರುಗುತ್ತಿದೆ ಎಂಬ ಸತ್ಯವನ್ನು ಒಪ್ಪಿಕೊಳ್ಳಲೇಬೇಕು. ನಗರ ಪ್ರದೇಶ ಗಳಲ್ಲಿ ಪ್ರಾರಂಭವಾಗಿರುವ ಈ ಪರಿವರ್ತನೆಯು ಮುಂದಿನ ಕೆಲವು ವರ್ಷ ಗಳಲ್ಲಿ ಜಿಲ್ಲಾ ತಾಲ್ಲೂಕು ಪ್ರದೇಶಗಳಿಗೆ ಹರಡಿ, ವೃತ್ತಿ ಸಂಸ್ಥೆಗಳಿಗೆ ಜೀವನಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾರವಾದ ಸಾಮಾನ್ಯ ಪ್ರೇಕ್ಷಕ ವರ್ಗವೂ ಈ ಹುಚ್ಚು ಹೊಳೆಯ ಮಹಾಪೂರದಲ್ಲಿ ಕೊಚ್ಚಿ ಹೋಗುವ ಸಂಭವ ಹೆಚ್ಚು ದೂರದಲ್ಲಿ ಇಲ್ಲ. ರಾಜಕೀಯ ರಂಗದ ಈ ಪರಿವರ್ತನೆಯು ಕ್ರಮ ಕ್ರಮವಾಗಿ ಚಿತ್ರ, ಸಂಗೀತ ಸಾಹಿತ್ಯ, ನಾಟಕ ಲಲಿತ ಕಲೆಗಳಿಗೂ ಹರಡುತ್ತಿರುವುದನ್ನು ದೇಶ ವಿದೇಶ ಗಳಲ್ಲಿ ಕಾಣುತ್ತಿದ್ದೇವೆ.

ಈ ಪರಿಸ್ಥಿತಿಯ ಕಾರಣವೇನು? ಈ ಅಪಾಯಕರ ಬೆಳವಣಿಗೆಯನ್ನು ತಡೆಗಟ್ಟಿ ವೃತ್ತಿ ನಾಟಕಗಳು ತಮ್ಮ ಹಿಂದಿನ ಸ್ಥಾನಮಾನ ಗೌರವಗಳನ್ನು ಪುನಃ ಪಡೆಯಲು ಅನುಸರಿಸಬೇಕಾದ ಕಾರ್ಯ ವಿಧಾನವೇನು? ಎಂಬು ದನ್ನು ಈಗ ಯೋಚಿಸಬೇಕಾಗಿದೆ.

ನಡೆದು ಬಂದ ದಾರಿ

ಈ ಪರಿಸ್ಥಿತಿಯ ಕಾರಣಗಳನ್ನು ಹುಡುಕುವುದರಲ್ಲಿ ಕಳೆದ ಒಂದು ನೂರು ವರ್ಷಗಳಲ್ಲಿ ವೃತ್ತಿ ರಂಗಭೂಮಿ ನಡೆದು ಬಂದ ದಾರಿಯನ್ನು ಗಮ ನಿಸಬೇಕಾಗುತ್ತದೆ. ಹಿಂದಿನಿಂದ ನಮ್ಮಲ್ಲಿ ಪ್ರಚಾರದಲ್ಲಿರುವ ಯಕ್ಷಗಾನ, ಬಯಲಾಟ, ದೊಡ್ಡಾಟ ಮುಂತಾದ ಜಾನಪದ ನಾಟಕ ಪ್ರಕಾರಗಳಲ್ಲಿ ರಂಗ ಭೂಮಿಯ ಉಗಮವನ್ನು ಕಾಣಬಹುದಾದರೂ, ಪ್ರಪ್ರಥಮವಾಗಿ ಅದು ಆರಿಸಿಕೊಂಡ ನಾಟಕಗಳು ಸಂಸ್ಕೃತ ಮೂಲದಿಂದ ಬಂದವುಗಳಾದರೂ, ಪ್ರಯೋಗದಲ್ಲಿ ಅಳವಡಿಸಿಕೊಂಡ ರಂಗ ಸಜ್ಜಿಕೆ, ವೇಷ ಭೂಷಣಗಳು, ಅಭಿ ನಯ, ಇವು ಭಾರತೀಯ ನಾಟ್ಯ ಪದ್ಧತಿಗೆ ಹೊರತಾಗಿ ಪಾಶ್ಚಾತ್ಯ ರಂಗ ಭೂಮಿಯ ಅನುಕರಣದಲ್ಲಿ ಸಫಲತೆ ಕಾಣುವ ಪ್ರಯತ್ನ ನಡೆಯಿತು. ಈ ಅನಪೇಕ್ಷಿತ, ಅನುಚಿತ ಪ್ರವೃತ್ತಿಯೇ ನಮ್ಮ ರಂಗಭೂಮಿಯ ಸಮಸ್ಯೆಗಳ ಮೂಲವೆಂದರೆ ತಪ್ಪಾಗಲಾರದು. ಈ ಮಾತು ವೃತ್ತಿ ಮತ್ತು ವಿಲಾಸೀ ಈ ಎರಡು ಪ್ರಕಾರಗಳಿಗೂ ಅನ್ವಯಿಸುತ್ತದೆ.

ಸ್ಥಳದಿಂದ ಸ್ಥಳಕ್ಕೆ ಚಲನೆ, ಊಟೋಪಚಾರಗಳು, ಕ್ರೀಡೆ, ಕಾಳಗ, ಮುಂತಾದವು ರಂಗದ ಮೇಲೆ ವಾಸ್ತವಿಕ ವಸ್ತುಗಳ ಉಪಯೋಗವಿಲ್ಲದೆ ಅಭಿನಯದಿಂದಲೇ ನಡೆಯಬೇಕೆಂಬುದು ಭಾರತೀಯ ನಾಟ್ಯ ಪದ್ಧತಿಯ ತಿರುಳು. ರಂಗಸಜ್ಜಿಕೆಗಾಗಿ ತಿಪ್ಪರಲಾಗ ಹಾಕಿ, ಬೊಂಬಾಯಿ ನಗರದ ಬೀದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ನಾರದನನ್ನು ಎಳೆ ತಂದು ನಿಲ್ಲಿಸಿ ಹಾಡಿಸುವ, ಬಟ್ಟೆ ಕಾಗದಗಳ ಸಹಾಯದಿಂದ ಚಿತ್ರಕಲೆಯ ಅಪಹಾಸ್ಯದಂತೆ ಕಾಣುವ ಮರ ಗಿಡಗಳ ನಡುವೆ ದುಷ್ಯಂತ ಶಕುಂತಲೆಯರು ಪ್ರೇಮಾಲಾಪ ನಡೆಸುವ ರಸಾಭಾಸಕ್ಕೆ ಎಡೆ ಕೊಡದೆ, ದೃಶ್ಯವನ್ನು ವರ್ಣಿಸುವ ಕವಿ ವಾಣಿಯಲ್ಲಿ ಹೆಚ್ಚು ಭರವಸೆ ಇಡುವುದು ಭಾರತೀಯ ನಾಟ್ಯ ಕಲೆಯ ವಿಧಾನ. ಈ ಶತಮಾನದ ಮೊದಲ ದಶಕದಲ್ಲಿ ಪ್ರಾರಂಭವಾದ ಈ ಪಾಶ್ಚಾತ್ಯ ಅನುಕರಣ ಪದ್ಧತಿ, ಆ ಮೇಲಿನ ವರ್ಷಗಳಲ್ಲಿ ವ್ಯಾಪಕವಾಗಿ ಬೆಳೆದು, ನಟ ನಾಟಕಗಳನ್ನು ಹಿಂದಕ್ಕೆ ತಳ್ಳಿ ರಂಗ ಸಜ್ಜಿಕೆಯೇ ನಾಟಕ ಎಂಬ ಆತ್ಮ ವಿನಾಶದ ನಂಬಿಕೆ ಜನರಲ್ಲಿ, ಪ್ರಯೋಕ್ತೃಗಳಲ್ಲಿ ತಲೆಯೆತ್ತಿತು. ಅಭಿನಯ ಕಾಣೆಯಾಯಿತು. ನಾಟಕದ ಹಿರಿಮೆ ಮಣ್ಣುಗೂಡಿತು. ಪ್ರಯೋಗದ ಯಶಸ್ಸಿಗೆ ನಟ ನಾಟಕ ಕವಿಗಳಿಗಿಂತ ಚಿತ್ರಕಾರ ದೃಶ್ಯ ಯೋಜಕರ ಪಾತ್ರ ಮುಖ್ಯವೆಂಬ ತಪ್ಪು ಕಲ್ಪನೆ ತಲೆಯೆತ್ತಿತು.

ಈ ಕೆಟ್ಟ ಕನಸಿನಿಂದ ಮೊದಲು ಎಚ್ಚೆತ್ತು ಪ್ರಯೋಗದಲ್ಲಿ ಹೊಸ ಹಾದಿಯನ್ನು ಹುಡುಕುವ ಪ್ರಯತ್ನ ನಡೆಸಿದ್ದು ವಿಲಾಸೀ ಸಂಸ್ಥೆಗಳೆಂಬುದರಲ್ಲಿ ಅಚ್ಚರಿಯೇನೂ ಇರುವುದಿಲ್ಲ. ಹಣ ಗಳಿಸುವ ಲೋಭ ದೃಷ್ಟಿಯಿಲ್ಲದೆ ಅಲ್ಪ ವೆಚ್ಚದಲ್ಲಿ ನಾಟಕವೊಂದನ್ನು ರಂಗಕ್ಕೆ ತರುವ ಪ್ರವೃತ್ತಿ ಬೆಳೆದಾಗ ಸೃಜನಾತ್ಮಕ ಪ್ರಕೃತಿ (Creative activity) ಸಹಜವಾಗಿ ಎಚ್ಚರಗೊಳ್ಳುತ್ತದೆ. ಮೊದ ಮೊದಲಿಗೆ ಪಾಶ್ಚಾತ್ಯ ನಾಟಕಗಳ ಕಡೆ ಹರಿದ ದೃಷ್ಟಿ ಈಗೀಗ ಭಾರತೀಯ ನಾಟ್ಯ ಪದ್ಧತಿಯನ್ನು ರಕ್ಷಿಸಿಕೊಂಡು ಬಂದ ಯಕ್ಷಗಾನ ಬಯಲಾಟ, ದೊಡ್ಡಾಟಗಳ ಕಡೆಗೆ ತಿರುಗಿರುವುದು ಶುಭ ಸೂಚಕ,

ಭಾರತೀಯ ನಾಟ್ಯ ಪದ್ಧತಿ

ಈಗ ವೃತ್ತಿ ರಂಗಭೂಮಿಯ ಮೇಲೆ ಪ್ರದರ್ಶಿತವಾಗುತ್ತಿರುವ ನಾಟಕಗಳು ಪ್ರಯೋಗದ ಮುಖ್ಯಾಂಗಗಳಾದ ರಂಗಸಜ್ಜಿಕೆ, ಅಭಿನಯ, ದೃಶ್ಯ ಯೋಜನೆ, ಸಂಭಾಷಣೆ, ನಾಟ್ಯ, ಸಂಗೀತ, ಇವುಗಳಲ್ಲಿ ಒಂದರಲ್ಲಿಯೂ ಭಾರತೀಯತೆಯನ್ನು ಉಳಿಸಿಕೊಂಡಿಲ್ಲವೆಂದು ವಿಷಾದದಿಂದ ಹೇಳದೆ ವಿಧಿಯಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತೀಯ ನಾಟ್ಯ ಪದ್ಧತಿಯಲ್ಲಿ ಪಾರ್ಶ್ವಕ್ಕೆ ಸರಿಯುವ ಮುಂದಿನ ಜವನಿಕೆ, ನಾಟಕದ ವಸ್ತುವಿಗೆ ಅನುಗುಣವಾಗಿ ಎಲ್ಲ ದೃಶ್ಯಗಳಿಗೂ ಸಾಮಾನ್ಯವಾದ ಅಲಂಕಾರಗಳಿಂದ ಕೂಡಿದ ಹಿನ್ನೆಲಿಯ ಪರದೆ ಅಥವಾ ಬಾಗಿಲು ಜಾಲಂಧರಗಳಿಂದ ಕೂಡಿದ ಒಂದು ಗೋಡೆ, ಇವೆರಡರ ನಡುವೆ ಚಂದ್ರ ಸೂರ್ಯ ಗ್ರಹ ತಾರಕೆಗಳ ಚಿತ್ರಗಳಿಂದ ಅಲಂಕೃತವಾಗಿ ರಂಗದ ಛಾವಣಿಯಂತೆ ಕಾಣುತ್ತಿದ್ದ ಗಗನಿಕೆ, ಇಷ್ಟು ಮಾತ್ರ ಇರುತ್ತಿದ್ದುವು.

ಸುರುಳಿ ಸುತ್ತಿ ಮೇಲೆ ಹೋಗುವ ಪರದೆಗಳು; ಪಾರ್ಶ್ವದ ದೃಶ್ಯ ಪಟ್ಟಿಕೆಗಳು, ವಾಸ್ತವವನ್ನು ವಿಡಂಬಿಸುವ ಅಥವಾ ವಿಕೃತಗೊಳಿಸುವ ಬಣ್ಣದ ಪರದೆಗಳು, ಇದೆಲ್ಲ ಪಾಶ್ಚಾತ್ಯ ರಂಗಭೂಮಿಯಿಂದ ಪಾರ್ಸಿ ನಾಟಕ ಕಂಪನಿಗಳ ಮುಖಾಂತರ ನಾವು ಎರವಾಗಿ ಪಡೆದ ವಸ್ತುಗಳು, ಪಾತ್ರೋಚಿತವಾದ ವೇಷ ಭೂಷಣಗಳ ಹೊರತಾಗಿ ವಾಸ್ತವಿಕ ಗೃಹೋಪಕರಣಗಳನ್ನು ರಂಗದ ಮೇಲೆ ತರಲಾಗದೆಂದು ಭರತನು ಹೇಳಿದ್ದಾನೆ.

ಕುಡಿಯುವುದು, ತಿನ್ನುವುದು, ವಾಹನಗಳು ಅಥವಾ ಕಾಲ್ನಡಿಯಿಂದ ಸ್ಥಳದಿಂದ ಸ್ಥಳಕ್ಕೆ ಹೋಗುವುದು, ಪ್ರೇಮ, ಯುದ್ಧ, ಕಲಹ ಮುಂತಾದ ಎಲ್ಲ ಕೃತ್ಯಗಳೂ ನಾಟ್ಯದಿಂದಲೇ ನಡೆಯಬೇಕೆಂಬುದು ಭಾರತೀಯ ನಾಟ್ಯಪದ್ಧತಿಯ ಇನ್ನೊಂದು ನಿಬಂಧನೆ. ಇದರಿಂದ ರಂಗದ ಮೇಲೆ ಕಾಣಿಸಿಕೊಳ್ಳುವ ಎಲ್ಲ ಸ್ತ್ರೀ ಪುರುಷರಿಗೆ ನೃತ್ಯ ಮತ್ತು ಅಭಿನಯ ಶಿಕ್ಷಣ ಅಗತ್ಯವಾಗಿ ದೊರಕುತ್ತಿದ್ದುದರಿಂದ ಪಾತ್ರಧಾರಿಗಳು ರಂಗದ ಮೇಲೆ ನಡೆಯುವುದು, ನಿಲ್ಲುವುದು ಮುಂತಾದ ಸಾಮಾನ್ಯಕಾರ್ಯಗಳು ಕಲಾತ್ಮಕವಾಗುತ್ತಿದ್ದವು.

ಪಾತ್ರಗಳ ನಿಷ್ಕ್ರಮಣ ಪ್ರವೇಶಗಳು ದೃಶ್ಯ ಯೋಜನೆಯನ್ನು ಸೂಚಿಸುತ್ತಿದ್ದವು. ಸಂಭಾಷಣೆಯ ಗದ್ಯ ಭಾಗಗಳನ್ನು ಮಾತ್ರ ನಟನು ನುಡಿಯುತ್ತಿದ್ದನು. ಪದ್ಯ ಮತ್ತು ಗೀತ ಭಾಗಗಳನ್ನು ಹಿಮ್ಮೇಳದವರು ಹಾಡುತ್ತಿದ್ದರು. ನಟ ನಟಿಯರು ಆ ಆ ಭಾವಗಳನ್ನು ವ್ಯಕ್ತಪಡಿಸಲು ಕುಣಿಯುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗದ ಹಿಂಬದಿಯ ಗೋಡೆಯ ಹತ್ತಿರ ಹಿಮ್ಮೇಳದ ವಾದ್ಯಗಾರರು, ಗಾಯಕ ಗಾಯಕಿಯರು, ಸೂತ್ರಧಾರ ನಟಿ ಮುಂತಾದವರು ಅರ್ಧಚಂದ್ರಾಕೃತಿಯಲ್ಲಿ ನಿಲ್ಲುತ್ತಿದ್ದರು. ಇದರಿಂದ ರಂಗವು ಯಾವಾಗಲೂ ತುಂಬಿದಂತಿದ್ದು ನಾಟಕ ಕಳೆಕಟ್ಟುತ್ತಿತ್ತು. ವಸ್ತು ಮತ್ತು ಪಾತ್ರಗಳಿಗೆ ತಕ್ಕಂತೆ ಸಂಗೀತವು ಶಾಸ್ತ್ರೀಯವೋ ಜಾನಪದವೋ ಅಥವಾ ಅವೆರಡರ ಹಿತವಾದ ಮಿಶ್ರಣವೋ ಆಗಿರುತ್ತಿತ್ತು.

ಭರತ ನಾಟ್ಯದ ಅವತರಣಿಕೆಗಳೆಂದು ಹೇಳಬಹುದಾದ ಮೋಹಿನೀ ಆಟ, ಕೂಚಿಪುಡಿ, ಒಡಿಸ್ಸೀ, ಮಣಿಪುರಿ, ಈ ನಾಟ್ಯ ಪ್ರಕಾರಗಳಲ್ಲಿ ಯಕ್ಷಗಾನ, ಬಯಲಾಟ, ದೊಡ್ಡಾಟ ಮುಂತಾದ ಜಾನಪದ ನಾಟಕಗಳಲ್ಲಿ, ಮೇಲೆ ವಿವರಿಸಿದ ಭಾರತೀಯ ನಾಟ್ಯ ಪದ್ಧತಿಯು ಸಂಪೂರ್ಣವಾಗಿಯೋ ಅಂಶಿಕವಾಗಿಯೋ ಉಳಿದಿರುವುದನ್ನು ನಾವು ಈಗಲೂ ಕಾಣುತ್ತೇವೆ.

ಪಾರಸೀ ಸಂಸ್ಥೆಗಳ ಪ್ರಭಾವದಿಂದ ನಮ್ಮ ವೃತ್ತಿ ನಾಟಕ ಸಂಸ್ಥೆಗಳಲ್ಲಿ ಪ್ರಚಾರಕ್ಕೆ ಬಂದ ಪಾಶ್ಚಾತ್ಯ ನಾಟ್ಯ ಪದ್ಧತಿಯ ಮೊಸಳೆ ಹಿಡಿತದಿಂದ ಬಿಡುಗಡೆ ಹೊಂದಲು ವೃತ್ತಿ ನಾಟಕ ಸಂಸ್ಥೆಗಳು ಕ್ರಮ ಕ್ರಮವಾಗಿ ಭಾರತೀಯ ನಾಟ್ಯ ಪದ್ಧತಿಯನ್ನು ಏಕೆ ಅನುಸರಿಸಬಾರದು ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಸಹಜವಾಗಿ ಹುಟ್ಟುತ್ತದೆ.

ಪಾಶ್ಚಾತ್ಯ ನಾಟ್ಯ ಪದ್ಧತಿಯನ್ನು ತಮ್ಮ ಕಲಾಭಿವ್ಯಕ್ತಿಯ ಪರಾಕಾಷ್ಠೆಯೆಂದು ತಿಳಿದಿದ್ದ ವಿಲಾಸಿ ನಾಟಕ ಸಂಸ್ಥೆಗಳು, ಅವುಗಳಿಗೆ ನಾಟಕಗಳನ್ನು ಬರೆದು ಕೊಡುವ ನಾಟಕಕಾರರು, ತಾವೇ ರಚಿಸಿಕೊಂಡಿದ್ದ ಭ್ರಮೆಯ ಸುಳಿಯಿಂದ ಹೊರಗೆ ಬಂದು ಭಾರತೀಯ ನಾಟ್ಯ ಪದ್ಧತಿಯ ಅನೇಕ ಅಂಶಗಳನ್ನು ತಮ್ಮ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ ವೃತ್ತಿ ನಾಟಕ ಸಂಸ್ಥೆಗಳೂ ಆ ಮಾರ್ಗವನ್ನು ಏಕೆ ಹಿಡಿಯಬಾರದು ?

ನಾಗರಿಕ ಪ್ರೇಕ್ಷಕರ ಅಭಿರುಚಿ, ಆಸಕ್ತಿಗಳು ಈ ಪರಿವರ್ತನೆಗೆ ಅನುಕೂಲವಾಗಿರುವುದರಿಂದ ಈ ಬಗೆಯ ಹೊಸ ಪ್ರಯೋಗಗಳು ಜನಪ್ರಿಯವಾಗುವವೇ ? ಎಂದು ಸಂದೇಹ ಪಡಬೇಕಾಗಿಲ್ಲ. ವೃತ್ತಿಸಂಸ್ಥೆಗಳಿಗೆ ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವರ್ತನೆ ಎಷ್ಟರಮಟ್ಟಿಗೆ ಸಾಧ್ಯ ಎಂಬ ವಿಚಾರವನ್ನು ಆ ಸಂಸ್ಥೆಗಳ ದೃಷ್ಟಿಯಿಂದ ಮುಂದೆ ವಿವೇಚಿಸಿದೆ.

ರಂಗ ಸಜ್ಜಿಕೆ

ರಂಗಸಜ್ಜಿಕೆ ವೈಭವ ಆಡಂಬರಗಳಿಂದ ಕೂಡಿದ್ದರೆ ಮಾತ್ರವೇ ನಾಟಕ ಯಶಸ್ವಿಯಾಗುವುದೆಂಬ ಕಲ್ಪನೆ ಒಂದು ಕಾಲಕ್ಕೆ ವೃತ್ತಿ ಸಂಸ್ಥೆಗಳಿಗಿತ್ತು. ಅದರಿಂದಾಗಿ ಕೆಲವು ಸಂಸ್ಥೆಗಳು ನಟ ನಟಿ ನಾಟಕಗಳನ್ನು ಎರಡನೆಯ ವರ್ಗದ ಪ್ರಜೆಗಳೆಂದು ಪರಗಣಿಸಿ ರಂಗಸಜ್ಜಿಕೆಗಾಗಿ ಅಪಾರ ದ್ರವ್ಯವನು ವೆಚ್ಚ ಮಾಡಿದುದೂ ಉಂಟು.

ವೈಭವದ ರಂಗಸಜ್ಜಿಕೆ ನಟನ ಪ್ರಾಮುಖ್ಯತೆಯನ್ನು ಕುಂಠಿತಗೊಳಿಸಿ ನಾಟಕದ ಕಲಾಭಿವ್ಯಕ್ತಿಗೆ ಕಂಟಕವಾಗಬಹುದೆಂಬ ಅರಿವು ಈಗೀಗ ಪ್ರಯೋಕ್ತೃಗಳಲ್ಲಿ ಮೂಡುತ್ತಿದೆ. ರಂಗಸಜ್ಜಿಕೆಗೆ ವಿಶೇಷ ಪ್ರಾಮುಖ್ಯತೆ ಕೊಡುತ್ತಿದ್ದ ಪಾಶ್ಚಾತ್ಯ ಪ್ರಯೋಕ್ತೃಗಳಲ್ಲಿ (ಅವರೆಲ್ಲ ವೃತ್ತಿ ರಂಗವನ್ನು ಪ್ರತಿನಿಧಿಸುವವರೇ) ಈಗ ಸರಳ ರೀತಿಯ ಸಾಮಾನ್ಯ ರಂಗಸಜ್ಜಿಕೆಯಲ್ಲಿ, ಅನೇಕ ಸಂದರ್ಭಗಳಲ್ಲಿ ಬೂದು ಅಥವಾ ನೀಲಿ ಬಣ್ಣದ ಒಂದೇ ತೆರೆಯ ಮುಂದೆ ನಾಟಕಗಳನ್ನು ಅಭಿನಯಿಸುವರೆಂದು ಕೇಳಿದ್ದೇನೆ. ವಿಲಾಸಿ ರಂಗದಲ್ಲಿ ಇಂತಹ ಪ್ರಯೋಗಕ್ಕೆ ಕೆಲವು ಯಶಸ್ವಿ ನಿದರ್ಶನಗಳಿವೆ. ಬೆಂಗಳೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ರವೀಂದ್ರ ಕಲಾಕ್ಷೇತ್ರದ ಹೊರಾಂಗಣದಲ್ಲಿ ಈಚೆಗೆ ಅಭಿನಯಿಸಲ್ಪಟ "ಸಂಕ್ರಾಂತಿ", "ಜೋಕುಮಾರಸ್ವಾಮಿ" ಮತ್ತು "ಈಡಿಪಸ್" ನಾಟಕಗಳು ಇದಕ್ಕೆ ನಿದರ್ಶನಗಳು.

ರಂಗಸಜ್ಜಿಕೆಯ ಸಹಾಯವಿಲ್ಲದೆ ನಾಟಕಗಳನ್ನು ಅಭಿನಯಿಸುವ ಈ ಭಾರತೀಯ ಸಂಪ್ರದಾಯವನ್ನು ನಮ್ಮ ಜಾನಪದ ಯಕ್ಷಗಾನ ಬಯಲಾಟಗಳು ಇಂದಿಗೂ ಉಳಿಸಿಕೊಂಡು ಬಂದಿವೆ.

ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ರಂಗಸಜ್ಜಿಕೆಗಾಗಿ ವೃತ್ತಿ ಸಂಸ್ಥೆಗಳು ಈಗ ಹೆಚ್ಚು ಹಣ ವೆಚ್ಚಮಾಡಬೇಕಾಗುತ್ತದೆ. ಹಾಗೆ ವೆಚ್ಚ ಮಾಡಿದರೂ ಬಹುತೇಕ ಸಂದರ್ಭಗಳಲ್ಲಿ ರಂಗಸಜ್ಜಿಕೆ ಕಲಾತ್ಮಕವಾಗದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಮರ್ಶಕರ ಟೀಕೆಗೊಳಗಾದುದನ್ನು ನಾನು ಕಂಡಿದ್ದೇನೆ. ರಂಗಸಜ್ಜಿಕೆಯ ರಚನೆಗಾಗಿ ಹಣ ವೆಚ್ಚ ಮಾಡಲು ಸಿದ್ಧವಿಲ್ಲದ ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ಸಾಮಾಜಿಕ ನಾಟಕಗಳಿಗೆ ಸೀಮಿತಗೊಳಿಸಿದುದೂ ಉಂಟು. ಇದರ ಪರಿಣಾಮವಾಗಿ ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳು ವೃತ್ತಿ ರಂಗದಲ್ಲಿ ಈಗ ಹೆಚ್ಚಿಗೆ ಕಾಣಿಸಿಕೊಳ್ಳುತ್ತಿಲ್ಲ.

ಸೂಚ್ಯವಾದ, ಸರಳವಾದ ರಂಗ ಸಜ್ಜಿಕೆಯನ್ನು ರಂಗ ಪ್ರಕಾಶದ ಕಲಾತ್ಮಕ ಸಂಯೋಜನೆಯಿಂದ ಭವ್ಯವಾಗಿ ಕಾಣುವಂತೆ ಮಾಡುವುದು ಸಾಧ್ಯ. ರಂಗ ದೀಪಗಳ ಸಂಯೋಜನೆ ಈಗ ವಿಶಿಷ್ಟ ಕಲೆಯಾಗಿ ರೂಪು ಗೊಂಡಿದೆ. ರಂಗಸಜ್ಜಿಕೆಯ ರಚನೆಗಾಗಿ ಹಣ "ಪೋಲು" ಮಾಡುವುದನ್ನು ನಿಲ್ಲಿಸಿ, ರಂಗ ಪ್ರಕಾಶಕ್ಕೆ ಅಗತ್ಯವಾದ ದೀಪೋಪಕರಣಗಳ ಕಡೆಗೆ ಹೆಚ್ಚು ಗಮನ ಕೊಡುವುದು ಈಗ ವೃತ್ತಿರಂಗ ಭೂಮಿಯಲ್ಲಿ ನಡೆಯಬೇಕಾದ ಮೊದಲ ಸುಧಾರಣೆ.

ಅಭಿನಯ

ಅಭಿನಯದ ವಿಚಾರದಲ್ಲಿಯೂ ಜಾನಪದ ರಂಗಭೂಮಿಯು ವೃತ್ತಿ ರಂಗಭೂಮಿಗೆ ಕೆಲವು ಉಪಯುಕ್ತ ಸಲಹೆಗಳನ್ನು ನೀಡಬಲ್ಲುದು.

ರಂಗಸಜ್ಜಿಕೆಯ ವೈಭವ, ವಿನ್ಯಾಸಗಳಿಗೆ ಮಾರುಹೋದ ಬಹು ಮಂದಿ ನಟರು "ಅಭಿನಯ" ಏನೆಂಬುದನ್ನೇ ಮರೆಯುತ್ತಿದ್ದಾರೆ. ಒಂದು ಕಡೆ ಸಿನಿಮಾ ನಟರನ್ನು ಅನುಸರಿಸುವ ಗೀಳು, ಇನ್ನೊಂದು ಕಡೆ ವಾಸ್ತವಿಕತೆ Realism ಯ ಮೋಹ, ಅವರ ಕಲಾಭಿವ್ಯಕ್ತಿಯನ್ನು ಕುಂಠಿತಗೊಳಿಸಿವೆ.

ಭಾರತೀಯ ನಾಟ್ಯ ಪದ್ಧತಿಯು "ವಾಸ್ತವಿಕತೆ"ಯನ್ನು ಕಲಾ ಸಾಧನೆಗಾಗಿ ಅಂಗೀಕರಿಸಿಲ್ಲ. ರಸೋತ್ಪಾದಕವಾದ ವೈಚಿತ್ರ್ಯ ವಿಶೇಷಗಳೇ ಕಲೆಯ ಜೀವಾಳವೆಂಬುದು ಭಾರತದ ಸಿದ್ಧಾಂತ. ನಾಟ್ಯ ಕಲೆಗೂ ಈ ಮಾತು ಅನ್ವಯಿಸುತ್ತದೆ.

ನಟ ವರ್ಗದ ಚಲನ ವಲನಗಳು, ವಾಸ್ತವಿಕತೆಯಿಂದ ವಿಭಿನ್ನವೂ ಕಲಾತ್ಮಕವೂ ಆಗಿರಬೇಕೆಂದು ನಾಟ್ಯ ಶಾಸ್ತ್ರ ಹೇಳುತ್ತದೆ. ನಾಟ್ಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಸ್ತ್ರೀಯ ರೂಪಗಳಲ್ಲಿ, ಯಕ್ಷಗಾನ ಮುಂತಾದ ಜಾನಪದ ನಾಟಕಗಳಲ್ಲಿ ಈ ಅಭಿನಯ ಪದ್ಧತಿ ಈಗಲೂ ಉಳಿದು ಬಂದಿದೆ. ಜಾನಪದ ನಾಟಕಗಳಿಂದ ಪ್ರೇರಣೆ ಪಡೆದ ವೃತ್ತಿ ರಂಗಭೂಮಿ ಆರಂಭಿಕ ದೆಶೆಯಲ್ಲಿ ನಟ ನಟಿಯರ ಪ್ರವೇಶ ನಿಷ್ಕ್ರಮಣಗಳಲ್ಲಿ, ರಂಗದ ಮೇಲೆ ಅವರ ಚಲನ ವಲನಗಳಲ್ಲಿ ನಾಟ್ಯಾಭಿನಯವನ್ನು ಅನುಸರಿಸುತ್ತಿದ್ದವು. ಪಾಶ್ಚಾತ್ಯ ನಾಟ್ಯ ಪದ್ಧತಿಯಿಂದ ಪ್ರಭಾವಿತರಾದ ನಟರು, ನಾಟಕಕಾರರು, ನಿರ್ದೇಶಕರು. "ವಾಸ್ತವಿಕತೆ"ಯ ಪ್ರಯೋಗಕ್ಕೆ ತೊಡಗಿದಾಗ ಹಿಂದಿನ ಸಂಪ್ರದಾಯ ಮಾಯವಾಗಿ ಕ್ರಮ ಕ್ರಮವಾಗಿ ಈಗಪ್ರಚಾರದಲ್ಲಿರುವ "ನೀರಸಾಭಿನಯ" ಪ್ರಾರಂಭವಾಯಿತು.

ಪೌರಾಣಿಕ ಐತಿಹಾಸಿಕ ನಾಟಕಗಳಲ್ಲಿ ಪಾತ್ರೋಚಿತವಾದ ಗಾಂಭೀರ್ಯ, ಘನತೆ, ಶೌರ್ಯ, ಸಾಹಸಗಳನ್ನು ಸೂಚಿಸುವ ನಡೆ, ನುಡಿ ಮುಖಭಂಗಿ ಅಂಗ ಚಲನೆಗಳು ಅಗತ್ಯ. ಇವುಗಳನ್ನು ಅಭಿನಯದಲ್ಲಿ ಅಳವಡಿಸಿಕೊಳ್ಳುವುದು ದೀರ್ಘಸಾಧನೆಯಿಂದ ಮಾತ್ರವೇ ಸಾಧ್ಯ. ಒಂದಿಷ್ಟು ಅಳತೆ ತಪ್ಪಿದರೂ ಅಭಿನಯವು ಅತಿರೇಕದಂತೆ ಕಂಡು ರಸಾಭಾಸವಾಗುವ ಸಂಭವ ಉಂಟು.

ಪ್ರವೇಶ ನಿಷ್ಕ್ರಮಣಗಳಲ್ಲಿ, ರಸೋತ್ಕರ್ಷದ ಸನ್ನಿವೇಶಗಳಲ್ಲಿ ನಾಟ್ಯವನ್ನು ಬಳಸಿಕೊಂಡು ಜಾನಪದ ರಂಗಭೂಮಿಯು ಈ ಸಮಸ್ಯೆಯನ್ನು ಪರಿಹರಿಸಿಕೊಂಡಿದೆ. ಜಾನಪದ ಶೈಲಿಯಲ್ಲಿ ಬರೆಯಲ್ಪಟ್ಟು, ನಾಗರಿಕ ಕಲಾವಿದರಿಂದ ಬೆಂಗಳೂರಲ್ಲಿ ಅಭಿನಯಿಸಲ್ಪಟ್ಟ ಚಂದ್ರ ಶೇಖರ ಕಂಬಾರರ "ಜೋಕುಮಾರ ಸ್ವಾಮಿ" ಇದಕ್ಕೆ ನಿದರ್ಶನವಾಗಬಲ್ಲದು. ನಾಟ್ಯೋಚಿತವಾದ ಪ್ರವೇಶ ನಿಷ್ಕ್ರಮಣ ಚಲನವಲನಗಳಿಂದ ಪಾತ್ರಗಳ, ಮುಖ್ಯವಾಗಿ ಸ್ತ್ರೀ ಪಾತ್ರಗಳ, ರಸೋತ್ಕರ್ಷ ಆಕರ್ಷಕತೆಗಳು ಹೇಗೆ ಹೆಚ್ಚುವುವೆಂಬುದನ್ನು ಈ ಪ್ರಯೋಗದಲ್ಲಿ ಕಾಣಬಹುದಾಗಿತ್ತು. ಸಾಮಾನ್ಯರಂತೆ ಪಂಡಿತ ಪ್ರೇಕ್ಷಕರೂ ಈ ಪ್ರಯೋಗವನ್ನು ಮೆಚ್ಚಿಕೊಂಡರೆಂಬುದು ಗಮನಾರ್ಹ.

ನಾಟಕದಲ್ಲಿ ಸಂಗೀತ ಇರಲೇಬೇಕು ಎಂಬ ಕಾಲವೂ ಒಂದಿತ್ತು. ಒಂದು ಗೀತವನ್ನೋ ಪದ್ಯವನ್ನೋ ಹತ್ತಾರು ನಿಮಿಷಗಳ ಕಾಲ ಹಾಡಿ ಪ್ರೇಕ್ಷಕರನ್ನು ತಲ್ಲೀನಗೊಳಿಸಬಲ್ಲ ನಟ ನಟಿಯರು ಆಗ ಅನೇಕರಿದ್ದರು. ಹಾಡಬಲ್ಲವರ ಅಭಾವದಿಂದಾಗಿ ವಿಲಾಸಿ ರಂಗದಲ್ಲಿ ಸಂಪೂರ್ಣವಾಗಿ, ವೃತ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗದಲ್ಲಿ ಅಂಶಿಕವಾಗಿ ಸಂಗೀತವು ಅದೃಶ್ಯವಾಗುತ್ತಿದೆ. ನಾಟಕದಲ್ಲಿ ಸಂಗೀತ ಇದ್ದೇ ಇರಬೇಕೆನ್ನುವವರಿಗೂ ಅದರ ಬಳಕೆ ಒಂದು ಸಮಸ್ಯೆಯಾಗಿದೆ. ಈ ವಿಚಾರದಲ್ಲಿ ಜಾನಪದ ರಂಗಭೂಮಿ ಅನುಸರಿಸುತ್ತಿರುವ ಸಂಪ್ರದಾಯ ವೃತ್ತಿ ರಂಗಭೂಮಿಗೆ ಮಾರ್ಗದಶಕವಾಗಿದೆ.

ಜಾನಪದ ರಂಗದಲ್ಲಿ ಎಲ್ಲ ಗೀತಗಳನ್ನೂ ಅದು ಸಾಮೂಹಿಕವಾಗಲಿ, ಒಬ್ಬನು ಹೇಳುವುದಾಗಲಿ, ಸಂವಾದವಾಗಲಿ, ಸೂತ್ರಧಾರ ಮತ್ತು ಹಿಮ್ಮೇಳದವರು ಹಾಡುತ್ತಾರೆ. ಭರತ ನಾಟ್ಯದಲ್ಲಿ ಅದನ್ನು ಅನುಕರಿಸುವ ಜಾನಪದ ನಾಟ್ಯ ರೂಪಕಗಳಲ್ಲಿ ಈಗಲೂ ಪ್ರಚಾರದಲ್ಲಿರುವ ಈ ಸಂಪ್ರದಾಯಕ್ಕೆ ಬಹು ಕಾಲದ ಪ್ರಾಚೀನತೆ ಇರುತ್ತದೆ.

ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ ವೃತ್ತಿ ಸಂಸ್ಥೆಗಳು ಈ ಸಂಪ್ರದಾಯವನ್ನು ಬಳಸಿಕೊಳ್ಳುವುದರಿಂದ ಸಂಗೀತದ ಶ್ರಾವ್ಯತೆ ಸ್ಪಷ್ಟತೆಗಳನ್ನು ರಕ್ಷಿಸಿಕೊಳ್ಳುವುದು ಸಾಧ್ಯ. ಪ್ರೇಕ್ಷಕರಲ್ಲಿ ಕೆಲವರಾದರೂ ಅಪೇಕ್ಷಿಸುವ ಸಂಗೀತವೂ ನಾಟಕದಲ್ಲಿದ್ದಂತಾಗುವುದು.

ಹಿಮ್ಮೇಳದವರು ಹಾಡುವಾಗ ಪಾತ್ರಧಾರಿಗಳು ಕುಣಿಯಲೇಬೇಕೆಂಬ ನಿಯಮವೇನೂ ಇರುವುದಿಲ್ಲ. ನಟ ನಟಿಯರು ಸನ್ನಿವೇಶಕ್ಕೆ ಅನುಗುಣವಾಗಿ, ಪ್ರತಿಭೆಯಿಂದ ರಸಭಾವಗಳನ್ನು ವ್ಯಕ್ತಪಡಿಸುವುದೂ ಸಾಧ್ಯ.

ಜಾನಪದ ನಾಟಕಗಳಂತೆ ಇತ್ತೀಚಿನ ಕೆಲವು ಆಧುನಿಕ ನಾಟಕಗಳಲ್ಲಿ ಭಾಗವತನೋ ಮತ್ತು ಹಿಮ್ಮೇಳದವರೊ ರಂಗದ ಒಂದು ಪಾರ್ಶ್ವದಲ್ಲಿ ನಿಂತು ಅಥವಾ ಕುಳಿತು ಪ್ರೇಕ್ಷಕರಿಗೆ ಪಾತ್ರಗಳ ಪರಿಚಯ ಮಾಡಿಕೊಡುವ ಸಂಪ್ರದಾಯವಿದೆ. ನಾಟಕ ವೀಕ್ಷಕರು ಇದನ್ನು ಮೆಚ್ಚಿಯೂ ಇದ್ದಾರೆ. ವೃತ್ತಿ ಸಂಸ್ಥೆಗಳು ಈ ವಿಧಾನವನ್ನು ರಂಗದ ಮೇಲೆ ತರಲು ಪ್ರಯತ್ನಿಸಬೇಕು.

ನಾಟಕಗಳ ಆಯ್ಕೆ ಮತ್ತು ಪ್ರಯೋಗ

ನಾಟಕಗಳನ್ನು ಪ್ರಯೋಗಕ್ಕಾಗಿ ಆರಿಸಿಕೊಳ್ಳುವುದರಲ್ಲಿ ವೃತ್ತಿ ಸಂಸ್ಥೆಗಳ ದೃಷ್ಟಿ ಪ್ರಾದೇಶಿಕ ಪರಿಸರ ಪರಿಚಯಗಳಿಗೆ ಸೀಮಿತವಾಗುತ್ತಿದೆ. ಉತ್ತರದ ಸಂಸ್ಥೆಗಳು ಮೈಸೂರು ಕಡೆಯ ನಾಟಕಗಳನ್ನು, ಮೈಸೂರಿನ

Sri Vidyabharathi Book Centre, Sringeri

CC-O. In Public Domain. Digitized by eGangotri
ಸಂಸ್ಥೆಗಳು ಉತ್ತರದ ಕಡೆಯ ನಾಟಕಗಳನ್ನು ಪ್ರಯೋಗಕ್ಕೆ ಆರಿಸಿಕೊಳ್ಳು ವುದು ಈಗ ಅಪರೂಪದ ಘಟನೆಗಳಾಗಿವೆ. ಈ ಪ್ರಾದೇಶಿಕ ಭಾವನೆ ಕೊನೆಗೊಳ್ಳುವುದು ರಂಗಭೂಮಿಯ ಹಿತ ದೃಷ್ಟಿಯಿಂದ ಅಗತ್ಯ.

ಪ್ರಯೋಗಾರ್ಹವಾದ ನಾಟಕಗಳಿಗೆ ಕನ್ನಡದಲ್ಲಿ ಕೊರತೆಯಿಲ್ಲ. ಇವುಗಳಲ್ಲಿ ಪ್ರಯೋಗಕ್ಕೆ ಯಾವ ನಾಟಕವನ್ನೇ ಆರಿಸಿಕೊಳ್ಳಲಿ, ಅದನ್ನು ರಂಗಭೂಮಿಗೆ ಅಳವಡಿಸಿ ಕೊಳ್ಳುವುದರಲ್ಲಿ ಕೆಲವು ಮಾರ್ಪಾಡುಗಳು ಅವಶ್ಯಕವಾಗುವುವು. ವಸ್ತುವನ್ನು ಆಧರಿಸಿ ಪ್ರಯೋಗದ ಶೈಲಿಯನ್ನು ನಿರ್ಧರಿಸಬೇಕಾಗುವುದು. ಪಾತ್ರಗಳ ಆಯ್ಕೆ, ಅಭ್ಯಾಸ, ರಂಗ ಸಜ್ಜಿಕೆಯರಚನೆ, ಈ ಕಾರ್ಯಗಳು ವೃತ್ತಿ ಸಂಸ್ಥೆಗಳಲ್ಲಿ ಸಮರ್ಪಕವಾಗಿ ನಡೆಯುತ್ತಿಲ್ಲ.

ಸಮರ್ಥ ನಿರ್ದೇಶಕನ ನೇತೃತ್ವದಲ್ಲಿ ನಡೆಯಬೇಕಾದ ಈ ಕಾರ್ಯಗಳು, ಈಗ ಸಂಸ್ಥೆಯ ಯಾವನೊಬ್ಬ ನಟನಿಂದಲೋ, ಅಥವಾ ಪ್ರಯೋಗದ ಪರಿಚಯವೇ ಇಲ್ಲದ ಸಂಸ್ಥೆಯ ಮಾಲೀಕನಿಂದಲೋ ನಾಟಕಕಾರನಿಂದಲೋ ನಡೆಯುತ್ತಿವೆ. ಚಲನ ಚಿತ್ರದಂತೆ ಒಂದು ನಾಟಕದ ಯಶಸ್ಸು ನಿರ್ದೇಶಕನನ್ನು ಅವಲಂಬಿಸಿದೆಯೆಂಬುದನ್ನು ವೃತ್ತಿ ಸಂಸ್ಥೆಗಳು ಅರಿತು ತಮ್ಮ ಪ್ರಯೋಗ ವಿಧಾನವನ್ನು ಮಾರ್ಪಡಿಸಿಕೊಳ್ಳುವುದರಿಂದ ಮಾತ್ರವೇ ವೃತ್ತಿ ನಾಟಕಗಳು ತಮ್ಮ ಜನಪ್ರಿಯತೆಯನ್ನು ಉಳಿಸಿಕೊಳ್ಳುವುದು, ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಾಗುತ್ತದೆ.

ಬಿ. ಪುಟ್ಟಸ್ವಾಮಯ್ಯ

(೧೯೭೨ರ "ಕರ್ಮವೀರ" ದೀಪಾವಳಿ ಸಂಚಿಕೆಯಿಂದ ಉದ್ಧೃತ)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಲೇಖಕರ ಇತರ ಬರಹಗಳು

ಕಾದಂಬರಿ

ರೂಪಲೇಖಾ (ಐತಿಹಾಸಿಕ)
ತೇಜಸ್ವಿನಿ ,,
ಚಿನ್ನಸುಪರ್ಣಾ
ಪ್ರಭುದೇವ
ಚಹಾ ಕಟ್ಟಿದ ಸಾಮ್ರಾಜ್ಯ
ಚಾಲುಕ್ಯ ತ್ರೈಲಪ
ಪ್ರಿಯದರ್ಶಿರಾಜ
ಉದಯರವಿ
ರಾಜ್ಯಪಾಲ
ಕಲ್ಯಾಣೇಶ್ವರ
ನಾಗಬಂಧ
ಮುಗಿಯದ ಕನಸು
ಕ್ರಾಂತಿ ಕಲ್ಯಾಣ
ಅಭಿಸಾರಿಕೆ (ಸಾಮಾಜಿಕ)
ಸುಧಾಮಯಿ ,,
ಹೂವು ಕಾವು

ಕಥಾ ಸಂಕಲನ

ಧ್ರುವಸ್ವಾಮಿನಿ
ಇತಿಹಾಸದ ಪುಟಗಳಿಂದ
ನಾಟ್ಯಮೋಹಿನಿ

ನಾಟಕ

ರಾಣಿ
ಕುರುಕ್ಷೇತ್ರ
ದಶಾವತಾರ
ಅಕ್ಕಮಹಾದೇವಿ
ಸಂಪೂರ್ಣ ರಾಮಾಯಣ
ಪ್ರಭುದೇವ
ಷಾಜಹಾನ್
ಚಿರಕುಮಾರ ಸಭಾ
ಸತೀತುಲಸಿ
ಯಾಜ್ಞಸೇನಿ
ಬಭ್ರುವಾಹನ
ಪ್ರಚಂಡ ಚಾಣಕ್ಯ
ಗೌತಮಬುದ್ಧ
ಬಿಡುಗಡೆಯ ಬಿಚ್ಚುಗತ್ತಿ
ತಾರಕವಧೆ
ಅಭಿನೇತ್ರಿ

ಮಕ್ಕಳಿಗಾಗಿ

ಶ್ರೀದುರ್ಗಾ
ಚಂಗಲಿಯ ಬಲಿದಾನ

Sri Vidyabharathi Book Centre, Sringeri